ಗುರುವಾರ, ಏಪ್ರಿಲ್ 22, 2021 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಮನವಮಿ ವಿಶೇಷ
ರಾಮನವಮಿ ಪ್ರಯುಕ್ತ ರಾಮನ ಭಕ್ತರೊಬ್ಬರು ಆಂಜನೇಯನ ವೇಷ ಧರಿಸಿ ಬೆಂಗಳೂರಿನಲ್ಲಿ ಸಾರ್ವಜನಿಕರಿಗೆ ಉಚಿತ ಮಾಸ್ಕ್ ನೀಡುವ ಮೂಲಕ ಕೊರೊನಾದ ವಿರುದ್ಧ ಜಾಗೃತಿ ಮೂಡಿಸಿದರು

ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ



ಸನ್ಮಾನ್ಯ ಪ್ರಧಾನಮಂತ್ರಿ
ಶ್ರೀ ನರೇಂದ್ರ ಮೋದಿಯವರಿಗೆ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ
ನಮ್ಮ ಮೆಟ್ರೋ ಸೌಲಭ್ಯ ಕಲ್ಪಿಸುವ
ಹಂತ-2ಎ ಮತ್ತು **ಹಂತ-2ಬಿ** ಯೋಜನೆಗೆ
ಅನುಮೋದನೆ ನೀಡಿರುವ
ಮಹತ್ವಪೂರ್ಣ ನಿರ್ಧಾರಕ್ಕಾಗಿ

ಸಮಸ್ತ ಬೆಂಗಳೂರು ನಾಗರಿಕರಿಂದ
ಹೃತ್ಪೂರ್ವಕ ಧನ್ಯವಾದಗಳು

ಕೇಂದ್ರ ಸಚಿವ ಸಂಪುಟವು **ರೂ.14,788 ಕೋಟಿ** ವೆಚ್ಚದ **ನಮ್ಮ ಮೆಟ್ರೋ ಹಂತ–2ಎ ಗೆ (ಸೆಂಟ್ರಲ್ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂ ವರೆಗೆ-19.75 ಕಿಮೀ ಮತ್ತು 13 ನಿಲ್ದಾಣಗಳು)** ಹಾಗೂ **ಹಂತ–2ಬಿಗೆ (ಕೆ.ಆರ್. ಪುರಂನಿಂದ ಹೆಬ್ಬಾಳ ಜಂಕ್ಷನ್ ಮೂಲಕ ವಿಮಾನ ನಿಲ್ದಾಣದವರೆಗೆ - 38.44 ಕಿ.ಮೀ. ಮತ್ತು 17 ನಿಲ್ದಾಣಗಳು)** ಆನುಮೋದನೆ ನೀಡಿದ್ದು ಈ ಯೋಜನೆಯು 5 ವರ್ಷಗಳ ಅವಧಿಯಲ್ಲಿ ಪೂರ್ಣಗೊಳ್ಳಲಿದೆ.

ಬೆಂಗಳೂರು ಮೆಟ್ರೋ ಸಂಚಾರದ ಈ ಎರಡೂ ಮಾರ್ಗಗಳ ಅನುಷ್ಠಾನದಿಂದಾಗಿ ನಗರದ ಸಾರ್ವಜನಿಕ ಸಾರಿಗೆ ಮತ್ತು ಆರ್ಥಿಕ ಸಾಮರ್ಥ್ಯಕ್ಕೆ ಹೆಚ್ಚಿನ ಬಲ ಸಿಗಲಿದೆ.

ನಮ್ಮ ಮೆಟ್ರೋ namma metro

ಮಾಸ್ಕ್ ಧರಿಸಿ
ಸಾಮಾಜಿಕ ಅಂತರ ಕಾಪಾಡಿಕೊಳ್ಳಿ
ಕೈಗಳನ್ನು ಸ್ವಚ್ಛಗೊಳಿಸಿ

ನಗರದಲ್ಲಿ ಕೊರೊನಾ ಸೋಂಕು ಪ್ರಕರಣಗಳು ಹೆಚ್ಚುತ್ತಿರುವ ಕಾರಣ ಕೆ.ಜಿ.ರಸ್ತೆಯಲ್ಲಿರುವ ಅಲಂಕಾರ್ ಪ್ಲಾಜಾದ ಮಳಿಗೆಗಳು ಗ್ರಾಹಕರಿಲ್ಲದೆ ಭಣಗುಡುತ್ತಿದ್ದ ದೃಶ್ಯ ಬುಧವಾರ ಕಂಡುಬಂತು (ಎಡ ಚಿತ್ರ). ತುಮಕೂರು ರಸ್ತೆಯಲ್ಲೂ ಬಂದ್ ರೀತಿಯ ವಾತಾವರಣವಿತ್ತು– ಪ್ರಜಾವಾಣಿ ಚಿತ್ರಗಳು

ಸುದ್ದಿ 2 ನಿಮಿಷ

ಕೋವಿಡ್: ಹಿರಿಯ ನಾಗರಿಕರಿಗೆ ನೆರವಾಗಲು ನಿರ್ದೇಶನ

ಬೆಂಗಳೂರು: ಕೋವಿಡ್ ಪ್ರಕರಣ ಹಠಾತ್ ಏರಿಕೆ ಆಗಿರುವ ಕಾರಣ ಹಿರಿಯ ನಾಗರಿಕರಿಗೆ ವೈದ್ಯಕೀಯ ನೆರವು ನೀಡಲು ಸಾಧ್ಯವಿರುವ ಎಲ್ಲಾ ಪ್ರಯತ್ನಗಳನ್ನು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಹಿರಿಯ ನಾಗರಿಕರ ರಕ್ಷಣಾ ಕಾಯ್ದೆಯ ಸೆಕ್ಷನ್ 20ರ ಅಡಿಯಲ್ಲಿನ ನಿಯಮಗಳನ್ನು ವಿಶೇಷವಾಗಿ ಕೋವಿಡ್ ಆಸ್ಪತ್ರೆ ಮತ್ತು ಕೋವಿಡ್ ಲಸಿಕಾ ಕೇಂದ್ರಗಳಲ್ಲಿ ಪಾಲಿಸಲು ನಿರ್ದೇಶನ ನೀಡಬೇಕು ಎಂದು ರಾಜ್ಯ ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ ಸೂಚನೆ ನೀಡಿತು.

ಕೋವಿಡ್ ಸೋಂಕಿತ ಹಿರಿಯ ನಾಗರಿಕರಿಗೆ ಹಾಸಿಗೆ ವ್ಯವಸ್ಥೆ, ಚಿಕಿತ್ಸೆಯನ್ನು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಖಾತರಿಪಡಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸುವಂತೆ ಪೀಠ ನಿರ್ದೇಶನ ನೀಡಿತು. ವಿಚಾರಣೆಯನ್ನು ಜೂ.18ಕ್ಕೆ ನಿಗದಿ ಮಾಡಿತು.

ವಸತಿ ಶಾಲೆ: ಪರೀಕ್ಷೆ ಮುಂದೂಡಿಕೆ

ಬೆಂಗಳೂರು: ನಗರದ ವಿಭೂತಿಪುರ ವೀರಸಿಂಹಾಸನ ಸಂಸ್ಥಾನ ಮಠ ನಡೆಸುವ ಶ್ರೀ ವೀರಭದ್ರಸ್ವಾಮಿ ಇಂಗ್ಲಿಷ್ ಮಾಧ್ಯಮ ವಸತಿ ಶಾಲೆಯ ಪ್ರವೇಶ ಪರೀಕ್ಷೆ ಮುಂದೂಡಲಾಗಿದೆ.

ಇದೇ 25ರಂದು ಪರೀಕ್ಷೆ ನಿಗದಿಯಾಗಿತ್ತು. ಆದರೆ, ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಮತ್ತು ಅದೇ ದಿನ ಸಂಪೂರ್ಣ ಬಂದ್ (ಕರ್ಫ್ಯೂ) ಇರುವುದರಿಂದ ಪರೀಕ್ಷೆ ಮುಂದೂಡಲಾಗಿದೆ. ಮುಂದಿನ ಪರಿಸ್ಥಿತಿ ನೋಡಿಕೊಂಡು ಪರೀಕ್ಷೆಯ ದಿನಾಂಕ ಘೋಷಿಸಲಾಗುವುದು ಎಂದು ಮಠದ ಕಾರ್ಯದರ್ಶಿ ಸಿ. ಬಸವರಾಜು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

6ರಿಂದ 10ನೇ ತರಗತಿವರೆಗೆ ಇಂಗ್ಲಿಷ್ ಮಾಧ್ಯಮದಲ್ಲಿ ಅಧ್ಯಯನ ಮಾಡಬಯಸುವ ಗ್ರಾಮೀಣ ಪ್ರದೇಶದ ಎಲ್ಲ ವರ್ಗದ ಬಡ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಉಚಿತವಾಗಿ ಪ್ರವೇಶ ನೀಡಲಾಗುತ್ತದೆ. ಇದಕ್ಕಾಗಿ ಈ ಪ್ರವೇಶ ಪರೀಕ್ಷೆ ನಡೆಸಲಾಗುತ್ತದೆ.

ಮಾಹಿತಿಗೆ, 9448670372/ 9738245665.

ಐದು ಪಟ್ಟು ಹೆಚ್ಚು ಬೇಡಿಕೆ • ಆಕ್ಸಿಜನ್ ಪೂರೈಸುವಂತೆ ಗೋಗರೆಯುತ್ತಿರುವ ಕೋವಿಡ್ ರೋಗಿಗಳು

ಆಮ್ಲಜನಕ ಸಿಲಿಂಡರ್‌ಗಾಗಿ ನೂರಾರು ಕರೆಗಳು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವೈದ್ಯಕೀಯ ಆಮ್ಲಜನಕ ಕೊರತೆ ವಿಪರೀತ ಹೆಚ್ಚಾಗಿದ್ದು, ಆಕ್ಸಿಜನ್ ಸಿಲಿಂಡರ್‌ಗಾಗಿ ಅಕ್ಷರಶಃ ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಥಣಿಸಂದ್ರದ ಯುನೈಟೆಡ್ ಫೋರಂ, ಜೆ.ಸಿ. ನಗರದ ಹೆಲ್ಪ್ ಕ್ರಿಸ್ಸಿ ಮ್ಯಾನೇಜ್‌ಮೆಂಟ್, ಬಸವನಗುಡಿಯ ಮೈಸ್ಸಿ ಮಿಷನ್ ಸೇರಿದಂತೆ ಹಲವು ಸರ್ಕಾರೇತರ ಸಂಸ್ಥೆಗಳು ಉಚಿತವಾಗಿ ಆಕ್ಸಿಜನ್ ಸಿಲಿಂಡರ್ ನೀಡುತ್ತಿವೆ. ಆದರೆ, ಎಲ್ಲರಿಗೂ ವೈದ್ಯಕೀಯ ಆಮ್ಲಜನಕ ಪೂರೈಸಲು ಅವುಗಳಿಗೂ ಸಾಧ್ಯವಾಗುತ್ತಿಲ್ಲ. ನಿರೀಕ್ಷೆಗಿಂತ ಐದಾರು ಪಟ್ಟು ಹೆಚ್ಚು ಬೇಡಿಕೆ ಇದೆ ಎಂದು ಅವರು ಹೇಳುತ್ತಾರೆ.

‘ಕಳೆದ ವರ್ಷವೂ ನಾವು ಉಚಿತವಾಗಿ ಸಿಲಿಂಡರ್‌ಗಳನ್ನು ಪೂರೈಸಿದ್ದೆವು. ಆದರೆ, ಇಷ್ಟು ಬೇಡಿಕೆ ಇರಲಿಲ್ಲ. ಬಹಳಷ್ಟು ಹಾಗೆಯೇ ಉಳಿದಿದ್ದವು. ಆದರೆ, ಈಗ ದಿನಕ್ಕೆ ನೂರಾರು ಸಿಲಿಂಡರ್ ವಿತರಿಸಿದರೂ ಸಾಧ್ಯವಾಗುತ್ತಿಲ್ಲ’ ಎಂದು ಥಣಿಸಂದ್ರದ ಯುನೈಟೆಡ್ ಫೋರಂ ಸಂಸ್ಥೆಯ ಸಿಬ್ಬಂದಿಯೊಬ್ಬರು ಹೇಳಿದರು.

ಪೀಣ್ಯದಲ್ಲಿರುವ ‘ಯುನಿವರ್ಸಲ್ ಏರ್ ರಿಫಿಲ್ಲಿಂಗ್’ ಘಟಕದಲ್ಲಿ ಬುಧವಾರ ಪೊಲೀಸ್ ಭದ್ರತೆಯಲ್ಲಿ ಆಮ್ಲಜನಕವನ್ನು ಸಿಲಿಂಡರ್‌ಗೆ ತುಂಬಿಸಲಾಯಿತು. ಆಮ್ಲಜನಕ ಕೊರತೆ ಕಾರಣ ಘಟಕದ ಸಿಬ್ಬಂದಿ ಹಾಗೂ ಆಸ್ಪತ್ರೆಯ ಸಿಬ್ಬಂದಿ ನಡುವೆ ಮಾತಿನ ಚಕಮಕಿ ನಡೆಯುತ್ತಿರುವ ದೂರುಗಳ ಕಾರಣ ಇಂತಹ ಘಟಕಗಳಲ್ಲಿ ಪೊಲೀಸರನ್ನು ಭದ್ರತೆಗೆ ನಿಯೋಜಿಸಲಾಗುತ್ತಿದೆ– ಪ್ರಜಾವಾಣಿ ಚಿತ್ರ

‘ನಮ್ಮ ಸಂಸ್ಥೆಯಲ್ಲಿ ಈ ಉದ್ದೇಶಕ್ಕೆ ಆರು ಜನ ಕೆಲಸ ಮಾಡುತ್ತಿದ್ದೇವೆ. ಪ್ರತಿದಿನ ಒಬ್ಬೊಬ್ಬರಿಗೆ 200ಕ್ಕೂ ಹೆಚ್ಚು ಕರೆಗಳು ಬರುತ್ತಿವೆ. ಅಂದರೆ, ದಿನಕ್ಕೆ ಸಾವಿರಕ್ಕೂ ಹೆಚ್ಚು ಜನ ಕರೆ ಮಾಡುತ್ತಿದ್ದಾರೆ. ವೈದ್ಯಕೀಯ ಆಮ್ಲಜನಕ ಸಿಲಿಂಡರ್ ಪೂರೈಸಿ ಜೀವ ಉಳಿಸಿ ಎಂದು ಮನವಿ ಮಾಡಿಕೊಳ್ಳುತ್ತಾರೆ. ಎಲ್ಲರಿಗೂ ಪೂರೈಸಲು ಸಾಧ್ಯವಾಗದಿರುವುದಕ್ಕೆ ತುಂಬಾ ಬೇಸರವಾಗುತ್ತಿದೆ’ ಎಂದು ಹೇಳಿದರು.

‘ಕೋವಿಡ್‌ನ ಸಾಮಾನ್ಯ ಲಕ್ಷಣಗಳಾದ ಶೀತ, ಜ್ವರ, ನಿಶಕ್ತಿ ಅಥವಾ ಕೆಮ್ಮು ಕೆಲವು ಸೋಂಕಿತರಲ್ಲಿ ಕಂಡು ಬರುವುದಿಲ್ಲ. ಆದರೂ, ಉಸಿರಾಟದ ಸಮಸ್ಯೆ ಕಾಣಿಸಿಕೊಳ್ಳುತ್ತಿದೆ. ಇದರಿಂದ ಸಿಲಿಂಡರ್‌ಗಳಿಗೆ ಬೇಡಿಕೆ ಹೆಚ್ಚಾಗಿದೆ’ ಎಂದು ಅವರು ಹೇಳಿದರು.

ದಿನಕ್ಕೆ 250 ಟನ್ ಬೇಡಿಕೆ: ‘ನಗರದಲ್ಲಿ ದಿನಕ್ಕೆ 100 ಟನ್‌ನಷ್ಟು ಮಾತ್ರ ವೈದ್ಯಕೀಯ ಆಮ್ಲಜನಕ ಲಭ್ಯವಾಗುತ್ತಿದೆ’ ಎಂದು ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಂಗಳ ಸಂಘ (ಫನಾ) ಹೇಳಿದೆ.

‘ನಗರಕ್ಕೆ ಸಾಮಾನ್ಯವಾಗಿ ದಿನಕ್ಕೆ 50 ಟನ್‌ನಷ್ಟು ವೈದ್ಯಕೀಯ ಆಮ್ಲಜನಕ ಸಾಕಾಗುತ್ತಿತ್ತು. ಆದರೆ, ಈಗ ಬೇಡಿಕೆ ಐದು ಪಟ್ಟು (250 ಟನ್) ಹೆಚ್ಚಾಗಿದೆ. ಇದರ ಕೊರತೆ ಉದ್ಭವಿಸದಂತೆ ಬಿಬಿಎಂಪಿ ಎಲ್ಲ ಕ್ರಮ ಕೈಗೊಳ್ಳಲಿದೆ’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಹೇಳಿದ್ದಾರೆ.

ಹೊಸ ನೀತಿ: ಜೆಎಸ್‌ಡಬ್ಲ್ಯು ಇಕ್ಕಟ್ಟು

ಜೆಎಸ್‌ಡಬ್ಲ್ಯು ಸ್ಟೀಲ್ ಕಂಪನಿಯು ದಿನಕ್ಕೆ 400 ಟನ್‌ನಷ್ಟು ಆಮ್ಲಜನಕ ಸಿಲಿಂಡರ್ ಪೂರೈಸಲಿದೆ ಎಂದು ರಾಜ್ಯ ಸರ್ಕಾರ ಮಂಗಳವಾರ ಹೇಳಿತ್ತು. ಆದರೆ, ಕೇಂದ್ರ ಸರ್ಕಾರದ ಹೊಸ ನೀತಿ ಪ್ರಕಾರ, ಈ ಪ್ರಮಾಣದ ಆಮ್ಲಜನಕವನ್ನು ದಕ್ಷಿಣ ಭಾರತದ ಎಲ್ಲ ರಾಜ್ಯಗಳಿಗೆ ವಿತರಿಸಬೇಕಾಗಿದೆ.

‘ಒಪ್ಪಿಕೊಂಡಿರುವಷ್ಟು ಪ್ರಮಾಣ ಆಕ್ಸಿಜನ್ ಅನ್ನು ಏಪ್ರಿಲ್ ಕೊನೆಯವರೆಗೆ ಪೂರೈಸಲು ಭರವಸೆಯನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗಿತ್ತು. ಆದರೆ, ಸದ್ಯದ ಹಂಚಿಕೆ ನೀತಿಯ ಪ್ರಕಾರ, ಇಷ್ಟು ಪ್ರಮಾಣದ ಆಮ್ಲಜನಕವನ್ನು ಒಂದೇ ರಾಜ್ಯಕ್ಕೆ ಪೂರೈಸದೆ, ದಕ್ಷಿಣ ಭಾರತದ ರಾಜ್ಯಗಳಿಗೆ ಇದನ್ನು ಪೂರೈಸುವಂತೆ ಕೇಂದ್ರ ಸರ್ಕಾರದ ಸೂಚನೆ ಇದೆ’ ಎಂದು ಜೆಎಸ್‌ಡಬ್ಲ್ಯು ಮೂಲಗಳು ತಿಳಿಸಿವೆ.

‘ಆಮ್ಲಜನಕ ಹಂಚಿಕೆ ನೀತಿ ಪಾಲಿಸಿದರೆ, ರಾಜ್ಯಕ್ಕೆ ಅಗತ್ಯವಿರುವಷ್ಟು ಆಕ್ಸಿಜನ್ ಲಭ್ಯವಾಗುವುದಿಲ್ಲ. ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಿದ್ದಾರೆ. ಒಪ್ಪಂದದಂತೆ ಜೆಎಸ್‌ಡಬ್ಲ್ಯು ಕಂಪನಿಯಿಂದ ಪೂರೈಕೆಯಾಗುವ ಆಮ್ಲಜನಕ ಪೂರ್ತಿ ರಾಜ್ಯಕ್ಕೆ ನೀಡಬೇಕು, ಅದನ್ನು ರಾಜ್ಯದಲ್ಲಿನ ಎಲ್ಲ ಆಸ್ಪತ್ರೆಗೆ ವಿತರಿಸಬೇಕು ಎಂದು ಪ್ರಸ್ತಾವ ಸಲ್ಲಿಸಲಿದ್ದಾರೆ’ ಎಂದು ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ತಿಳಿಸಿದರು.

‘ರಾಜ್ಯದಲ್ಲಿ ದಿನಕ್ಕೆ ಉತ್ಪಾದಿಸಲಾಗುತ್ತಿರುವ 812 ಟನ್‌ನಷ್ಟು ವೈದ್ಯಕೀಯ ಆಮ್ಲಜನಕದ ಪೈಕಿ 600 ಟನ್‌ನಷ್ಟು ಆಮ್ಲಜನಕವನ್ನು ಏಳು ಪ್ರಮುಖ ಕಂಪನಿಗಳು ಉತ್ಪಾದಿಸುತ್ತಿವೆ. ಇದನ್ನು ಬೆಂಗಳೂರು ಸೇರಿದಂತೆ ರಾಜ್ಯದ ಎಲ್ಲ ಆಸ್ಪತ್ರೆಗಳಿಗೆ ಪೂರೈಸುವಂತೆ ಕಂಪನಿಗಳಿಗೆ ಸೂಚನೆ ನೀಡಿದ್ದೇನೆ’ ಎಂದೂ ಹೇಳಿದರು.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

5,83,675 ಒಟ್ಟು ಸೋಂಕಿತರು

4,53,398 ಗುಣಮುಖರಾದವರು

1,24,894 ಸಕ್ರಿಯ ಪ್ರಕರಣ

5,382 ಸಾವು

ಬುಧವಾರದ ಏರಿಕೆ

13,640 ದೃಢಪಟ್ಟ ಪ್ರಕರಣ

3,509 ಗುಣಮುಖ

70 ಸಾವು

ಪೊಲೀಸ್ ಕಮಿಷನರ್ ಕಮಲ್ ಪಂತ್ ಎಚ್ಚರಿಕೆ

ಮೇ 4ರವರೆಗೆ ನಗರದಾದ್ಯಂತ ಜಾರಿ ಮಾಡಿರುವ ರಾತ್ರಿ ಕರ್ಫ್ಯೂ ಹಾಗೂ ವಾರಾಂತ್ಯದ ಕರ್ಫ್ಯೂ ವೇಳೆ ಅನಗತ್ಯವಾಗಿ ಸಂಚರಿಸುವಂತಿಲ್ಲ

‘ಅನಗತ್ಯ ಸಂಚರಿಸಿದರೆ ವಾಹನ ಜಪ್ತಿ’

ಬೆಂಗಳೂರು: ‘ಕೊರೊನಾ ನಿಯಂತ್ರಣಕ್ಕಾಗಿ ಮೇ 4ರವರೆಗೆ ನಗರದಾದ್ಯಂತ ಜಾರಿ ಮಾಡಿರುವ ರಾತ್ರಿ ಕರ್ಫ್ಯೂ ಹಾಗೂ ವಾರಾಂತ್ಯದ ಕರ್ಫ್ಯೂ ವೇಳೆ ಅನಗತ್ಯವಾಗಿ ಸಂಚರಿಸುವ ವಾಹನಗಳನ್ನು ಜಪ್ತಿ ಮಾಡಲಾಗುವುದು’ ಎಂದು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಎಚ್ಚರಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕರ್ಫ್ಯೂ ಅವಧಿಯಲ್ಲಿ ಯಾವುದೇ ರೀತಿಯ ಚಟುವಟಿಕೆಗಳಿಗೆ ಅವಕಾಶ ಇರುವುದಿಲ್ಲ. ಈ ವೇಳೆ ಸಂಚಾರಕ್ಕೆ ಪೊಲೀಸ್ ಇಲಾಖೆ ಯಾವುದೇ ಪಾಸ್ ವಿತರಿಸುವುದಿಲ್ಲ. ತುರ್ತು ಅಗತ್ಯ ಇದ್ದವರು ಗುರುತಿನ ಚೀಟಿ ಹಾಗೂ ಸಂಬಂಧಿತ ದಾಖಲೆ ತೋರಿಸಿ ಸಂಚರಿಸಬಹುದು. ಆದರೆ, ಅನಗತ್ಯವಾಗಿ ಸಂಚಾರಕ್ಕೆ ಮುಂದಾಗುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು’ ಎಂದು ಎಚ್ಚರಿಸಿದರು.

‘ಕರ್ಫ್ಯೂ ವೇಳೆ ನಾಲ್ಕಕ್ಕಿಂತ ಹೆಚ್ಚು ಜನ ಸೇರುವಂತಿಲ್ಲ. ಅಗತ್ಯ ಸೇವೆಗಳನ್ನು ಹೊರತುಪಡಿಸಿ ಎಲ್ಲವೂ ಬಂದ್ ಇರಲಿದೆ. ಮದುವೆಗೆ 50, ಅಂತ್ಯಕ್ರಿಯೆಗೆ 20 ಮಂದಿಗೆ ಮಾತ್ರ ಅವಕಾಶ ನೀಡಲಾಗಿದೆ. ಆಹಾರವನ್ನು ಪಾರ್ಸೆಲ್ ತೆಗೆದುಕೊಂಡು ಹೋಗಲು ಅವಕಾಶವಿದೆ’ ಎಂದು ವಿವರಿಸಿದರು.

ಕಲ್ಯಾಣ ಮಂಟಪ ಪರವಾನಗಿ ರದ್ದು: ‘ಕಲ್ಯಾಣ ಮಂಟಪ ಹಾಗೂ ಪಾರ್ಟಿ ಹಾಲ್‌ಗಳಲ್ಲಿ ಶುಭ ಸಮಾರಂಭಗಳಿಗೆ ಜನರ ಪ್ರವೇಶ ನಿಗದಿಪಡಿಸಲಾಗಿದೆ. ಅಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಮಾಲೀಕರು ಹಾಗೂ ಆಯೋಜಕರ ಜೊತೆ ಸಭೆ ನಡೆಸಲಾಗುವುದು’.

‘ನಿಯಮ ಪಾಲನೆ ಕುರಿತು ಮಾಲೀಕರು ಕಡ್ಡಾಯವಾಗಿ ಬಾಂಡ್ ಮಾಡಿಸಬೇಕು. ಇದರ ಅನ್ವಯ ಕಾರ್ಯಕ್ರಮದಲ್ಲಿ ಏನೇ ಅನಾಹುತ ನಡೆದರೂ ಕಲ್ಯಾಣ ಮಂಟಪ ಹಾಗೂ ಪಾರ್ಟಿ ಹಾಲ್ ಮಾಲೀಕರೇ ಜವಾಬ್ದಾರರು. ನಿಯಮ ಉಲ್ಲಂಘಿಸುವ ಕಲ್ಯಾಣ ಮಂಟಪ ಹಾಗೂ ಹಾಲ್‌ಗಳನ್ನು ಜಪ್ತಿ ಮಾಡಿ, ಪರವಾನಗಿ ರದ್ದುಪಡಿಸಲಾಗುವುದು’ ಎಂದೂ ಎಚ್ಚರಿಸಿದರು.

ಕೋವಿಡ್ ಹಾಸಿಗೆಗೆ ‘ಪ್ರಭಾವಿ’ಗಳ ಕಾಟ

• ಗುರು ಪಿ.ಎಸ್.

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ಇದರಿಂದ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆಯೂ ಜಾಸ್ತಿಯಾಗುತ್ತಿದೆ. ಆದರೆ, ಸೌಮ್ಯ ಸ್ವಭಾವದ ಲಕ್ಷಣಗಳು ಕಾಣಿಸಿಕೊಂಡರೂ ‘ಪ್ರಭಾವಿ’ಗಳ ಪರಿಚಯ ಬಳಸಿಕೊಂಡು ಕೋವಿಡ್ ಆಸ್ಪತ್ರೆಗೆ ದಾಖಲಾಗುತ್ತಿರುವವ ಸಂಖ್ಯೆ ಹೆಚ್ಚಾಗುತ್ತಿದೆ. ಹಾಸಿಗೆಗಳ ಕೊರತೆ ಉಂಟಾಗಲು ಕಾರಣ ಎನ್ನುತ್ತಾರೆ ಅಧಿಕಾರಿಗಳು.

‘ಸಣ್ಣದಾಗಿ ಕೆಮ್ಮು, ನೆಗಡಿ ಕಾಣಿಸಿಕೊಂಡರೂ ತಮಗಿರುವ ‘ಪ್ರಭಾವ’ ಬಳಸಿಕೊಂಡು ಅನೇಕರು ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ. ಮುಂಜಾಗ್ರತೆಯ ನೆಪದಲ್ಲಿ ಆಸ್ಪತ್ರೆಗಳಲ್ಲಿ ಬಂದು ಮಲಗುತ್ತಿದ್ದಾರೆ. ತೀರಾ ಅಗತ್ಯವಿರುವ, ಗಂಭೀರ ಸ್ಥಿತಿಯಲ್ಲಿರುವ ರೋಗಿಗಳಿಗೆ ಇದರಿಂದ ತೊಂದರೆಯಾಗುತ್ತಿದೆ. ಹಾಸಿಗೆಗಳ ಕೃತಕ ಅಭಾವ ಸೃಷ್ಟಿಗೂ ಇದು ಕಾರಣವಾಗುತ್ತಿದೆ’ ಎಂದು ಹೆಸರು ಬಹಿರಂಗಪಡಿಸದ ಐಎಎಸ್ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ವೆಂಟಿಲೇಟರ್ ಮತ್ತು ವೈದ್ಯಕೀಯ ಆಮ್ಲಜನಕ ವ್ಯವಸ್ಥೆ ಹೊಂದಿರುವ ಹಾಸಿಗೆಗಳ ಅಗತ್ಯ ತುಂಬಾ ಇದೆ. ಆದರೆ, ಹೋಂ ಐಸೋಲೇಷನ್‌ನಲ್ಲಿ ಇದ್ದುಕೊಂಡು ಗುಣಮುಖರಾಗುವ ಸಾಧ್ಯತೆ ಇರುವವರೂ ಆಸ್ಪತ್ರೆಗೆ ದಾಖಲಾಗುತ್ತಿದ್ದಾರೆ’ ಎಂದೂ ಅವರು ಹೇಳಿದರು.

‘ಔಚಿತ್ಯ ಪರಿಶೀಲನೆ ಅಗತ್ಯ’

‘ಸೋಂಕಿತರು ಆಸ್ಪತ್ರೆಗೆ ದಾಖಲಾಗುವ ಅಗತ್ಯ ಇದೆಯೋ, ಇಲ್ಲವೋ ಎಂಬುದನ್ನು ಪರಿಶೀಲಿಸುವ ವ್ಯವಸ್ಥೆ ತರಬೇಕು. ಪರಿಣಿತ ವೈದ್ಯರ ತಂಡವೊಂದನ್ನು ರಚಿಸಿ, ಅದರ ಮೂಲಕ ಈ ಕಾರ್ಯ ಮಾಡಬೇಕು’ ಎಂಬ ಸಲಹೆಯನ್ನು ತಜ್ಞರು ನೀಡುತ್ತಾರೆ.

‘ಸೋಂಕಿತರಾದವರನ್ನೆಲ್ಲ ಆಸ್ಪತ್ರೆಗೆ ದಾಖಲು ಮಾಡಿಕೊಳ್ಳುತ್ತಿರುವುದರಿಂದ ತೊಂದರೆಯಾಗುತ್ತಿದೆ. ಅನ್ಯರೋಗದಿಂದ ಬಳಲುತ್ತಿರುವವರಿಗೆ ಕೋವಿಡ್ ದೃಢಪಟ್ಟಿದ್ದರೆ, ಉಸಿರಾಟಕ್ಕೆ ತೊಂದರೆಯಾಗಿದ್ದರೆ ಅಂಥವರನ್ನು ಮಾತ್ರ ದಾಖಲು ಮಾಡಿಕೊಳ್ಳುವಂತಾದರೆ ಹಾಸಿಗೆ ಸಮಸ್ಯೆ ಶೇ 50ರಷ್ಟು ಕಡಿಮೆ ಆಗುತ್ತದೆ’ ಎಂದೂ ಅವರು ಅಭಿಪ್ರಾಯಪಟ್ಟರು.

ಖಾಸಗಿ ಆಸ್ಪತ್ರೆಯಲ್ಲಿ ಹೆಚ್ಚು: ‘ಪ್ರಭಾವ ಬಳಸಿ ದಾಖಲಾಗುತ್ತಿರುವವರ ಸಂಖ್ಯೆ ಖಾಸಗಿ ಆಸ್ಪತ್ರೆಗಳಲ್ಲಿ ಹೆಚ್ಚು. ತಾವೇ ಬಯಸಿ ಆಸ್ಪತ್ರೆಗೆ ದಾಖಲಾಗುವುದರಿಂದ ಶುಲ್ಕ ಎಷ್ಟೇ ಆದರೂ ಇಂತಹ ರೋಗಿಗಳು ಚಿಂತೆ ಮಾಡುವುದಿಲ್ಲ. ಪ್ರಭಾವ ಬಳಸುವವರು ಆರ್ಥಿಕವಾಗಿಯೂ ಸಬಲರಾಗಿರುವ ಸಾಧ್ಯತೆ ಇರುವುದರಿಂದ ಖಾಸಗಿ ಆಸ್ಪತ್ರೆಗಳು ಇಂಥವರನ್ನು ದಾಖಲು ಮಾಡಿಕೊಳ್ಳಲು ಆದ್ಯತೆ ನೀಡುತ್ತವೆ’ ಎಂದು ಮತ್ತೊಬ್ಬ ಅಧಿಕಾರಿ ಹೇಳಿದರು.

‘ಖಾಸಗಿ ಆಸ್ಪತ್ರೆಗಳಲ್ಲಿ ಶೇ 50ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ನೀಡಬೇಕು ಎಂದು ಸರ್ಕಾರ ಆದೇಶಿಸಿದೆ. ಈ ಮೀಸಲು ಪ್ರಮಾಣದಲ್ಲಿ ಬಹುತೇಕರು ಹೀಗೆ ಪ್ರಭಾವ ಬಳಸಿ ದಾಖಲಾದವರೇ ಇದ್ದಾರೆ’ ಎಂದೂ ಅವರು ಹೇಳಿದರು.

‘ಸರ್ಕಾರದ ಕೋಟಾದಡಿ ದಾಖಲು ಮಾಡಿಕೊಂಡ ರೋಗಿಗಳ ಚಿಕಿತ್ಸಾ ವೆಚ್ಚವನ್ನು ಸರ್ಕಾರ ನಂತರದಲ್ಲಿ ಪಾವತಿಸುತ್ತದೆ. ಅಂದರೆ, ಚಿಕಿತ್ಸೆ ನೀಡಿದ ನಂತರ ಹಣಕ್ಕಾಗಿ ಸರ್ಕಾರದ ಕಚೇರಿಗಳಿಗೆ ಅಲೆಯಬೇಕು. ಇಂತಹ ರೋಗಿಗಳನ್ನು ದಾಖಲಿಸಿಕೊಂಡರೆ ಮೀಸಲು ನಿಯಮ ಪಾಲಿಸಿದಂತೆಯೂ ಆಗುತ್ತದೆ, ಸರ್ಕಾರಿ ಕಚೇರಿಗಳಿಗೆ ಅಲೆಯುವುದೂ ತಪ್ಪುತ್ತದೆ ಎಂಬ ಯೋಚನೆಯಲ್ಲಿ ಖಾಸಗಿ ಆಸ್ಪತ್ರೆಗಳು ಈ ರೀತಿ ಮಾಡುತ್ತಿವೆ’ ಎಂದು ಅವರು ವಿವರಿಸಿದರು.

ಆದೇಶ ಪಾಲಿಸದ 66 ಆಸ್ಪತ್ರೆಗಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪ್ರಕರಣಗಳು ದಿನೇ ದಿನೇ ಹೆಚ್ಚಳವಾಗುತ್ತಿರುವುದರಿಂದ ನಗರದ ಎಲ್ಲ ಆಸ್ಪತ್ರೆಗಳು ತಮ್ಮಲ್ಲಿರುವ ಶೇ 50ರಷ್ಟು ಹಾಸಿಗೆಗಳನ್ನು ಕೊರೊನಾ ಸೋಂಕಿತರ ಚಿಕಿತ್ಸೆಗೆ ಮೀಸಲಿಡುವುದನ್ನು ಸರ್ಕಾರ ಕಡ್ಡಾಯಗೊಳಿಸಿದೆ. ಈ ಆದೇಶ ಪಾಲಿಸಲು ಮೀನಮೇಷ ಎಣಿಸುತ್ತಿರುವ 66 ಆಸ್ಪತ್ರೆಗಳಿಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಬುಧವಾರ ತುರ್ತು ನೋಟಿಸ್ ಜಾರಿಗೊಳಿಸಿದ್ದಾರೆ.

ಕೋವಿಡ್ ಮೊದಲ ಅಲೆ ತಾರಕಕ್ಕೆ ಏರಿದ್ದಾಗ ಯಾವೆಲ್ಲ ಆಸ್ಪತ್ರೆಗಳು ಎಷ್ಟು ಹಾಸಿಗೆಗಳನ್ನು ಒದಗಿಸಿವೆ ಎಂಬುದನ್ನು ಆಧರಿಸಿ ನೋಟಿಸ್ ಜಾರಿಗೊಳಿಸಲಾಗಿದೆ. ಈ ಹಿಂದೆ ಕೋವಿಡ್ ಚಿಕಿತ್ಸೆಗೆ ಹಾಸಿಗೆಗಳನ್ನು ಒದಗಿಸಿದ್ದ ಆಸ್ಪತ್ರೆಗಳು ಕೋವಿಡ್ ಎರಡನೇ ಅಲೆ ವೇಳೆ ಹಿಂದಿನಷ್ಟು ಸಂಖ್ಯೆಯ ಹಾಸಿಗೆಗಳನ್ನು ಒದಗಿಸಿಲ್ಲ. ಇದನ್ನು ಬಿಬಿಎಂಪಿ ಗಂಭೀರವಾಗಿ ಪರಿಗಣಿಸಿ, ಈ ಆಸ್ಪತ್ರೆಗಳ ವಿರುದ್ಧ ಕ್ರಮಕ್ಕೆ ಮುಂದಾಗಿದೆ.

ಕೋವಿಡ್ ಎರಡನೇ ಅಲೆ ವೇಳೆ ಸೊಂಕಿತರ ಸಂಖ್ಯೆ ತೀವ್ರಗತಿಯಲ್ಲಿ ಹೆಚ್ಚಳವಾಗುತ್ತಿದೆ. ತುರ್ತು ಚಿಕಿತ್ಸೆ ಅಗತ್ಯ ಇರುವವರನ್ನು ದಾಖಲಿಸಲು ಆಸ್ಪತ್ರೆಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಹಾಸಿಗೆಗಳು, ಅದರಲ್ಲೂ ತೀವ್ರ ನಿಗಾ ಘಟಕದ ಹಾಸಿಗೆಗಳು ಲಭಿಸುತ್ತಿಲ್ಲ. ಉಸಿರಾಟದ ಸಮಸ್ಯೆ ಎದುರಿಸುತ್ತಿರುವ ಹಾಗೂ ರಕ್ತದಲ್ಲಿ ಆಮ್ಲಜನಕ ಪ್ರಮಾಣ ಗಣನೀಯವಾಗಿ ಕುಸಿತ ಕಂಡ ರೋಗಿಗಳನ್ನು ಆಂಬುಲೆನ್ಸ್‌ನಲ್ಲಿಟ್ಟುಕೊಂಡು ಬಂಧುಗಳು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆಯುವ ಸ್ಥಿತಿ ನಿರ್ಮಾಣವಾಗಿದೆ.

ಗೌರವ್ ಗುಪ್ತ ಅವರು ನಗರದ ವಿಕ್ರಂ ಆಸ್ಪತ್ರೆ, ಫೋರ್ಟಿಸ್ ಆಸ್ಪತ್ರೆ (ಕನ್ನಿಂಗ್ ಹ್ಯಾಂ ರಸ್ತೆ), ಆಸ್ಟರ್ ಸಿಎಂಐ ಆಸ್ಪತ್ರೆ, ಕೊಲಂಬಿಯಾ ಏಷಿಯಾ ಆಸ್ಪತ್ರೆ ಹಾಗೂ ಬ್ಯಾಪ್ಟಿಸ್ಟ್ ಆಸ್ಪತ್ರೆಗಳಿಗೆ ಸೋಮವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ಈ ಆಸ್ಪತ್ರೆಗಳು ತಮ್ಮಲ್ಲಿರುವ ಹಾಸಿಗೆಗಳ ಬಗ್ಗೆ ಸಮರ್ಪಕವಾದ ಮಾಹಿತಿ ನೀಡದೇ ಇರುವುದು ತಪಾಸಣೆ ವೇಳೆ ಬೆಳಕಿಗೆ ಬಂದಿತ್ತು. ಈ ಆಸ್ಪತ್ರೆಗಳಿಗೆ ಮುಖ್ಯ ಆಯುಕ್ತರು ಸ್ಥಳದಲ್ಲೇ ತುರ್ತು ನೋಟಿಸ್ ಜಾರಿ ಮಾಡಿದ್ದರು. ಶೇ 50 ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ಒದಗಿಸದೇ ಹೋದರೆ, ಆಸ್ಪತ್ರೆಗಳ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದ್ದರು.

ಮುಖ್ಯ ಆಯುಕ್ತರ ನೋಟಿಸ್‌ಗೆ ಈ ಐದೂ ಆಸ್ಪತ್ರೆಗಳು ಉತ್ತರಿಸಿವೆ. ‘ನಾವು ಈಗ ಕೋವಿಡೇತರ ಕಾಯಿಲೆಯ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದೇವೆ. ಈ ಹಾಸಿಗೆಗಳು ಖಾಲಿ ಆದಂತೆಯೇ ಹಂತ ಹಂತವಾಗಿ ಶೇ 50 ರಷ್ಟು ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ನೀಡುತ್ತೇವೆ’ ಎಂದು ಮುಖ್ಯ ಆಯುಕ್ತರಿಗೆ ಪತ್ರ ಬರೆದು ಸಮಜಾಯಿಷಿ ನೀಡಿವೆ. ’ಈಗಾಗಲೇ ಹೆಚ್ಚುವರಿ ಹಾಸಿಗೆಗಳನ್ನು ಕೋವಿಡ್ ರೋಗಿಗಳ ಚಿಕಿತ್ಸೆಗೆ ನೀಡಲು ಪ್ರಾರಂಭಿಸಿವೆ’ ಎಂದು ಬಿಬಿಎಂಪಿ ತಿಳಿಸಿದೆ.

ಡಿಸಿಎಂ ಅಶ್ವತ್ಥನಾರಾಯಣ ಹೇಳಿಕೆ: ಕೋವಿಡ್ ಪರೀಕ್ಷೆ ಹೆಚ್ಚಿಸಲು ಸೂಚನೆ

13 ಚಿತಾಗಾರಗಳಲ್ಲಿ ಅಂತ್ಯಕ್ರಿಯೆಗೆ ವ್ಯವಸ್ಥೆ

ಬೆಂಗಳೂರು: ‘ಕೋವಿಡ್‌ನಿಂದ ಮೃತಪಟ್ಟವರ ಗೌರವಯುತ ಅಂತ್ಯಕ್ರಿಯೆಗೆ ಎಲ್ಲ ಕ್ರಮ ಕೈಗೊಳ್ಳಲಾಗಿದೆ. ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಜೊತೆಗೂ ಮಾತನಾಡಿದ್ದೇನೆ. ನಗರದ 13 ಚಿತಾಗಾರಗಳಲ್ಲೂ ಅಂತ್ಯಕ್ರಿಯೆ ನಡೆಸಲು ಅನುವು ಮಾಡಿಕೊಡುವಂತೆ ಸೂಚಿಸಿದ್ದೇನೆ’ ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ನಗರದ ವಿವಿಧ ಆಸ್ಪತ್ರೆಗಳು ಹಾಗೂ ಪ್ರಯೋಗಾಲಯಗಳಿಗೆ ಬುಧವಾರ ಭೇಟಿ ನೀಡಿ, ಪರಿಸ್ಥಿತಿ ಅವಲೋಕಿಸಿದರು. ಬಳಿಕ ಮಾಧ್ಯಮದವರ ಜೊತೆ ಮಾತನಾಡಿದರು.

‘ಆಯ್ದ ಚಿತಾಗಾರಗಳಲ್ಲಷ್ಟೇ ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆ ನೆರವೇರಿಸಲಾಗುತ್ತಿತ್ತು. ಹೀಗಾಗಿ ಸಮಸ್ಯೆ ತಲೆದೋರಿತ್ತು. ಇನ್ನು ಮುಂದೆ ಈ ಸಮಸ್ಯೆ ಉದ್ಭವಿಸುವುದಿಲ್ಲ’ ಎಂದರು.

> **ಕೆಮ್ಮು, ನೆಗಡಿಯಂತಹ ರೋಗ ಲಕ್ಷಣಗಳಿದ್ದವರು ಕಡ್ಡಾಯವಾಗಿ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು.**
> **ಡಾ.ಸಿ.ಎನ್.ಅಶ್ವತ್ಥನಾರಾಯಣ,** ಉಪಮುಖ್ಯಮಂತ್ರಿ

‘ಪ್ರತಿ ದಿನವೂ ಪ್ರಯೋಗಾಲಯಗಳಿಗೆ ಕನಿಷ್ಠ 3 ಬ್ಯಾಚ್‌ಗಳಲ್ಲಿ ಮಾದರಿ ಕಳುಹಿಸಬೇಕು. ಅವುಗಳನ್ನು ಸ್ವೀಕರಿಸಿದ 24 ಗಂಟೆಯೊಳಗೆ ಫಲಿತಾಂಶ ಪ್ರಕಟಿಸುವ ಕೆಲಸ ಆಗಬೇಕು. ಇದರಿಂದ ಸೋಂಕಿತರಿಗೆ ಶೀಘ್ರವೇ ಚಿಕಿತ್ಸೆ ನೀಡಲು ಅನುಕೂಲವಾಗುತ್ತದೆ. ಜೀವಹಾನಿ ಕೂಡ ತಪ್ಪಿಸಬಹುದು’ ಎಂದು ಆಸ್ಪತ್ರೆಗಳ ಹಿರಿಯ ವೈದ್ಯಾಧಿಕಾರಿಗಳು ಹಾಗೂ ಆಡಳಿತ ವರ್ಗದವರಿಗೆ ಸೂಚಿಸಿದರು.

‘ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ 8 ಸಾವಿರ ಲೀಟರ್ ಸಾಮರ್ಥ್ಯದ ಆಕ್ಸಿಜನ್ ಪ್ಲಾಂಟ್ ಇದೆ. ನಿತ್ಯವೂ 4 ಸಾವಿರ ಲೀಟರ್ ಬಳಕೆ ಆಗುತ್ತಿದೆ ಎಂದು ಆಸ್ಪತ್ರೆಯ ವೈದ್ಯರು ಮಾಹಿತಿ ನೀಡಿದ್ದಾರೆ. ಕೋವಿಡ್ ಮೆಡಿಕಲ್ ಕಿಟ್ ಪೂರೈಕೆಯಲ್ಲಿ ಸಮಸ್ಯೆಯಾಗಿದೆ. ಖರೀದಿಯಲ್ಲಿ ಆಗಿರುವ ಗೊಂದಲದಿಂದ ಸಮಸ್ಯೆ ಉದ್ಭವಿಸಿದೆ. ಶೀಘ್ರವೇ ಸರಿಪಡಿಸಲಾಗುತ್ತದೆ’ ಎಂದರು.

‘ಸೋಂಕಿಗೊಳಗಾದವರು ನಿರ್ದಿಷ್ಟ ಆಸ್ಪತ್ರೆಯೇ ಬೇಕೆಂದು ಕೂರಬಾರದು. ಕೆ.ಸಿ ಜನರಲ್ ಆಸ್ಪತ್ರೆಯಲ್ಲಿ 120 ವೆಂಟಿಲೇಟರ್‌ಗಳಿವೆ. 450 ಹಾಸಿಗೆಗಳ ಪೈಕಿ 180ಕ್ಕೂ ಹೆಚ್ಚು ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗೆ ಮೀಸಲಿಡಲಾಗಿದೆ. ಇನ್ನೂ 100 ಹಾಸಿಗೆಗಳ ವ್ಯವಸ್ಥೆ ಮಾಡಲು ಸೂಚಿಸಲಾಗಿದೆ’ ಎಂದರು.

‘ಈವರೆಗೆ ದಿನಕ್ಕೆ ಒಮ್ಮೆ ಮಾತ್ರ ಕೊರೊನಾ ಸೋಂಕಿತರ ಮಾದರಿ ಸ್ವೀಕರಿಸುತ್ತಿದ್ದ ರಾಜಾಜಿನಗರದ ಲೈಫ್ ಸೆಲ್ ಲ್ಯಾಬ್, ಈಗ 3 ಬ್ಯಾಚ್‌ಗಳಲ್ಲಿ ಮಾದರಿ ಕಳಿಸಿದರೂ ಪರೀಕ್ಷೆ ಮಾಡಿ ಫಲಿತಾಂಶ ನೀಡಲು ಮುಂದೆ ಬಂದಿದೆ. ಇಎಸ್‌ಐ ಆಸ್ಪತ್ರೆಯಲ್ಲಿ 420 ಹಾಸಿಗೆಗಳಿದ್ದು, ಈ ಪೈಕಿ 120 ಹಾಸಿಗೆಗಳನ್ನು ಕೊರೊನಾ ಸೋಂಕಿತರ ಚಿಕಿತ್ಸೆಗೆ ಮೀಸಲಿಡಲಾಗಿದೆ. ಇದನ್ನು 180ಕ್ಕೆ ಹೆಚ್ಚಿಸುವಂತೆ ನಿರ್ದೇಶಿಸಲಾಗಿದೆ’ ಎಂದು ತಿಳಿಸಿದರು.

‘ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ 350 ಹಾಸಿಗೆಗಳ ವ್ಯವಸ್ಥೆ ಮಾಡಲಾಗಿದೆ. ಇದನ್ನು 750ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಇಲ್ಲಿ ಈಗಾಗಲೇ 50 ವೆಂಟಿಲೇಟರ್‌ಗಳಿವೆ’ ಎಂದು ಅಶ್ವತ್ಥನಾರಾಯಣ ತಿಳಿಸಿದರು.

ಶೇ 50 ಹಾಸಿಗೆ ನೀಡದಿದ್ದರೆ ಕ್ರಮ: ಖಾಸಗಿ ಆಸ್ಪತ್ರೆಗಳಿಗೆ ಎಚ್ಚರಿಕೆ

ಕೆ.ಆರ್.ಪುರ: ಮಹದೇವಪುರ ವಲಯದ ಬಿಬಿಎಂಪಿ ವಾರ್ಡ್ ಹಾಗೂ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಹನ್ನೊಂದು ಸಾವಿರಕ್ಕೂ ಹೆಚ್ಚು ಕೋವಿಡ್ ಪ್ರಕರಣ ದೃಢಪಟ್ಟಿದ್ದು, ಕೊರೊನಾ ನಿಯಂತ್ರಣ ಮಾಡಲು ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಿಗೆ ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ ಎಂದು ನಗರಾಭಿವೃದ್ಧಿ ಹಾಗೂ ಕೋವಿಡ್ ವಲಯ ಉಸ್ತುವಾರಿ ಬೈರತಿ ಬಸವರಾಜ ಹೇಳಿದರು.

ಮಹದೇವಪುರ ಕ್ಷೇತ್ರದ ವೈಟ್ ಫೀಲ್ಡ್ ನಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದರು.

’ಖಾಸಗಿ ಆಸ್ಪತ್ರೆಗಳು ಶೇ 50 ರಷ್ಟು ಹಾಸಿಗೆಗಳನ್ನು ಕಡ್ಡಾಯವಾಗಿ ನೀಡತಕ್ಕದ್ದು. ಹಾಸಿಗೆ ನೀಡದ ಆಸ್ಪತ್ರೆಗಳ ವಿರುದ್ಧ ಶಿಸ್ತು ಕ್ರಮಕೈಗೊಳ್ಳಲಾಗುವುದು. ಮಹದೇವಪುರ ವಲಯದಲ್ಲಿ 1800 ಹಾಸಿಗೆಗಳನ್ನು ಸರ್ಕಾರಕ್ಕೆ ನೀಡಬೇಕೆಂದು ಆಸ್ಪತ್ರೆಗಳಿಗೆ ಮನವಿ ಮಾಡಲಾಗಿದೆ‘ ಎಂದು ಹೇಳಿದರು.

ಬಿಬಿಎಂಪಿ ವಿಶೇಷ ಆಯುಕ್ತ ರಂದೀಪ್, ಮಹದೇವಪುರ ವಲಯ ಕೋವಿಡ್ ಸಂಯೋಜಕಿ ಮಂಜುಳಾ, ಡಿಎಚ್‌ಒ ಡಾ.ಸುರೇಂದ್ರ, ಜಂಟಿ ಆಯುಕ್ತ ವೆಂಕಟಾಚಲಪತಿ, ಡಿಸಿಪಿ ದೇವರಾಜ್ ಇದ್ದರು.

ಔಷಧ ನಿಯಂತ್ರಣ ಇಲಾಖೆಯಲ್ಲಿ ‘ವಾರ್ ರೂಂ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರ ಚಿಕಿತ್ಸೆಗೆ ಬಳಸುವ ‘ರೆಮ್‌ಡಿಸಿವಿರ್’ ಚುಚ್ಚುಮದ್ದು ಹಾಗೂ ವೈದ್ಯಕೀಯ ಆಮ್ಲಜನಕದ ಅವಶ್ಯಕತೆ ಮತ್ತು ಲಭ್ಯತೆಯ ಕುರಿತು ಮಾಹಿತಿ ಸಂಗ್ರಹಿಸಿ ಒದಗಿಸಲು ಕರ್ನಾಟಕ ಔಷಧ ನಿಯಂತ್ರಣ ಇಲಾಖೆಯು ‘ವಾರ್ ರೂಂ’ ಆರಂಭಿಸಿದೆ.

‘ಕೊರೊನಾ ಎರಡನೇ ಅಲೆ ತೀವ್ರ ಸ್ವರೂಪ ಪಡೆದುಕೊಂಡಿದ್ದು, ಕೋವಿಡ್ ಪ್ರಕರಣಗಳು ಏರುಗತಿಯಲ್ಲಿ ಸಾಗಿವೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ‘ರೆಮ್‌ಡಿಸಿವಿರ್’ ಚುಚ್ಚುಮದ್ದು ಹಾಗೂ ವೈದ್ಯಕೀಯ ಆಮ್ಲಜನಕದ ಅವಶ್ಯಕತೆ ಹೆಚ್ಚಿದೆ. ಇವುಗಳನ್ನು ಸಕಾಲದಲ್ಲಿ ಒದಗಿಸುವ ಮೂಲಕ ಕೋವಿಡ್ ರೋಗಿಗಳ ಚಿಕಿತ್ಸೆಗೆ ನೆರವಾಗಬೇಕಿದೆ. ಈ ಉದ್ದೇಶದಿಂದ ಇಲಾಖೆಯ ಕೇಂದ್ರ ಕಚೇರಿಯಲ್ಲಿ ‘ವಾರ್ ರೂಂ’ ಆರಂಭಿಸಲಾಗಿದೆ. ಇಲಾಖೆಯ ಅಧಿಕಾರಿ ಹಾಗೂ ನೌಕರರನ್ನು ಮೂರು ತಂಡಗಳನ್ನಾಗಿ ವಿಭಾಗಿಸಲಾಗಿದೆ. ಇವರು ಪಾಳಿ ಮಾದರಿಯಲ್ಲಿ ಕೆಲಸ ಮಾಡಲಿದ್ದಾರೆ’ ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

‘ಮೊದಲನೇ ಪಾಳಿಯವರು ಬೆಳಿಗ್ಗೆ 6ರಿಂದ ಮಧ್ಯಾಹ್ನ 2, ಎರಡನೇ ಪಾಳಿಯವರು ಮಧ್ಯಾಹ್ನ 2ರಿಂದ ರಾತ್ರಿ 10 ಹಾಗೂ ಮೂರನೇ ಪಾಳಿಯವರು ರಾತ್ರಿ 10ರಿಂದ ಮರುದಿನ ಬೆಳಿಗ್ಗೆ 6ರವರೆಗೆ ಕಾರ್ಯನಿರ್ವಹಿಸಲಿದ್ದಾರೆ. ಇದು ಒಂದು ತಿಂಗಳು ಅಥವಾ ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ’ ಎಂದೂ ಹೇಳಲಾಗಿದೆ.

ಅಧಿಕಾರಿಗಳ ನಿದ್ದೆಗೆಡಿಸಿದ ಕೋವಿಡ್ • ರಾತ್ರಿ ವೇಳೆಯೂ ಸತತ ಕರೆಗಳು

‘ನಾವು ನಿತ್ಯ ಎರಡು ತಾಸು ನಿದ್ರೆ ಮಾಡಿದರೆ ಹೆಚ್ಚು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಎರಡನೇ ಅಲೆ ಬಿಬಿಎಂಪಿ ಅಧಿಕಾರಿಗಳನ್ನು ಅಕ್ಷರಶಃ ನಿದ್ದೆಗೆಡಿಸಿದೆ. ಕೋವಿಡ್ ಪ್ರಕರಣಗಳ ಹೆಚ್ಚಳದಿಂದ ಆಸ್ಪತ್ರೆಗಳಲ್ಲಿ ಐಸಿಯು ಅಥವಾ ಆಮ್ಲಜನಕ ಪೂರೈಕೆ ವ್ಯವಸ್ಥೆ ಇರುವ ಹಾಸಿಗೆಗಳನ್ನು ಒದಗಿಸುವಂತೆ ಕೋರಿ ಸೋಂಕಿತರ ಬಂಧುಗಳು, ಜನಪ್ರತಿನಿಧಿಗಳು, ಪಾಲಿಕೆಯ ಮಾಜಿ ಸದಸ್ಯರು ಹಾಗೂ ಇತರ ಕೆಲವು ಪ್ರಭಾವಿ ವ್ಯಕ್ತಿಗಳು ಹಗಲು ರಾತ್ರಿ ಎನ್ನದೇ ಅಧಿಕಾರಿಗಳಿಗೆ ಕರೆ ಮಾಡುತ್ತಿದ್ದಾರೆ.

‘ಕಳೆದ ಒಂದು ವಾರದಿಂದ ಪ್ರತಿ ರಾತ್ರಿ ಎರಡರಿಂದ ಮೂರು ಗಂಟೆಗಳಷ್ಟು ಕಾಲ ನಿದ್ರೆ ಮಾಡಿದರೆ ಹೆಚ್ಚು. ಹಗಲುರಾತ್ರಿ ಎನ್ನದೇ ಒಂದೇ ಸಮನೆ ದೂರವಾಣಿ ಕರೆಗಳು ಬರುತ್ತಲೇ ಇರುತ್ತವೆ. ಸಾಧ್ಯವಾದಷ್ಟು ಕರೆಗಳಿಗೆ ಉತ್ತರಿಸುತ್ತೇವೆ. ಸಮಸ್ಯೆ ಆಲಿಸಿ ಬಗೆಹರಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಅಧಿಕಾರಿಯೊಬ್ಬರು ಹೇಳಿದರು.

‘ಆಸ್ಪತ್ರೆಗಳಲ್ಲಿ ಹಾಸಿಗೆಗಳ ತೀವ್ರ ಅಭಾವ ಎದುರಾಗಿದೆ. ಬರುವ ಕರೆಗಳಲ್ಲಿ, ಐಸಿಯು ಹಾಸಿಗೆಗಳನ್ನು ಒದಗಿಸುವ ಬೇಡಿಕೆಗೆ ಸಂಬಂಧಿಸಿದವೇ ಜಾಸ್ತಿ. ಐಸಿಯು ಹಾಸಿಗೆಗಳ ತೀವ್ರ ಕೊರತೆ ಇದೆ. ನಾವು ಹೊಂದಿಸುವುದಾದರೂ ಹೇಗೆ’ ಎಂದರು.

‘ಕೋವಿಡ್ ಎರಡನೇ ಅಲೆಯನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲು ಐಸಿಯು ಹಾಸಿಗೆಗಳನ್ನು ಇನ್ನಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಜ್ಜುಗೊಳಿಸಬೇಕಿತ್ತು ನಿಜ. ಆದರೆ, ಅದು ನಮ್ಮ ಕೈಯಲ್ಲಿ ಇಲ್ಲ. ಎಷ್ಟೋ ಬಾರಿ ಕರೆ ಸ್ವೀಕರಿಸಿ ಜನರಿಂದ ಬೈಯಿಸಿಕೊಂಡಿದ್ದೇವೆ. ಆದರೂ ಸಮಚಿತ್ತದಿಂದ ಅವರ ಸಮಸ್ಯೆಗೆ ಸ್ಪಂದಿಸುತ್ತಿದೇವೆ’ ಎಂದು ಈ ಹಿಂದೆ ಎರಡು ಬಾರಿ ಸ್ವತಃ ಕೊರೊನಾ ಸೋಂಕಿಗೆ ಒಳಗಾಗಿದ್ದ ಹಿರಿಯ ಅಧಿಕಾರಿ ಪರಿಸ್ಥಿತಿಯ ಒತ್ತಡವನ್ನು ವಿವರಿಸಿದರು.

‘ಬೊಮ್ಮನಹಳ್ಳಿ ವಲಯದಲ್ಲಿ ಆರೋಗ್ಯ ಇಲಾಖೆಯ ಪ್ರಮುಖ ಅಧಿಕಾರಿಯೊಬ್ಬರ ಕುಟುಂಬದ ಮೂವರು ಸದಸ್ಯರು ಕೋವಿಡ್‌ಗೆ ತುತ್ತಾಗಿದ್ದಾರೆ. ಈ ನಡುವೆಯೂ ಈ ಅಧಿಕಾರಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ. ಕೋವಿಡ್ ಹರಡುವುದಕ್ಕೆ ಅಧಿಕಾರಿಗಳೇ ಕಾರಣ ಎಂಬ ರೀತಿಯಲ್ಲಿ ಜನರು ಆಡಿಕೊಳ್ಳುವಾಗ ಕರ್ತವ್ಯ ನಿಷ್ಠೆಯಿಂದ ಕೆಲಸ ಮಾಡುವ ನಮ್ಮಂಥವರಿಗೆ ಖಂಡಿತಾ ನೋವಾಗುತ್ತದೆ’ ಎಂದು ಇನ್ನೊಬ್ಬ ಅಧಿಕಾರಿ ತಿಳಿಸಿದರು.

‘ಹಾಸಿಗೆ ವ್ಯವಸ್ಥೆ ಕಲ್ಪಿಸಿದ್ದೇವೆ’

’ಚಿಕಿತ್ಸೆಗೆ ಹಾಸಿಗೆ ಸಿಗದೇ ಸಮಸ್ಯೆ ಎದುರಿಸಿದ ಸರ್ವಜ್ಞನಗರ ಕ್ಷೇತ್ರದ ಶಾಮಣ್ಣ ಗಾರ್ಡನ್ ನಿವಾಸಿ ಕರುಣಾಮೂರ್ತಿ (54) ಅವರಿಗೆ ಮಂಗಳವಾರ ರಾತ್ರಿಯೇ ಆಸ್ಪತ್ರೆಯೊಂದರಲ್ಲಿ ಹಾಸಿಗೆ ವ್ಯವಸ್ಥೆ ಮಾಡಿದ್ದೇವೆ’ ಎಂದು ಪೂರ್ವ ವಲಯದ ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದರು.

ಈ ಬಗ್ಗೆ ‘ಪ್ರಜಾವಾಣಿ’ಯು ಏ.21ರ ಸಂಚಿಕೆಯಲ್ಲಿ ‘ದಿನವಿಡೀ ಅಲೆದರೂ ಹಾಸಿಗೆ ಸಿಗಲಿಲ್ಲ’ ಎಂಬ ವರದಿಯನ್ನು ಪ್ರಕಟಿಸಿತ್ತು.

‘ಬಿಬಿಎಂಪಿ ಸಹಾಯವಾಣಿಗೆ ಬರುವ ಎಲ್ಲಾ ಕರೆಗಳಿಗೂ ಸ್ಪಂದಿಸುತ್ತಿದ್ದೇವೆ. ಒಬ್ಬರ ಜೊತೆ ಮಾತನಾಡುವಾಗ ಸಹಾಯವಾಣಿ ಸಂಪರ್ಕಕ್ಕೆ ಸಿಗುವುದಿಲ್ಲ. ದಿನಕ್ಕೆ 150ಕ್ಕೂ ಅಧಿಕ ಮಿಸ್ಡ್ ಕಾಲ್‌ಗಳಿರುತ್ತಿದ್ದವು. ಹಾಗಾಗಿ ಸಮಸ್ಯೆ ಆಗುತ್ತಿತ್ತು. ಇದನ್ನು ಬಗೆಹರಿಸಲು ದೂರವಾಣಿ ಸಂಪರ್ಕವನ್ನು ಎರಡರಿಂದ ಆರಕ್ಕೆ ಹೆಚ್ಚಿಸಲು ಕ್ರಮ ಕೈಗೊಂಡಿದ್ದೇವೆ. ಸಹಾಯವಾಣಿ ಕೇಂದ್ರಕ್ಕೆ ಹೆಚ್ಚುವರಿ ಸಿಬ್ಬಂದಿಯನ್ನೂ ನಿಯೋಜಿಸಲಾಗುತ್ತಿದೆ’ ಎಂದು ಅವರು ಹೇಳಿದರು.

‘ಆಮ್ಲಜನಕ ಪೂರೈಕೆ ವ್ಯವಸ್ಥೆ ಇರುವ ಹಾಸಿಗೆಗಳ ಕೊರತೆ ಇದೆ. ಈ ಸಮಸ್ಯೆ ನೀಗಿಸಲು ಕೋವಿಡ್ ಆರೈಕೆ ಕೇಂದ್ರದಲ್ಲಿ ಆಮ್ಲಜನಕ ಪೂರಣ ವ್ಯವಸ್ಥೆ ಇರುವ ಹಾಸಿಗೆ ಸೌಕರ್ಯ ಕಲ್ಪಿಸಲು ಸಿದ್ಧತೆ ನಡೆದಿದೆ’ ಎಂದರು.

‘ಹೆಬ್ಬಾಳ ಪಶುವೈದ್ಯಕೀಯ ಕಾಲೇಜಿನ ಪ್ರಾಂಗಣದಲ್ಲಿ 60 ಹಾಸಿಗೆ ಸಾಮರ್ಥ್ಯದ ಕೋವಿಡ್ ಆರೈಕೆ ಕೇಂದ್ರ ಸಜ್ಜಾಗಿದೆ. ರೋಗ ಲಕ್ಷಣ ಇಲ್ಲದ ಕೋವಿಡ್ ರೋಗಿಗಳ ಆರೈಕೆಯನ್ನು ಗುರುವಾರದಿಂದಲೇ ಇಲ್ಲಿ ಆರಂಭಿಸುತ್ತೇವೆ’ ಎಂದು ಪೂರ್ವ ವಲಯದ ಜಂಟಿ ಆಯುಕ್ತರಾದ ಪಲ್ಲವಿ ತಿಳಿಸಿದರು.

ಗುರುವಾರ, ಏಪ್ರಿಲ್ 22, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 112 | ಪುಟ 18

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಬಹುತೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕಂಪ್ಯೂಟರ್ ಜ್ಞಾನದ ಬಗ್ಗೆ ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭ. ಸ್ವಲ್ಪ ಶ್ರಮ ಹಾಕಿದರೆ ಒಟ್ಟಾರೆ ಅಂಕ ಗಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.



ವಿಶೇಷ ವರದಿ
ಸಾಕ್ಷ್ಯ ಸೃಷ್ಟಿ ಸಮರ್ಥಿಸುವ ಇನ್ನಷ್ಟು ಸಾಕ್ಷ್ಯ

₹16 ಸಾವಿರದ ಗಡಿ ದಾಟಿದ ಕೊಬ್ಬರಿ 15

ವಾಂಖೆಡೆಯಲ್ಲೂ ಜಯದ ಕನಸು 16

ಎಫ್‌ಐಆರ್‌ಗೆ ಕೋರಿಕೆ ಸಲ್ಲಿಸಿದ ಬಿಎಸ್‌ಎಫ್

ಪಾಕ್ ಪಾರಿವಾಳದ ವಿರುದ್ಧ ದೂರು 10

ನಾಸಿಕ್ ಸರ್ಕಾರಿ ಆಸ್ಪತ್ರೆಯಲ್ಲಿ ದುರಂತ: ಉಸಿರಾಟ ಸಾಧ್ಯವಾಗದೆ ಕೋವಿಡ್ ರೋಗಿಗಳ ಮರಣ

ಆಮ್ಲಜನಕ ವ್ಯತ್ಯಯ: 24 ಸಾವು

ನಾಸಿಕ್/ಮುಂಬೈ (ಪಿಟಿಐ): ನಾಸಿಕ್‌ನ ಡಾ. ಝಾಕಿರ್ ಹುಸೇನ್ ಸರ್ಕಾರಿ ಆಸ್ಪತ್ರೆಯ ಆಮ್ಲಜನಕ ಘಟಕದಲ್ಲಿ ಬುಧವಾರ ಸೋರಿಕೆಯಾಗಿದೆ. ಇದರಿಂದಾಗಿ, ಕೋವಿಡ್ ರೋಗಿಗಳಿಗೆ ಅತ್ಯಗತ್ಯವಾದ ಆಮ್ಲಜನಕ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು ಉಸಿರಾಡಲು ಸಾಧ್ಯವಾಗದೆ 24 ರೋಗಿಗಳು ಮೃತಪಟ್ಟಿದ್ದಾರೆ. ದೇಶವು ಕೋವಿಡ್ ಬಾಧೆಗೆ ಒಳಗಾದ ಬಳಿಕ ಆಸ್ಪತ್ರೆಯಲ್ಲಿ ನಡೆದ ಬಹುದೊಡ್ಡ ದುರಂತ ಇದು.

‘ಟ್ಯಾಂಕ್‌ನಲ್ಲಿ ಸೋರಿಕೆಯಾಗಿದ್ದರಿಂದ ರೋಗಿಗಳಿಗೆ ಆಮ್ಲಜನಕದ ಸರಬರಾಜು ಕಡಿಮೆಯಾಯಿತು. ನಿರ್ಲಕ್ಷ್ಯದಿಂದ ಘಟನೆ ಸಂಭವಿಸಿದೆಯೇ ಎಂಬ ಬಗ್ಗೆ ತನಿಖೆ ನಡೆಸಲಾಗುವುದು’ ಎಂದು ಮಹಾರಾಷ್ಟ್ರದ ಆರೋಗ್ಯ ಸಚಿವ ರಾಜೇಶ್ ಟೋಪೆ ತಿಳಿಸಿದ್ದಾರೆ. ಸೋರಿಕೆಯಾದ ಸಂದರ್ಭದಲ್ಲಿ 22 ಮಂದಿ ಮೃತಪಟ್ಟಿದ್ದರು. ವೆಂಟಿಲೇಟರ್ ಬೆಂಬಲದಲ್ಲಿ ಇದ್ದ ಇಬ್ಬರು ಸಂಜೆಯ ಹೊತ್ತಿಗೆ ಮೃತಪಟ್ಟರು. ಈ ಆಸ್ಪತ್ರೆಯು ಕೋವಿಡ್ ರೋಗಿಗಳಿಗಾಗಿಯೇ ಮೀಸಲಾಗಿತ್ತು.

‘ಟ್ಯಾಂಕ್‌ನ ನಿರ್ವಹಣೆಯನ್ನು ಖಾಸಗಿ ಸಂಸ್ಥೆಯೊಂದು ನೋಡಿಕೊಳ್ಳುತ್ತಿತ್ತು. ಸೋರಿಕೆ ಆದಾಗ ಟ್ಯಾಂಕ್‌ನ ವಾಲ್ವ್‌ನ ಸಮೀಪದಲ್ಲಿದ್ದ ತಂತ್ರಜ್ಞರು ಕೂಡಲೇ ಕಾರ್ಯಪ್ರವೃತ್ತರಾಗಿ ಹೆಚ್ಚಿನ ಸಾವು–ನೋವುಗಳನ್ನು ತಡೆದಿದ್ದಾರೆ’ ಎಂದು ಜಿಲ್ಲಾಧಿಕಾರಿ ಸೂರಜ್ ಮನಧರೆ ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿ ಒಟ್ಟು 150 ರೋಗಿಗಳಿದ್ದರು. ಅವರಲ್ಲಿ 23 ಮಂದಿಗೆ ವೆಂಟಿಲೇಟರ್ ನೆರವು ಒದಗಿಸಲಾಗಿತ್ತು. ಉಳಿದವರಿಗೆ ಆಮ್ಲಜನಕ ನೀಡಲಾಗುತ್ತಿತ್ತು. ಬೆಳಿಗ್ಗೆ 10.30ರ ಸುಮಾರಿಗೆ ಆಮ್ಲಜನಕ ಸಂಗ್ರಹ ಟ್ಯಾಂಕ್‌ನ ಒಂದು ಕಡೆ ಬಿರುಕಾಗಿ ಸೋರಿಕೆ ಆರಂಭವಾಗಿತ್ತು. ಇದು ಗಮನಕ್ಕೆ ಬರುತ್ತಿದ್ದಂತೆ ದೊಡ್ಡ ಸಿಲಿಂಡರ್‌ಗಳನ್ನು ಅಳವಡಿಸಿ ರೋಗಿಗಳಿಗೆ ಆಮ್ಲಜನಕ ಸರಬರಾಜು ಮಾಡುವ ಪ್ರಯತ್ನ ಆರಂಭಿಸಲಾಯಿತು. ಜತೆಯಲ್ಲೇ ಕೆಲವು ರೋಗಿಗಳನ್ನು ಸ್ಥಳಾಂತರಿಸುವ ಕೆಲಸವನ್ನೂ ಮಾಡಲಾಗಿತ್ತು. ಇದೇ ಸಮಯದಲ್ಲಿ ಆಸ್ಪತ್ರೆಗೆ ಆಮ್ಲಜನಕ ಸರಬರಾಜು ಮಾಡುವ ಟ್ಯಾಂಕರ್ ಸಹ ಬಂದಿತ್ತು. ಅದರಲ್ಲಿದ್ದ ತಂತ್ರಜ್ಞರು ಟ್ಯಾಂಕ್‌ನ ಬೀಗ ಒಡೆದು, ವಾಲ್ವ್ ಅನ್ನು ಮುಚ್ಚಿ, ಸೋರಿಕೆಯನ್ನು ತಡೆದರು ಎಂದು ಅಧಿಕಾರಿ ತಿಳಿಸಿದ್ದಾರೆ.

‘ಮೃತರ ಕುಟುಂಬಗಳಿಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ತಲಾ ಐದು ಲಕ್ಷ ರೂಪಾಯಿ ಆರ್ಥಿಕ ನೆರವು ಒದಗಿಸಲಾಗುವುದು’ ಎಂದು ಸಚಿವ ಟೋಪೆ ತಿಳಿಸಿದ್ದಾರೆ.

ಇನ್ನಷ್ಟು ಸುದ್ದಿಗಳು 3, 4, 11

ನಾಸಿಕ್‌ನ ಡಾ. ಝಾಕಿರ್ ಹುಸೇನ್ ಆಸ್ಪತ್ರೆಯಲ್ಲಿ ಆಮ್ಲಜನಕದ ಟ್ಯಾಂಕ್‌ನಲ್ಲಿ ಸೋರಿಕೆಯಾಗುತ್ತಿದ್ದ ಕ್ಷಣದ ಚಿತ್ರ

ತಾಳಿ ಅಡವಿಡಲು ಮುಂದಾದ ಮಗಳು

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ತಂದೆಯ ಶವ ಸಾಗಿಸಿದ್ದ ಖಾಸಗಿ ಆಂಬುಲೆನ್ಸ್ ಮಾಲೀಕ ಕೇಳಿದಷ್ಟು ಹಣ ನೀಡಲು ಸಾಧ್ಯವಾಗದೇ, ಮೃತ ವ್ಯಕ್ತಿಯ ಮಗಳು ತನ್ನ ತಾಳಿಯನ್ನೇ ಅಡವಿಡಲು ಮುಂದಾಗಿದ್ದರು.

‘ಕೋವಿಡ್‌ನಿಂದಾಗಿ ನನ್ನ ತಂದೆ ಗಂಭೀರ ಸ್ಥಿತಿಯಲ್ಲಿದ್ದರು. ಮಂಗಳವಾರ ಸಂಜೆ ಜೈ ಹನುಮಾನ್ ಆಂಬುಲೆನ್ಸ್‌ನವರಿಗೆ ಕರೆ ಮಾಡಿದೆವು. ಮತ್ತಿಕೆರೆಯಿಂದ ಸುಬ್ಬಯ್ಯ ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಅವರು ಪ್ರಾಣ ಬಿಟ್ಟಿದ್ದರು. ಆಂಬುಲೆನ್ಸ್‌ನ ಸಿಬ್ಬಂದಿ ₹60 ಸಾವಿರ ಕೊಟ್ಟರೆ ಮಾತ್ರ ಶವ ಕೊಡುವುದಾಗಿ ಹೇಳಿದರು. ಅದಕ್ಕೆ ಅನಿವಾರ್ಯವಾಗಿ ಮಾಂಗಲ್ಯ ಅಡವಿಡಲು ಮುಂದಾಗಿದ್ದೆ’ ಎಂದು ಮೃತರ ಮಗಳು ಹೇಳಿದರು.

11ನೇ ಪುಟ ನೋಡಿ

ಕೋವಿಶೀಲ್ಡ್ ದರ: ರಾಜ್ಯಗಳಿಗೆ ₹400, ಖಾಸಗಿಗೆ ₹600

ನವದೆಹಲಿ: ಕೋವಿಶೀಲ್ಡ್ ಲಸಿಕೆ ಮಾರಾಟ ದರವನ್ನು ಪುಣೆಯ ಸೀರಂ ಇನ್‌ಸ್ಟಿಟ್ಯೂಟ್ ಬುಧವಾರ ಪ್ರಕಟಿಸಿದೆ. ರಾಜ್ಯ ಸರ್ಕಾರಗಳಿಗೆ ಪ್ರತೀ ಡೋಸ್‌ಗೆ ₹400 ಮತ್ತು ಖಾಸಗಿ ಆಸ್ಪತ್ರೆಗಳಿಗೆ ₹600ಕ್ಕೆ ಮಾರಾಟ ಮಾಡುವುದಾಗಿ ತಿಳಿಸಿದೆ.

ನಾಲ್ಕೈದು ತಿಂಗಳ ನಂತರ ಲಸಿಕೆಗಳು ಚಿಲ್ಲರೆ ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಲಭ್ಯವಾಗಲಿವೆ ಎಂದು ಸಂಸ್ಥೆಯ ಸಿಇಒ ಅದಾರ್ ಪೂನಾವಾಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. 18 ವರ್ಷ ದಾಟಿದ ದೇಶದ ಎಲ್ಲರಿಗೂ ಲಸಿಕೆ ನೀಡಲು ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದ ಬಳಿಕ ಸೀರಂ ಸಂಸ್ಥೆಯು ದರಗಳನ್ನು ಪ್ರಕಟಿಸಿದೆ. ಜನವರಿಯಲ್ಲಿ ಲಸಿಕೆ ಅಭಿಯಾನ ಪ್ರಾರಂಭವಾದಾಗ ಪುಣೆಯ ಲಸಿಕೆ ತಯಾರಕ ಸಂಸ್ಥೆಯು ಪ್ರತಿ ಡೋಸ್‌ಗೆ ₹150 ವಿಶೇಷ ದರದಲ್ಲಿ ಕೇಂದ್ರ ಸರ್ಕಾರಕ್ಕೆ ಲಸಿಕೆಗಳನ್ನು ಒದಗಿಸಿತ್ತು.

11ನೇ ಪುಟ ನೋಡಿ

ತುಂಬಿಸುತ್ತಿದ್ದಾಗ ಘಟನೆ

ಆಸ್ಪತ್ರೆಯಲ್ಲಿ ಇತ್ತೀಚೆಗಷ್ಟೇ ಆಮ್ಲಜನಕದ 2 ಟ್ಯಾಂಕ್‌ಗಳನ್ನು ಅಳವಡಿಸಿ ಅದರ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗೆ ವಹಿಸಲಾಗಿತ್ತು. ಟ್ಯಾಂಕರ್‌ನಿಂದ ಒಂದು ಟ್ಯಾಂಕ್‌ಗೆ ಆಮ್ಲಜನಕವನ್ನು ತುಂಬಿಸುತ್ತಿದ್ದ ವೇಳೆ ಈ ಘಟನೆ ಸಂಭವಿಸಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ

ಟ್ಯಾಂಕ್‌ನಲ್ಲಿ ತುಂಬಿದ್ದ ದ್ರವೀಕೃತ ಆಮ್ಲಜನಕದ ತಾಪಮಾನವು ಸುಮಾರು –180 (ಮೈನಸ್) ಡಿಗ್ರಿ ಸೆಲ್ಸಿಯಸ್ ಇತ್ತು. ಇದನ್ನು ಸಂಗ್ರಹಿಸಿಡುವ ಟ್ಯಾಂಕ್‌ನ ಗೋಡೆಗಳ ಮೇಲೆ ವಿಪರೀತವಾದ ಒತ್ತಡವಿರುತ್ತದೆ. ಸೋರಿಕೆ ಶುರುವಾದಾಗ ಟ್ಯಾಂಕ್‌ನಲ್ಲಿ ಸುಮಾರು ಕಾಲುಭಾಗದಷ್ಟು ಆಮ್ಲಜನಕ ತುಂಬಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯ ಕೋವಿಡ್ ಅಂಕಿ–ಅಂಶ

12,22,202 ▲	ಒಟ್ಟು ಸೋಂಕಿತರು (11,98,644 ನಿನ್ನೆಯ ವಿವರ)
1,76,188 ▲	ಸಕ್ರಿಯ ಪ್ರಕರಣಗಳು
10,32,233 ▲	ಗುಣಮುಖರಾದವರು
13,762 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	23,558 ▲
ಗುಣಮುಖ	6,412 ▲
ಸಾವು	116 ▲

904 ಐಸಿಯುನಲ್ಲಿ ಇರುವವರು ▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಾರಿಗೆ ನೌಕರರ ಮುಷ್ಕರ ಅಂತ್ಯ

ಹೈಕೋರ್ಟ್ ಸೂಚನೆಗೆ ಮಣಿದ ಸಾರಿಗೆ ನೌಕರರ ಕೂಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ನಾಲ್ಕು ಸಾರಿಗೆ ನಿಗಮಗಳ ನೌಕರರು ವೇತನ ಪರಿಷ್ಕರಣೆಗೆ ಆಗ್ರಹಿಸಿ 15 ದಿನಗಳಿಂದ ನಡೆಸುತ್ತಿದ್ದ ಮುಷ್ಕರವನ್ನು ಬುಧವಾರ ಸಂಜೆ ಅಂತ್ಯಗೊಳಿಸಿದರು.

ಹೈಕೋರ್ಟ್ ಸೂಚನೆಗೆ ಮಣಿದ ಸಾರಿಗೆ ನೌಕರರ ಕೂಟ, ಮುಷ್ಕರ ಕೈಬಿಡುವ ನಿರ್ಧಾರ ಘೋಷಿಸಿದೆ.

‘ಕೋವಿಡ್ ಎರಡನೇ ಅಲೆ ವ್ಯಾಪಿಸುತ್ತಿರುವುದರಿಂದ ಸಾರಿಗೆ ನೌಕರರು ಮುಷ್ಕರ ನಡೆಸುವ ಸಮಯ ಇದಲ್ಲ’ ಎಂದು ಹೈಕೋರ್ಟ್ ಮಂಗಳವಾರ ಕಟುವಾಗಿ ಹೇಳಿತ್ತು. ಬುಧವಾರ ಬೆಳಿಗ್ಗೆಯಿಂದಲೇ ಕರ್ತವ್ಯಕ್ಕೆ ಹಾಜರಾದ ನೌಕರರ ಸಂಖ್ಯೆಯಲ್ಲಿ ಗಣನೀಯ ಏರಿಕೆಯಾಗಿತ್ತು. ಸಂಜೆ ಪತ್ರಿಕಾಗೋಷ್ಠಿ ನಡೆಸಿದ ಸಾರಿಗೆ ನೌಕರರ ಕೂಟದ ಗೌರವಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್, ಮುಷ್ಕರ ಅಂತ್ಯಗೊಳಿಸುವ ನಿರ್ಧಾರ ಪ್ರಕಟಿಸಿದರು.

‘ಹೈಕೋರ್ಟ್ ನ್ಯಾಯಮೂರ್ತಿಗಳ ಸೂಚನೆಗೆ ತಲೆಬಾಗಿ ಸಾರಿಗೆ ನೌಕರರು ಮುಷ್ಕರ ಅಂತ್ಯಗೊಳಿಸುತ್ತಿದ್ದಾರೆ. ಕರ್ತವ್ಯಕ್ಕೆ ಹಾಜರಾಗಬೇಕು ಎಂಬ ನ್ಯಾಯಾಲಯದ ಸೂಚನೆಯನ್ನು ನೌಕರರು ತಕ್ಷಣದಿಂದಲೇ ಪಾಲಿಸುತ್ತಾರೆ. ಬುಧವಾರ ಎರಡನೇ ಪಾಳಿಯ ನೌಕರರು ಕರ್ತವ್ಯಕ್ಕೆ ಹಾಜರಾಗಲಿದ್ದು, ಗುರುವಾರ ಎಲ್ಲ ನೌಕರರೂ ಕರ್ತವ್ಯಕ್ಕೆ ಮರಳುತ್ತಾರೆ’ ಎಂದು ತಿಳಿಸಿದರು.

‘ಕೋವಿಡ್ ಸಂಕಷ್ಟದ ಕಾಲದಲ್ಲಿ ಜನರಿಗೆ ತೊಂದರೆ ಮಾಡಬಾರದು ಎಂಬ ಸೂಚನೆಯನ್ನು ನ್ಯಾಯಾಲಯ ನೀಡಿದೆ. ಆ ಮಾತನ್ನು ಗೌರವಿಸಿ ತಾತ್ಕಾಲಿಕವಾಗಿ ಮುಷ್ಕರವನ್ನು ಅಂತ್ಯಗೊಳಿಸಲಾಗುತ್ತಿದೆ’ ಎಂದರು.

15 ದಿನಗಳ ಹಗ್ಗ ಜಗ್ಗಾಟ: ಏಪ್ರಿಲ್ 7ರ ಮಧ್ಯಾಹ್ನದಿಂದಲೇ ಸಾರಿಗೆ ನಿಗಮಗಳ ನೌಕರರು ಮುಷ್ಕರ ಆರಂಭಿಸಿದ್ದರು. ಏ.8ರಿಂದ ರಾಜ್ಯದಾದ್ಯಂತ ಸಾರಿಗೆ ನಿಗಮಗಳ ಬಸ್ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು. ನೋಟಿಸ್ ಜಾರಿ, ವರ್ಗಾವಣೆ, ಅಮಾನತು, ಕೆಲಸದಿಂದ ವಜಾ ಮಾಡುವ ಮೂಲಕ ನೌಕರರನ್ನು ಮಣಿಸಲು ಸಾರಿಗೆ ನಿಗಮಗಳು ಪ್ರಯತ್ನಿಸಿದ್ದವು.

ಕೆಎಸ್‌ಆರ್‌ಟಿಸಿ, ಬಿಎಂಟಿಸಿ, ಎನ್‌ಡಬ್ಲ್ಯುಕೆಆರ್‌ಟಿಸಿ ಮತ್ತು ಎನ್‌ಇಕೆಆರ್‌ಟಿಸಿಯ 975ಕಾಯಂ ನೌಕರರನ್ನು ಸೇವೆಯಿಂದ ವಜಾ ಮಾಡಲಾಗಿತ್ತು. ನಾಲ್ಕೂ ನಿಗಮಗಳ 995 ಟ್ರೈನಿ ನೌಕರರನ್ನು ಕೆಲಸದಿಂದ ಕೈಬಿಡಲಾಗಿದೆ. 2,941 ನೌಕರರನ್ನು ಅಮಾನತು ಮಾಡುವ ಮೂಲಕ ಉಳಿದ ಸಿಬ್ಬಂದಿಗೆ ಎಚ್ಚರಿಕೆಯ ಸಂದೇಶ ರವಾನಿಸಲು ಸಾರಿಗೆ ನಿಗಮಗಳು ಪ್ರಯತ್ನಿಸಿದ್ದವು.

13,000 ಬಸ್ ಸಂಚಾರ: ಮಂಗಳವಾರ ನಾಲ್ಕು ನಿಗಮಗಳ ಒಟ್ಟು 7,848 ಬಸ್‌ಗಳು ಸಂಚರಿಸಿದ್ದವು. ಹೈಕೋರ್ಟ್ ಸೂಚನೆಯ ಪರಿಣಾಮವಾಗಿ ಬುಧವಾರ ಬೆಳಿಗ್ಗೆಯಿಂದಲೇ ಹೆಚ್ಚಿನ ಸಂಖ್ಯೆಯ ನೌಕರರು ಕರ್ತವ್ಯಕ್ಕೆ ಹಾಜರಾಗಿದ್ದರು. ರಾತ್ರಿಯವರೆಗೂ ಒಟ್ಟು 13,000 ಬಸ್‌ಗಳು ಸಂಚಾರ ನಡೆಸಿವೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ಮುಷ್ಕರದ ನಡುವೆಯೂ ಹಲವು ನೌಕರರು ಕರ್ತವ್ಯಕ್ಕೆ ಹಾಜರಾಗಿ ಸಹಕಾರ ನೀಡಿದ್ದಾರೆ. ಬುಧವಾರ 13,000 ಬಸ್‌ಗಳು ಸಂಚರಿಸಿದ್ದು, ಗುರುವಾರದಿಂದ ಪೂರ್ಣ ಪ್ರಮಾಣದಲ್ಲಿ ಬಸ್‌ಗಳು ಸಂಚರಿಸಲಿವೆ’ ಎಂದು ಸಾರಿಗೆ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ತಿಳಿಸಿದ್ದಾರೆ.

₹ 287 ಕೋಟಿ ಆದಾಯ ನಷ್ಟ

15 ದಿನಗಳ ಅವಧಿಯ ನೌಕರರ ಮುಷ್ಕರದಿಂದಾಗಿ ನಾಲ್ಕು ಸಾರಿಗೆ ನಿಗಮಗಳಿಗೆ ಒಟ್ಟು ₹ 287 ಕೋಟಿ ಆದಾಯ ನಷ್ಟವಾಗಿದೆ ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ. ಕೆಎಸ್‌ಆರ್‌ಟಿಸಿಗೆ ₹ 122.50 ಕೋಟಿ, ಬಿಎಂಟಿಸಿಗೆ ₹ 45 ಕೋಟಿ, ಎನ್‌ಡಬ್ಲ್ಯುಕೆಆರ್‌ಟಿಸಿಗೆ ₹ 57.50 ಕೋಟಿ ಮತ್ತು ಎನ್‌ಇಕೆಆರ್‌ಟಿಸಿಗೆ ₹ 62 ಕೋಟಿ ಆದಾಯ ನಷ್ಟವಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ತಿರುಮಲದ ಅಂಜನಾದ್ರಿಯೇ ಹನುಮನ ಜನ್ಮಸ್ಥಳ: ಟಿಟಿಡಿ

ತಿರುಪತಿ(ಪಿಟಿಐ): ತಿರುಮಲ ಬಳಿ ಇರುವ ಅಂಜನಾದ್ರಿಯೇ ಆಂಜನೇಯ ದೇವರ ಜನ್ಮಸ್ಥಳ ಎಂದು ತಿರುಪತಿ ತಿರುಮಲ ದೇವಸ್ಥಾನ (ಟಿಟಿಡಿ) ಬುಧವಾರ ಘೋಷಿಸಿದೆ.

ತಿರುಮಲದ ಉತ್ತರ ದಿಕ್ಕಿನಲ್ಲಿ 5 ಕಿ.ಮೀ. ದೂರದಲ್ಲಿ ಜಾಪಾಲಿ ತೀರ್ಥ ಇದೆ. ಪರ್ವತಗಳಿಂದ ಆವೃತ ಈ ಪ್ರದೇಶದಲ್ಲಿಯೇ ಅಂಜನಾದ್ರಿ ಇದ್ದು, ಇದೇ ಆಂಜನೇಯನ ಜನ್ಮಸ್ಥಳ ಎಂದು ತಿರುಪತಿಯ ವೆಂಕಟೇಶ್ವರ ದೇವಸ್ಥಾನದ ಆಡಳಿತ ಮಂಡಳಿಯಾಗಿರುವ ಟಿಟಿಡಿ ಹೇಳಿದೆ.

ಈ ವಿಷಯ ಕುರಿತು ಅಧ್ಯಯನ ನಡೆಸಿ, ಅಭಿಪ್ರಾಯ ತಿಳಿಸುವಂತೆ ತಿರುಪತಿಯಲ್ಲಿರುವ ರಾಷ್ಟ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಮುರಲೀಧರ ಶರ್ಮಾ ಅವರ ನೇತೃತ್ವದಲ್ಲಿ ವಿದ್ವಾಂಸರನ್ನು ಒಳಗೊಂಡ ಸಮಿತಿಯೊಂದನ್ನು ಟಿಟಿಡಿ ರಚಿಸಿತ್ತು.



ತಿರುಮಲ ಬಳಿಯ ಅಂಜನಾದ್ರಿ ಬೆಟ್ಟ

ರಾಮ ನವಮಿ ದಿನವಾದ ಬುಧವಾರ, ತಮಿಳುನಾಡು ರಾಜ್ಯಪಾಲ ಬನ್ವಾರಿಲಾಲ್ ಪುರೋಹಿತ್ ಅವರ ಸಮ್ಮುಖದಲ್ಲಿ ಸಮಿತಿಯು ಈ ಘೋಷಣೆ ಮಾಡಿದೆ. ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎಸ್.ಜವಾಹರ್ ರೆಡ್ಡಿ, ಹೆಚ್ಚುವರಿ ಕಾರ್ಯನಿರ್ವಾಹಕ ಅಧಿಕಾರಿ ಎ.ವಿ.ಧರ್ಮಾರೆಡ್ಡಿ ಉಪಸ್ಥಿತರಿದ್ದರು.'ಶ್ರೀ ಆಂಜನೇಯಸ್ವಾಮಿ ವಾರಿ ಜನ್ಮಸ್ಥಲಂ ತಿರುಮಲೋನಿ ಅಂಜನಾದ್ರಿ'ಎಂಬ ಶಿರೋನಾಮೆಯ ತೆಲುಗು ಭಾಷೆಯಲ್ಲಿರುವ ಕಿರುಹೊತ್ತಗೆಯನ್ನು ಸಮಿತಿ ಸಿದ್ಧಪಡಿಸಿದ್ದು, ಅಂಜನಾದ್ರಿಯೇ ಆಂಜನೇಯ ದೇವರ ಜನ್ಮಸ್ಥಳ ಎಂದು ಅದರಲ್ಲಿ ಪ್ರತಿಪಾದಿಸಲಾಗಿದೆ.

‘ಪುರಾತನ ಸಾಹಿತ್ಯ, ಶಾಸನಗಳು, ಐತಿಹಾಸಿಕ ಸಂಗತಿಗಳು ಹಾಗೂ ಜ್ಯೋತಿರ್ವಿಜ್ಞಾನದ ಆಧಾರದಲ್ಲಿ ಲೆಕ್ಕಾಚಾರ ಮಾಡಲಾಗಿದೆ. ಹಲವಾರು ಸಾಕ್ಷ್ಯಗಳನ್ನು ಸಂಗ್ರಹಿಸಿ, ಅವುಗಳ ಆಧಾರದ ಮೇಲೆ ಈ ತೀರ್ಮಾನಕ್ಕೆ ಬರಲಾಗಿದೆ’ ಎಂದು ಪ್ರೊ.ಶರ್ಮಾ ಹೇಳಿದ್ದಾರೆ.

ಒಳ ಪುಟಗಳು

ಸರ್ಪಸಂಸ್ಕಾರ ಸೇವೆ ರದ್ದು: ಆಕ್ರೋಶ 11
ಕೊಡಗು, ಹಾಸನ ಜಿಲ್ಲೆಯಲ್ಲಿ ಉತ್ತಮ ಮಳೆ 4

ಮಿಸಳ್ ಹಾಪ್ಚಾ

ನಾವು, ನಮ್ಮ ಮಾವು

ನಿಮ್ಮ Prajavani.net ನಲ್ಲಿ ಮತ್ತೊಂದು ವಿಶೇಷ

ವಿಡಿಯೊ ನೋಡಲು QR ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ–5

ಇಂದಿನ ಪಾಡ್‌ಕಾಸ್ಟ್ ವಿಶೇಷ

ಆಟ-ನೋಟ
ವನಿತಾ ಧ್ವನಿ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ಬೇಸರ

ಕಡ್ಡಾಯ ಹಾಜರಿಗೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 21ರಿಂದ ಮೇ 4ರವರೆಗೆ ಶಾಲೆ-ಕಾಲೇಜುಗಳಲ್ಲಿ ನೇರ ತರಗತಿ ಸ್ಥಗಿತಗೊಳಿಸುವಂತೆ ರಾಜ್ಯ ಸರ್ಕಾರ ಮಾರ್ಗಸೂಚಿ ಹೊರಡಿಸಿದ್ದರೂ ಉಪನ್ಯಾಸಕರು, ಸಿಬ್ಬಂದಿ ಕರ್ತವ್ಯಕ್ಕೆ ಹಾಜರಾಗುವಂತೆ ಸೂಚಿಸಿರುವುದು ಗೊಂದಲಕ್ಕೆ ಕಾರಣವಾಗಿದೆ.

‘ವಿದ್ಯಾರ್ಥಿಗಳಿಗೆ ನೇರ ಹಾಜರಾತಿಯಿಂದ ವಿನಾಯಿತಿ ನೀಡಲಾಗಿದ್ದು, ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲು ಪ್ರೋತ್ಸಾಹಿಸಲಾಗಿದೆ. ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕ, ಸಿಬ್ಬಂದಿಗೆ ರಜೆಯಾಗಲಿ ಅಥವಾ ಶೇ 50ರಷ್ಟು ಮಾತ್ರ ಹಾಜರಾತಿಗೆ ಸೂಚಿಸಿಲ್ಲ. ಹೀಗಾಗಿ, ಎಲ್ಲ ಪ್ರಾಂಶುಪಾಲರು, ಉಪನ್ಯಾಸಕರು, ಸಿಬ್ಬಂದಿ ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾಗಬೇಕು’ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಇಲಾಖೆ ಅಧಿಕಾರಿಗಳು ಸೂಚಿಸಿದ್ದಾರೆ.

ಇಲಾಖೆಯ ಈ ನಡೆಗೆ ಆಕ್ಷೇಪ ವ್ಯಕ್ತಪಡಿಸಿರುವ ರಾಜ್ಯ ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ‘ಕೋವಿಡ್ ಹೆಚ್ಚುತ್ತಿರುವುದರಿಂದ ಮನೆಯಿಂದಲೇ ಕರ್ತವ್ಯ ನಿರ್ವಹಿಸಲು ಆದೇಶ ನೀಡಬೇಕು’ ಎಂದು ಇಲಾಖೆಯ ನಿರ್ದೇಶಕರಿಗೆ ಮನವಿ ಸಲ್ಲಿಸಿದೆ.

‘ಶಾಲೆ- ಕಾಲೇಜುಗಳಲ್ಲಿ ನೇರ ತರಗತಿ ಇಲ್ಲದಿರುವ ಅವಧಿಯಲ್ಲಿ ಉಪನ್ಯಾಸಕರಿಗೆ ಬೋಧನಾ ಕರ್ತವ್ಯ ಇಲ್ಲದಿರುವುದರಿಂದ, ಮನೆಯಿಂದಲೇ ಆನ್‌ಲೈನ್ ಮೂಲಕ ಬೋಧನಾ ಕರ್ತವ್ಯ ನಿರ್ವಹಿಸಲು ಅವಕಾಶ ನೀಡಬೇಕು. ಇದರಿಂದ ಇಲಾಖೆಯ ಕಾರ್ಯಗಳಿಗೆ ಯಾವುದೇ ಅಡಚಣೆ ಉಂಟಾಗುವುದಿಲ್ಲ. ಹಲವು ಉಪನ್ಯಾಸಕರಿಗೆ ಈಗಾಗಲೇ ಕೊರೊನಾ ಸೋಂಕು ತಗುಲಿದೆ’ ಎಂದು ಮನವಿಯಲ್ಲಿ ಸಂಘ ಹೇಳಿದೆ.

‘ಬೆಂಗಳೂರು ನಗರದಲ್ಲಿ ಕೋವಿಡ್ ತೀವ್ರವಾಗಿದೆ. ಹೀಗಾಗಿ, ನಿತ್ಯದ ಕೆಲಸ ಕಾರ್ಯಗಳಿಗೆ ಶೇ 50ರಷ್ಟು ಸಿಬ್ಬಂದಿ ಹಾಜರಾಗುವಂತೆ ಸರ್ಕಾರ ಸೂಚಿಸಿದೆ. ವಿದ್ಯಾರ್ಥಿಗಳೇ ಇಲ್ಲದ ಕಾಲೇಜುಗಳಿಗೆ ಎಲ್ಲ ಉಪನ್ಯಾಸಕರು, ಹೋಗಿ ಮಾಡುವುದಾದರೂ ಏನು. ಆನ್‌ಲೈನ್ ತರಗತಿಗಳನ್ನು ಕಾಲೇಜಿನಿಂದಲೇ ಮಾಡಿ ಎಂದೇನೂ ಮಾರ್ಗಸೂಚಿಯಲ್ಲಿ ಇಲ್ಲ. ಮನೆಯಿಂದಲೇ ಆನ್‌ಲೈನ್ ಮಾಡಿದರೆ ತೊಂದರೆ ಏನಿದೆ’ ಎಂದು ಉಪನ್ಯಾಸಕರೊಬ್ಬರು ಪ್ರಶ್ನಿಸಿದರು.

‘ಸಾಧ್ಯವಾದಷ್ಟು ಓಡಾಟಗಳನ್ನು ನಿಯಂತ್ರಿಸುವಂತೆ ಕೋವಿಡ್ ತಾಂತ್ರಿಕ ಸಲಹಾ ಸಮಿತಿಯ ತಜ್ಞರು ಕೂಡಾ ಹೇಳುತ್ತಿರುವ ಸಂದರ್ಭದಲ್ಲಿ, ಪದವಿಪೂರ್ವ ಶಿಕ್ಷಣ ಇಲಾಖೆಯ ನಡೆ ಉಪನ್ಯಾಸಕರು ಮತ್ತು ಪ್ರಾಂಶುಪಾಲರ ಜೀವದ ಜೊತೆ ಚೆಲ್ಲಾಟವಾಡಿದಂತೆ. ಅಲ್ಲದೆ, ಕಡ್ಡಾಯ ಹಾಜರಾಗುವಂತೆ ವ್ಯಾಟ್ಸ್‌ಆ್ಯಪ್ ಸಂದೇಶದ ಮೂಲಕ ಪ್ರಾಂಶುಪಾಲರಿಗೆ ಅವೈಜ್ಞಾನಿಕ ಆದೇಶ ಹೊರಡಿಸಿದೆ’ ಎಂದೂ ಅವರು ದೂರಿದರು.

ವನ್ಯಪ್ರಾಣಿ ದಾಳಿ: ಭರ್ಜರಿ ಪರಿಹಾರ

ಬೆಂಗಳೂರು: ವನ್ಯಪ್ರಾಣಿಗಳ ದಾಳಿಯಿಂದ ಹಸು, ಎತ್ತು, ಎಮ್ಮೆ, ಕೋಣ ಮೃತಪಟ್ಟರೆ, ಅವುಗಳ ಮಾಲೀಕರಿಗೆ ನೀಡುತ್ತಿರುವ ಪರಿಹಾರಧನವನ್ನು ₹ 10 ಸಾವಿರದಿಂದ ಗರಿಷ್ಠ ₹ 75 ಸಾವಿರಕ್ಕೆ ಹೆಚ್ಚಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಕುರಿ, ಮೇಕೆ ಅಥವಾ ಆಡು ಮೃತಪಟ್ಟರೆ ಪಾವತಿಸುವ ಪರಿಹಾರ ಮೊತ್ತವನ್ನು ₹ 5 ಸಾವಿರದಿಂದ ₹ 10 ಸಾವಿರಕ್ಕೆ ಹೆಚ್ಚಿಸಲಾಗಿದ್ದು, ತಕ್ಷಣವೇ ಪೂರ್ಣ ಮೊತ್ತ ಪಾವತಿಸಬಹುದು.

ವನ್ಯಪ್ರಾಣಿಗಳ ದಾಳಿಯಿಂದ ಹಸು, ಎತ್ತು, ಎಮ್ಮೆ, ಕೋಣ ಮೃತಪಟ್ಟ ತಕ್ಷಣ ಅವುಗಳ ಮಾಲೀಕರಿಗೆ ₹ 20 ಸಾವಿರ ಪರಿಹಾರ ನೀಡಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ. ಉಳಿದ ಮೊತ್ತವನ್ನು (ಗರಿಷ್ಠ ₹ 75 ಸಾವಿರ) ಪಶುಸಂಗೋಪನೆ ಇಲಾಖೆಯ ತಾಲ್ಲೂಕು ಅಧಿಕಾರಿಗಳ ಶಿಫಾರಸಿಗೆ ಅನುಗುಣವಾಗಿ ಪಾವತಿಸಬಹುದು.

2014 ಆಗಸ್ಟ್ 8ರಂದು ಪರಿಷ್ಕೃತ ಆದೇಶದಲ್ಲಿ ಮಾನವ–ವನ್ಯಜೀವಿ ಸಂಘರ್ಷದಿಂದ ಹಸು, ಎತ್ತು, ಎಮ್ಮೆ, ಕೋಣ ಮೃತಪಟ್ಟರೆ ಅವುಗಳ ಮಾಲೀಕರಿಗೆ ₹ 10 ಸಾವಿರ, ಮೇಕೆ, ಕುರಿ ಮೃತಪಟ್ಟರೆ ₹ 5 ಸಾವಿರ ಪರಿಹಾರಧನ ನಿಗದಿ ಮಾಡಲಾಗಿತ್ತು.

ಬಿಪಿಎಲ್ ಕಾರ್ಡ್‌ದಾರರಿಗೆ 5 ಕೆ.ಜಿ ಬದಲು 2 ಕೆ.ಜಿ ಅಕ್ಕಿ

ಮತ್ತೆ ಅಕ್ಕಿ ಪ್ರಮಾಣ ಕಡಿತ

• ಕೆ.ಓಂಕಾರ ಮೂರ್ತಿ

ಮೈಸೂರು: ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಅಂತ್ಯೋದಯ ಹಾಗೂ ಬಿಪಿಎಲ್ ಕಾರ್ಡ್‌ದಾರರಿಗೆ ವಿತರಿಸುತ್ತಿರುವ ಅಕ್ಕಿಯ ಪ್ರಮಾಣವನ್ನು ರಾಜ್ಯ ಸರ್ಕಾರ ಮತ್ತೆ ಕಡಿತಗೊಳಿಸಿದೆ.

ಈ ವ್ಯತ್ಯಾಸ ಸರಿದೂಗಿಸಲು ದಕ್ಷಿಣ ಕರ್ನಾಟಕದಲ್ಲಿ ರಾಗಿ, ಉತ್ತರ ಕರ್ನಾಟಕದಲ್ಲಿ ಜೋಳ ನೀಡುತ್ತಿದೆ. ಕೋವಿಡ್ ಸಂಕಷ್ಟ ಕಾಲದಲ್ಲಿ ಅಕ್ಕಿ ಪ್ರಮಾಣ ಕಡಿತಗೊಳಿಸಿರುವುದಕ್ಕೆ ಕೆಲ ಕಾರ್ಡ್‌ದಾರರಿಂದ ಆಕ್ಷೇಪ ವ್ಯಕ್ತವಾಗಿದೆ.

ಬಿಪಿಎಲ್ ಕಾರ್ಡ್ ಹೊಂದಿರುವ ಕುಟುಂಬದ ಪ್ರತಿ ಸದಸ್ಯನಿಗೆ ಈ ಹಿಂದೆ 5 ಕೆ.ಜಿ ಅಕ್ಕಿ, 2 ಕೆ.ಜಿ ಗೋಧಿ ವಿತರಿಸಲಾಗುತಿತ್ತು. ಹೊಸ ಪದ್ಧತಿಯಲ್ಲಿ ಈ ತಿಂಗಳಿನಿಂದ 2 ಕೆ.ಜಿ ಅಕ್ಕಿ, 3 ಕೆ.ಜಿ ರಾಗಿ ಮತ್ತು 2 ಕೆ.ಜಿ ಗೋಧಿ ನೀಡಲಾಗುತ್ತಿದೆ. ಅಂತ್ಯೋದಯ ಅನ್ನ ಯೋಜನೆಯ ಪಡಿತರ ಚೀಟಿಗೆ 15 ಕೆ.ಜಿ ಅಕ್ಕಿ, 20 ಕೆ.ಜಿ ರಾಗಿ ಪೂರೈಸಲಾಗುತ್ತಿದೆ.

‘ರಾಗಿ ಬದಲು ಅಕ್ಕಿಯನ್ನೇ ನೀಡಲಿ. ರಾಗಿಯನ್ನು ಕಡ್ಡಾಯವಾಗಿ ನೀಡಬೇಕೆಂದರೆ ಅಕ್ಕಿಯ ಪ್ರಮಾಣ ಹೆಚ್ಚಿಸಬೇಕು’ ಎಂದು ಕಾರ್ಡ್‌ದಾರರು ಆಗ್ರಹಿಸಿದ್ದಾರೆ.

‘ಅಕ್ಕಿಯನ್ನು ನಾವು ಛತ್ತೀಸಗಡ, ಹರಿಯಾಣದಿಂದ ತರುತ್ತಿದ್ದು, ಅಲ್ಲಿಯ ರೈತರಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತಿದೆ. ಹೀಗಾಗಿ, ನಮ್ಮ ರೈತರಿಗೆ ಅನುಕೂಲ ಮಾಡಿಕೊಡಲು ಸ್ಥಳೀಯವಾಗಿ ಬೆಂಬಲ ಬೆಲೆಯಲ್ಲಿ ಖರೀದಿಸಿದ ರಾಗಿಯನ್ನು ಸ್ಥಳೀಯ ಕಾರ್ಡ್‌ದಾರರಿಗೆ ವಿತರಿಸಲಾಗುತ್ತಿದೆ’ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಮೈಸೂರು ಜಿಲ್ಲಾ ಜಂಟಿ ನಿರ್ದೇಶಕ ಪಿ.ಶಿವಣ್ಣ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

ಸರಿಯಾದ ಕ್ರಮ ಅಲ್ಲ: ‘ನಿತ್ಯ ಬಳಕೆಯ ವಸ್ತುಗಳ ಬೆಲೆ ಏರುತ್ತಿದೆ. ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ಹಾಗೂ ಅಡುಗೆ ಎಣ್ಣೆ ದರ ಹೆಚ್ಚಾಗಿದೆ. ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಂಬಲ ಬೆಲೆಯಲ್ಲಿ ರಾಗಿ, ಭತ್ತ ಖರೀದಿಸುತ್ತಿರುವುದು ಒಳ್ಳೆಯ ವಿಚಾರ. ಆದರೆ, ಒಂದನ್ನು ಕಡಿತಗೊಳಿಸಿ ಮತ್ತೊಂದನ್ನು ನೀಡುವುದು ಸರಿಯಲ್ಲ’ ಎಂದು ರೈತ ನಾಯಕಿ ಸುನಂದಾ ಜಯರಾಂ ಹೇಳಿದರು.

‘ಮೈಸೂರು ಜಿಲ್ಲೆಯ ಹಲವೆಡೆ ರಾಗಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ರಾಗಿ ಬೆಳೆದವರಿಗೆ ಮತ್ತೆ ರಾಗಿ ಕೊಟ್ಟರೆ ಏನು ಪ್ರಯೋಜನ? ಹಳೆಯ ಪದ್ಧತಿಯೇ ಇರಲಿ’ ಎಂದು ಬಿಪಿಎಲ್ ಕಾರ್ಡ್‌ದಾರ, ರೈತ ಅರ್ಜುನಹಳ್ಳಿ ರಾಂಪ್ರಸಾದ್ ಒತ್ತಾಯಿಸಿದ್ದಾರೆ.

ಮುಖ್ಯಾಂಶಗಳು

- ಅಂತ್ಯೋದಯ ಚೀಟಿಗೆ 15 ಕೆ.ಜಿ ಅಕ್ಕಿ, 20 ಕೆ.ಜಿ ರಾಗಿ
- ಹಳೇ ಪದ್ಧತಿ ಜಾರಿಗೆ ಒತ್ತಾಯ

ಪ್ರಜಾವಾಣಿ ವಿಶೇಷ

ರಾಗಿ, ಜೋಳ ಬೆಳೆಯುವ ಕರ್ನಾಟಕದ ರೈತರಿಗೆ ಅನುಕೂಲ ಮಾಡಿಕೊಡಲು ಈ ನಿರ್ಧಾರಕ್ಕೆ ಬರಲಾಗಿದೆ. ಕಾರ್ಡ್‌ದಾರರಿಗೂ ಸಹಾಯವಾಗಲಿದೆ

ಪಿ.ಶಿವಣ್ಣ, ಜಂಟಿ ನಿರ್ದೇಶಕ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ

ಕೋವಿಡ್ ಸಂಕಷ್ಟ ಕಾಲದಲ್ಲಿ ಅಕ್ಕಿ ಪ್ರಮಾಣ ಕಡಿತ ಮಾಡಬಾರದಿತ್ತು. ಆದೇಶ ಹಿಂಪಡೆದು 5 ಕೆ.ಜಿ ಅಕ್ಕಿ ಜೊತೆಗೆ ಹೆಚ್ಚುವರಿಯಾಗಿ ರಾಗಿಯನ್ನೂ ಕೊಡಲಿ

ಸುನಂದಾ ಜಯರಾಂ, ರೈತ ನಾಯಕಿ

ಫ್ಲಾಯ್ಡ್ ಹತ್ಯೆ: ಪೊಲೀಸ್ ಅಧಿಕಾರಿ ಚೌವಿನ್ ತಪ್ಪಿತಸ್ಥ

ವಾಷಿಂಗ್ಟನ್ (ಪಿಟಿಐ): ಕಪ್ಪು ವರ್ಣೀಯ ಅಮೆರಿಕನ್ ಪ್ರಜೆ ಜಾರ್ಜ್ ಫ್ಲಾಯ್ಡ್ ಹತ್ಯೆ ಪ್ರಕರಣದಲ್ಲಿ ಮಿನ್ನೆಪೊಲಿಸ್‌ನ ಪೊಲೀಸ್ ಅಧಿಕಾರಿ ಡೆರೆಕ್ ಚೌವಿನ್ ತಪ್ಪಿತಸ್ಥ ಎಂದು ಅಮೆರಿಕದ ಕೋರ್ಟ್ ಹೇಳಿದೆ.

ಫ್ಲಾಯ್ಡ್ ಹತ್ಯೆಗೆ ಸಂಬಂಧಿಸಿದ ಚೌವಿನ್ ವಿರುದ್ಧ ಮೂರು ಆರೋಪಗಳಿದ್ದವು. ಈ ಆರೋಪಗಳ ಕುರಿತು ವಿಚಾರಣೆ ನಡೆಸಿದ 12 ನ್ಯಾಯಾಧೀಶರಿರುವ ನ್ಯಾಯಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

20 ಡಾಲರ್ ಮೊತ್ತದ ನಕಲಿ ಬಿಲ್ ಸೃಷ್ಟಿಸಿದ ಆರೋಪದ ಮೇಲೆ ಕಳೆದ ವರ್ಷ ಮೇ 25ರಂದು ಫ್ಲಾಯ್ಡ್ ಅವರನ್ನು ಪೊಲೀಸರು ಬಂಧಿಸಿದ್ದರು. ಫ್ಲಾಯ್ಡ್ ಅವರನ್ನು ಕೆಳಗೆ ಕೆಡವಿ ಹಾಕಿದ್ದ ಪೊಲೀಸ್ ಅಧಿಕಾರಿ ಚೌವಿನ್, ಆತನ ಕುತ್ತಿಗೆ ಮೇಲೆ ಮೊಣಕಾಲಿಟ್ಟು 9 ನಿಮಿಷಗಳಿಗೂ ಅಧಿಕ ಕಾಲ ಒತ್ತಿದ್ದ. ಉಸಿರುಗಟ್ಟಿದ ಪರಿಣಾಮ ಫ್ಲಾಯ್ಡ್ ಮೃತಪಟ್ಟಿದರು.

10ನೇ ಪುಟ ನೋಡಿ

ನಗರದಲ್ಲಿ ಇಂದು

ವಿಶ್ವ ಭೂ ದಿನ: ಅತಿಥಿಗಳು–ಐಐಎಸ್ಸಿಯ ಪ್ರಾಧ್ಯಾಪಕ ಡಾ.ಟಿ.ವಿ.ರಾಮಚಂದ್ರ, ಬೆಂಗಳೂರು ವಿಶ್ವವಿದ್ಯಾಲಯದ ಪರಿಸರ ಅಧ್ಯಯನ ವಿಭಾಗದ ಪ್ರಾಧ್ಯಾಪಕಿ ಎನ್.ನಂದಿನಿ, ಗುಬ್ಬಿ ಲ್ಯಾಬ್ಸ್ ನಿರ್ದೇಶಕ ಎಚ್.ಎಸ್.ಸುಧೀರ, ಆಯೋಜನೆ–ಸುರಾನ ಕಾಲೇಜು, ಸಹಯೋಗ–ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಬೆಳಿಗ್ಗೆ 10 (ಆನ್‌ಲೈನ್ ಕಾರ್ಯಕ್ರಮ)

ಹೆಬ್ಬಾಳ ವಿಧಾನಸಭಾ ಕ್ಷೇತ್ರದ ಪಶುವೈದ್ಯ ಕಾಲೇಜಿನಲ್ಲಿ ನೂತನ ಕೋವಿಡ್ ಕೇರ್ ಸೆಂಟರ್: ಉದ್ಘಾಟನೆ–ಸಚಿವ ವಿ.ಸೋಮಣ್ಣ, ಅಧ್ಯಕ್ಷತೆ–ಶಾಸಕ ಬೈರತಿ ಸುರೇಶ್, ಸ್ಥಳ–ಮಂಗಳ ರೈತ ಭವನ, ಗ್ರಂಥಾಲಯ ಹತ್ತಿರ, ವೆಟರ್ನರಿ ಕಾಲೇಜು, ಹೆಬ್ಬಾಳ, ಬೆಳಿಗ್ಗೆ 10.30

ಅಂಚೆ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ಪೂರೈಕೆ

‘ಮೊದಲ ದಿನವೇ ಒಂದು ಟನ್ ಮಾವಿನ ಹಣ್ಣಿಗೆ ಬೇಡಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೊದಲ ದಿನ ಒಟ್ಟು 351 ಮಂದಿ ಆನ್‌ಲೈನ್ ಮೂಲಕ ಮಾವಿನ ಹಣ್ಣುಗಳನ್ನು ಕಾಯ್ದಿರಿಸಿದ್ದಾರೆ. ಒಂದು ಟನ್‌ಗೂ ಅಧಿಕ ಹಣ್ಣಿಗೆ ಬೇಡಿಕೆ ಬಂದಿದೆ’ ಎಂದು ರಾಜ್ಯ ಮಾವು ಅಭಿವೃದ್ಧಿ ಮತ್ತು ಮಾರುಕಟ್ಟೆ ನಿಗಮದ (ಕೆಎಸ್‌ಎಂಡಿಎಂಸಿ) ಅಧ್ಯಕ್ಷ ಕೆ.ವಿ.ನಾಗರಾಜು ತಿಳಿಸಿದರು.

ಆನ್‌ಲೈನ್ ಮೂಲಕ ಮಾವು ಮಾರಾಟ ಮಾಡುವ ಸಂಬಂಧ ಕೆಎಸ್‌ಎಂಡಿಎಂಸಿ ಹಾಗೂ ಅಂಚೆ ಇಲಾಖೆ ನಡುವೆ ಒಪ್ಪಂದವಾಗಿದ್ದು, ಅಂಚೆ ಮೂಲಕ ಗ್ರಾಹಕರ ಮನೆ ಬಾಗಿಲಿಗೆ ಮಾವು ತಲುಪಿಸುವ ಕಾರ್ಯಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಬಳಿಕ ಮಾತನಾಡಿದ ನಾಗರಾಜು ‘ಕೋವಿಡ್ ಎರಡನೇ ಅಲೆಗೆ ಕಡಿವಾಣ ಹಾಕಲು ಸರ್ಕಾರ ಬಿಗಿ ಕ್ರಮಗಳನ್ನು ಕೈಗೊಂಡಿದೆ. ಹೀಗಾಗಿ ಆನ್‌ಲೈನ್ ಖರೀದಿಯತ್ತ ಜನ ಒಲವು ತೋರುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಅಂಚೆ ಇಲಾಖೆ ಜೊತೆ ಒಪ್ಪಂದ ಮಾಡಿಕೊಂಡಿದ್ದೇವೆ. ಬಾಕ್ಸ್‌ಗಳ ರೂಪದಲ್ಲಿ ಇವುಗಳನ್ನು ಪೂರೈಸಲಾಗುತ್ತದೆ. ಬಾಕ್ಸ್‌ವೊಂದರಲ್ಲಿ 3 ಕೆ.ಜಿ. ಹಣ್ಣು ಇರುತ್ತದೆ. ಮಾರುಕಟ್ಟೆ ದರದಲ್ಲೇ ಅವುಗಳನ್ನು ಗ್ರಾಹಕರಿಗೆ ಒದಗಿಸಲು ನಿರ್ಧರಿಸಲಾಗಿದೆ’ ಎಂದರು.

‘ಅಂಚೆ ಇಲಾಖೆಯ ಸಹಕಾರದಿಂದ ಹೋದ ವರ್ಷ ಆನ್‌ಲೈನ್ ಮೂಲಕ ಒಟ್ಟು 100 ಟನ್‌ಗೂ ಅಧಿಕ ಮಾವು ಮಾರಾಟ ಮಾಡಲಾಗಿತ್ತು. ರೈತರು ₹1.6 ಕೋಟಿ ವಹಿವಾಟು ನಡೆಸಿದ್ದರು. ಈ ಬಾರಿಯೂ ಉತ್ತಮ ವಹಿವಾಟು ನಡೆಸುವ ನಿರೀಕ್ಷೆ ಇದೆ’ ಎಂದು ಹೇಳಿದರು.

ಬೆಂಗಳೂರು ಕೇಂದ್ರ ವಲಯದ ಪೋಸ್ಟ್‌ಮಾಸ್ಟರ್ ಜನರಲ್ ಶೆವುಲಿ ಬರ್ಮನ್, ‘ಕೋವಿಡ್‌ನಿಂದ ಸೃಷ್ಟಿಯಾಗಿರುವ ಬಿಕ್ಕಟ್ಟಿನ ಸಮಯದಲ್ಲೂ ಅಂಚೆ ಇಲಾಖೆಯು ದಕ್ಷತೆಯಿಂದ ಕಾರ್ಯನಿರ್ವಹಿಸುತ್ತಿದೆ. ಔಷಧಗಳು, ಪಿಪಿಇ ಕಿಟ್ ಹಾಗೂ ಮಾವಿನ ಹಣ್ಣು ಸೇರಿದಂತೆ ಇತರ ಅಗತ್ಯ ವಸ್ತುಗಳನ್ನು ಗ್ರಾಹಕರ ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡುತ್ತಿದೆ. ಗ್ರಾಹಕರು ಕಾಯ್ದಿರಿಸಿದ ದಿನವೇ ಅವರಿಗೆ ತಾಜಾ ಮಾವಿನ ಹಣ್ಣುಗಳನ್ನು ತಲುಪಿಸಲು ಎಲ್ಲ ಕ್ರಮ ಕೈಗೊಂಡಿದೆ. ಈ ವ್ಯವಸ್ಥೆಯನ್ನು ಸದ್ಯ ಬೆಂಗಳೂರಿಗಷ್ಟೇ ಸೀಮಿತಗೊಳಿಸಲಾಗಿದೆ. ಗ್ರಾಹಕರು www.karsirimangoes.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಿ ವಿವಿಧ ತಳಿಯ ಮಾವಿನ ಹಣ್ಣು ಕಾಯ್ದಿರಿಸಬಹುದು’ ಎಂದು ತಿಳಿಸಿದರು.

ಪೋಸ್ಟ್‌ಮಾಸ್ಟರ್ ಜನರಲ್ ಶೆವುಲಿ ಬರ್ಮನ್, ಕೆಎಸ್‌ಎಂಡಿಎಂಸಿ ಅಧ್ಯಕ್ಷ ಕೆ.ವಿ.ನಾಗರಾಜು, ವ್ಯವಸ್ಥಾಪಕ ನಿರ್ದೇಶಕ ನಾಗರಾಜ್ ಅವರು ಮಾವಿನ ಹಣ್ಣನ್ನು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

ಫೋರ್ಬ್ಸ್ ಪಟ್ಟಿಯಲ್ಲಿ ವಿಭಾ

ಬೆಂಗಳೂರು: ಫೋರ್ಬ್ಸ್ ಪತ್ರಿಕೆ ಬಿಡುಗಡೆ ಮಾಡಿರುವ, 30 ವರ್ಷ ವಯಸ್ಸಿನೊಳಗಿನ ಏಷ್ಯಾದ ಸಾಧಕರ ಪಟ್ಟಿಯಲ್ಲಿ ಬೆಂಗಳೂರಿನ ಯುವ ಉದ್ಯಮಿ ವಿಭಾ ಹರೀಶ್ ಅವರು ಸ್ಥಾನ ಪಡೆದಿದ್ದಾರೆ.

ವಿಭಾ ಅವರು ಬೆಂಗಳೂರಿನಲ್ಲಿ ‘ಕಾಸ್ಮಿಕ್ಸ್’ ಹೆಸರಿನ ನವೋದ್ಯಮವೊಂದನ್ನು ನಡೆಸುತ್ತಿದ್ದಾರೆ. ಇದು ಹಣ್ಣು, ಗಿಡಮೂಲಿಕೆಗಳು ಹಾಗೂ ಬೇರುಗಳನ್ನು ಬಳಸಿ ಪೌಷ್ಟಿಕಾಂಶ ಇರುವ ಪುಡಿಗಳನ್ನು ಸಿದ್ಧಪಡಿಸುತ್ತಿದೆ. ‘ಇವುಗಳ ಸೇವನೆಯಿಂದ ರೋಗ ನಿರೋಧಕ ಶಕ್ತಿ ಜಾಸ್ತಿ ಆಗುತ್ತದೆ’ ಎಂದು ಕಂಪನಿ ಹೇಳಿಕೊಂಡಿದೆ.

ಏಷ್ಯಾದ ಸಾಧಕರ ಪಟ್ಟಿಯಲ್ಲಿ ಸ್ಥಾನ ಪಡೆದಿರುವವರು ದೀರ್ಘಾವಧಿಯ ಲಾಕ್‌ಡೌನ್‌ಅನ್ನು ತಾಳಿಕೊಂಡಿದ್ದಾರೆ, ಎಲ್ಲ ಕ್ಷೇತ್ರಗಳಲ್ಲೂ ಸೃಷ್ಟಿಯಾಗಿರುವ ಅನಿಶ್ಚಿತ ವಾತಾವರಣವನ್ನು ಎದುರಿಸಿ ನಿಂತಿದ್ದಾರೆ ಎಂದು ಫೋರ್ಬ್ಸ್ ಪ್ರಶಂಸಿಸಿದೆ. ಕೋವಿಡ್–19 ಸಾಂಕ್ರಾಮಿಕ ತಂದ ಬದಲಾವಣೆಗಳ ನಡುವೆಯೇ ಇವರು ತಮ್ಮ ಉದ್ಯಮಗಳನ್ನು ಬೆಳೆಸಿದ್ದಾರೆ ಎಂದೂ ಪತ್ರಿಕೆಯು ಮೆಚ್ಚುಗೆ ಮಾತು ಹೇಳಿದೆ.

ಫುಟ್‌ಪಾತ್ ಅತಿಕ್ರಮಣ: ಕ್ರಿಮಿನಲ್ ಕ್ರಮಕ್ಕೆ ಸೂಚನೆ

ಬೆಂಗಳೂರು: ಪಾದಚಾರಿ ಮಾರ್ಗಗಳ ಅತಿಕ್ರಮಣ ಪ್ರಕರಣಗಳಲ್ಲಿ ಕ್ರಿಮಿನಲ್ ಕ್ರಮಗಳನ್ನು ಜಾರಿಗೊಳಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ದಂಡ ವಿಧಿಸುವ ಪ್ರಕ್ರಿಯೆ ಜಾರಿಗೊಳಿಸದ ಹೊರತು ನಿರ್ದೇಶನಗಳು ಕೇವಲ ಕಾಗದದಲ್ಲಿ ಉಳಿಯುತ್ತವೆ ಎಂದು ಮುಖ್ಯ ನ್ಯಾಯಮೂರ್ತಿ ಅಭಯ್ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ ಅಭಿಪ್ರಾಯಪಟ್ಟಿತು.

‘ಪಾದಚಾರಿ ಮಾರ್ಗಗಳು ಮತ್ತು ಸಾರ್ವಜನಿಕ ಬೀದಿಗಳು ಸಾರ್ವಜನಿಕರ ಓಡಾಟಕ್ಕೆ ಮುಕ್ತವಾಗಿರಬೇಕು. ಈ ನಿಯಮ ಉಲ್ಲಂಘನೆಯನ್ನು ಸಂಬಂಧಪಟ್ಟ ಪ್ರಾಧಿಕಾರಗಳು ಸಹಿಸಬಾರದು. ನಿಬಂಧನೆಗಳನ್ನು ಅನುಷ್ಠಾನಗೊಳಿಸದೆ ಇರುವುದು ಸಂವಿಧಾನದ ಉಲ್ಲಂಘನೆ ಆಗಲಿದೆ’ ಎಂದು ಪೀಠ ಹೇಳಿತು.

ಆರ್.ಎಸ್.ರಾಮಚಂದ್ರರೆಡ್ಡಿ ಎಂಬುವರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ‘ದ್ವಿಚಕ್ರ ವಾಹನ ಮತ್ತು ಕಾರುಗಳನ್ನು ಪಾದಚಾರಿ ಮಾರ್ಗಗಳ ಮೇಲೆಯೇ ನಿಲ್ಲಿಸಲಾಗುತ್ತಿದೆ. ಇದನ್ನು ನಿಯಂತ್ರಿಸಬೇಕು’ ಎಂದು ಕೋರಿದ್ದರು.

HEALTH SPECIAL

ಶ್ರವಣ ಸಮಸ್ಯೆಯೇ??

ನಿಮಗೆ ಇಲ್ಲಿ ಶ್ರವಣ ಸಾಧನ ಗೋಚರಿಸುತ್ತಿದೆಯೆ?

ಹೌದು. ನಿಮಗೆ ಗೋಚರಿಸುವುದಿಲ್ಲ.

ಇದು 100% ಅಗೋಚರ ಶ್ರವಣ ಸಾಧನ.

- ಪ್ರಸ್ತುತ ಶ್ರವಣ ಸಾಧನಗಳ ಬಳಕೆದಾರರಿಗೆ ಆಕರ್ಷಕ ಎಕ್ಸ್‌ಚೇಂಜ್ ಆಫರ್.
- ಆಧುನಿಕ ಕೃತಕ ಬುದ್ಧಿಮತ್ತೆಯುಳ್ಳ ರಿಚಾರ್ಜೇಬಲ್ ಶ್ರವಣ ಸಾಧನಗಳು ಲಭ್ಯ.
- ಹಿರಿಯ ನಾಗರಿಕರಿಗಾಗಿ ಮನೆಗೆ ಭೇಟಿ.

*T & C Apply.

HHCC ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್ | ವಿಶ್ವ ದಾಖಲೆ ಹೊಂದಿದೆ

ಕುಡುವೇವ್ ಆಡಿಯೋಮೀಟರ್ ಮೂಲಕ ತಪಾಸಣೆ

ಬೆಂಗಳೂರು ಮತ್ತು ಕರ್ನಾಟಕ ರಾಜ್ಯಾದ್ಯಂತ ಶಾಖೆಗಳಿವೆ. ನಿಮ್ಮ ಸಮೀಪದ ಶಾಖೆಯನ್ನು ತಿಳಿದುಕೊಳ್ಳಲು ಸಂಪರ್ಕಿಸಿ.

ಹಿಯರಿಂಗ್ ಹೆಲ್ತ್ ಕೇರ್ ಕ್ಲಿನಿಕ್

99456 11100

www.hearingc.com

ಗೂಂಡಾ ಕಾಯ್ದೆಯಡಿ ಜೂಜುಕೋರನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ಕಾನೂನುಬಾಹಿರವಾಗಿ ಜೂಜು ಅಡ್ಡೆಗಳನ್ನು ನಡೆಸುತ್ತಿದ್ದ ಆರೋಪಿಯನ್ನು ಸಿಸಿಬಿ ಪೊಲೀಸರು ಗೂಂಡಾ ಕಾಯ್ದೆಯಡಿ ಬಂಧಿಸಿದ್ದಾರೆ.

ಬಿ.ಹರಿರಾಜ ಶೆಟ್ಟಿ (58) ಬಂಧಿತ ಆರೋಪಿ. ಈತ ಬೆಂಗಳೂರಿನ ಹಲವೆಡೆ ಅಕ್ರಮವಾಗಿ ಜೂಜು ಅಡ್ಡೆಗಳನ್ನು ನಡೆಸುತ್ತಿದ್ದ. ವಿವಿಧ ಸ್ಥಳಗಳಲ್ಲಿ ರಿಕ್ರಿಯೇಶನ್ ಕ್ಲಬ್, ವಿಡಿಯೊ ಗೇಮ್ ಸೆಂಟರ್‌ಗಳ ಮೂಲಕ ಜೂಜಾಟ ನಡೆಸುತ್ತಿದ್ದ ಎನ್ನಲಾಗಿದೆ.

ಈ ಸಂಬಂಧ ಆರೋಪಿಯ ವಿರುದ್ಧ ವೈಯಾಲಿ ಕಾವಲ್, ಹೈಗ್ರೌಂಡ್ಸ್, ಕಬ್ಬನ್ ಪಾರ್ಕ್, ಕೋರಮಂಗಲ, ಅಶೋಕ್ ನಗರ, ಕೆ.ಪಿ.ಅಗ್ರಹಾರ, ಬಸವೇಶ್ವರನಗರ ಹಾಗೂ ಇಂದಿರಾನಗರ ಠಾಣೆಗಳಲ್ಲಿ ಹಲವು ಪ್ರಕರಣಗಳು ದಾಖಲಾಗಿದ್ದವು.

‘ಅಕ್ರಮ ಜೂಜು ಅಡ್ಡೆಗಳ ಮೇಲೆ ಈ ಹಿಂದೆಯೂ ಸಿಸಿಬಿ ಅಧಿಕಾರಿಗಳು ದಾಳಿ ನಡೆಸಿ, ಕ್ರಮಕೈಗೊಂಡಿದ್ದರು. ಆದರೂ ಮತ್ತೆ ಅಪರಾಧ ಚಟುವಟಿಕೆಗಳಲ್ಲಿ ಮುಂದುವರಿದಿದ್ದ. ಈತನ ವಿರುದ್ಧ ಕ್ರಮ ಕೈಗೊಂಡ ಪೊಲೀಸ್ ಅಧಿಕಾರಿಗಳ ಮೇಲೆ ಸುಳ್ಳು ಆರೋಪಗಳ ಹೊರಿಸಿ, ತೇಜೋವಧೆ ಮಾಡುತ್ತಿದ್ದ. ಈ ಸಂಬಂಧ ಸಿಸಿಬಿ ಅಧಿಕಾರಿಗಳು ಸಲ್ಲಿಸಿದ್ದ ವರದಿ ಅನ್ವಯ ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ಈತನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲು ಆದೇಶಿಸಿದ್ದರು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಇಂತಹ ಪ್ರಕರಣದಲ್ಲಿ ಬಂಧನಕ್ಕೆ ಒಳಗಾದವರಿಗೆ ಒಂದು ವರ್ಷದವರೆಗೆ ಜಾಮೀನು ಸಿಗುವುದಿಲ್ಲ. ಇದೇ ಮೊದಲ ಬಾರಿಗೆ ಜೂಜುಕೋರನನ್ನು ಗೂಂಡಾ ಕಾಯ್ದೆಯಡಿ ಬಂಧಿಸಲಾಗಿದೆ’ ಎಂದೂ ಸಿಸಿಬಿ ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

ಮಾರಕಾಸ್ತ್ರಗಳಿಂದ ದಾಳಿ: ಹತ್ಯೆ

ಬೆಂಗಳೂರು: ನಗರದಲ್ಲಿ ಮಾರಕಾಸ್ತ್ರಗಳಿಂದ ದಾಳಿ ನಡೆಸಿ ರೌಡಿಶೀಟರ್ ಒಬ್ಬನನ್ನು ಹತ್ಯೆ ಮಾಡಿರುವ ಘಟನೆ ಅಶೋಕನಗರ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ತಡರಾತ್ರಿ ನಡೆದಿದೆ.

ರವಿವರ್ಮ ಅಲಿಯಾಸ್ ಅಪ್ಪು (30) ಕೊಲೆಯಾದ ರೌಡಿಶೀಟರ್. ಈತ ವಿವೇಕನಗರ ಠಾಣೆಯ ರೌಡಿಶೀಟರ್.

‘ಪ್ರಕರಣವೊಂದರಲ್ಲಿ ರವಿವರ್ಮ ಜೈಲುವಾಸ ಅನುಭವಿಸಿ, ಇತ್ತೀಚೆಗಷ್ಟೇ ಬಿಡುಗಡೆಯಾಗಿದ್ದ. ಮಂಗಳವಾರ ರಾತ್ರಿ ಅಶೋಕನಗರದ ನೀಲಸಂದ್ರದ ಬಳಿಯಿದ್ದ ಸ್ನೇಹಿತರ ಮನೆಗೆ ತೆರಳಿದ್ದ’.

‘ಈತ ವಾಪಸ್ ಬರುವುದನ್ನೇ ಕಾದು ಹತ್ಯೆ ನಡೆಸಲು ಸಜ್ಜಾಗಿದ್ದರು. ರವಿವರ್ಮ ಬಂದ ಕೂಡಲೇ ದುಷ್ಕರ್ಮಿಗಳು ಏಕಾಏಕಿ ದಾಳಿ ನಡೆಸಿ ಅಲ್ಲಿಂದ ಪರಾರಿಯಾಗಿದ್ದಾರೆ. ಹಳೆಯ ದ್ವೇಷದಿಂದ ಕೊಲೆ ಮಾಡಿರುವ ಶಂಕೆ ಇದೆ. ಅಶೋಕನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್

ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

Before / After

- ಲೈಂಗಿಕ ರೋಗಗಳು
- ಉದ್ರೇಕದ ಸಮಸ್ಯೆ
- ಲೈಂಗಿಕ ನಿರಾಸಕ್ತಿ
- ನಿದ್ರಾ ಸ್ಖಲನ
- ಶೀಘ್ರ ಸ್ಖಲನ
- ಲಿಂಗ ಚಿಕ್ಕದಾಗುವುದು
- ನರ ದೌರ್ಬಲ್ಯ
- ಅವಧಿಗೆ ಮೊದಲೇ ಸ್ಖಲನ
- ಆತಂಕ, ದೌರ್ಬಲ್ಯ
- ಕಡಿಮೆ ವೀರ್ಯಾಣು
- ಮುಷ್ಠಿ ಮೈಥುನದ ಅಡ್ಡಪರಿಣಾಮ

NO SIDE EFFECTS 100%

ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ

1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

BUSINESS

Business Offers

Finance

NRI'S INVESTMENT And Finance Available OnLow Interest Against Properties,Land& Buildings,Sites, Flats (Also)Assist For Yojana Loans Call:7411265189

JOB OPPORTUNITIES

Engg/ Production Technical

WANTED EX BESCOM KPTCL ENGINEER TO WORK FOR BUSINESS DEVELOPMENT CONTACT MUNDHRA, 9341823353, 9341833353, 26713802

Marketing & Sales

MASTER FIREPLACES- India's leading fireplace company is looking for a Business Development Manager to develop the exciting growing fireplace market in the Coorg and Wayanad region. Attractive retainer and commission package. www.masterfireplaces.in . Email resume to sales@masterfireplaces.in

Multiple Vacancy

IMMEDIATE RECRUITMENT HRD/ ADMINISTRATION/ ACCOUNTS/ MANAGER/ SUPERVISOR/ MECHANICAL/ ELECTRONICS/ ELECTRICAL/ SOFTWARE/ HARDWARE/ ENGINEERS- 7676760299/ 7676760399

PERSONAL

Change of Name

I N.SHYLAJA Prakash, R/a 39/5-1,#G-2, OM Apartment, 8th Main Road, Mathikere, Bangalore-54, have changed my Name from SHYLAJA.N. to N.SHYLAJA PRAKASH,vide affidavit Dt: 20/04/2021, Sworn before Notary Ambika.S. Bangalore

I, SHRIREKHA, W/o. Prashanth Kumar Reddy P, have changed my name to SHRI REKHA ANPUR, Vide affidavit dated 21-04-2021 sworn before notary J.Anand Kumar, Bengaluru

14846797A SEP/MT Basavaraj Meti 2ATC Mother name Service Record SHANKARAVVA instead of SHANKRAVVA NEELAPPA METI, Notary BM Chandrashekar, Bangalore

REAL ESTATE SELLING

Flat

Bommanahalli

LUXURY-APARTMENT FOR Sale. 3 BHK with attached bathroom. 1800 Sft + 1 Car Park & all amenities in Roopena Agrahara, Bommanahalli Ph: 9391024959, 7710878007

Cambridge Layout

FOUR BEDROOM spacious flat/ Semi-Bungalow, Entire floor Private Garden/ Separate Entrance/Guest QTRS, 3.1Cr. Owner-9620901776

Sites

Bannerghatta Road

APPROVED LAYOUT Anekal Town Planning at Bannerghatta Road, 30X40, 40X60 after National Park. Contact- 9886241744

Hosur Road

APPROX. ONE Acre Industrial Land for Sale. Papers upto date. Ideal for Pharma as well. Brokers Excuse. Contact: 9620938350/ 9342825263.

Jakkur

SITE FOR SALE- TELECOM LAYOUT: 40x60 site West Facing 7,600/- p.sft. Genuine Buyers- 8197971761/ 9916006002

DH DECCAN HERALD | ಪ್ರಜಾವಾಣಿ ಕ್ಲಾಸಿಫೈಡ್ಸ್

NAME CHANGE

BOOK YOUR NAME CHANGE AD IN DECCAN HERALD ALL KARNATAKA+ PRAJAVANI BENGALURU ALL DAY

CHANGE OF NAME @40/-* Per Words

Condition Apply*

For More Details Contact: 9880856233 | 9731810277 9901641752 | 9845114560 | 9886213331 080- 45557163 | 164

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

GM-Advertisement

CORRIGENDUM

With reference to the Public Notice dated 21/04/2021, published in Deccan Herald & Prajavani, Bangalore Editions, inviting objections from the General Public for the purchase of the Schedule Property mentioned therein, inadvertently the village name, Hobli and Taluk were not mentioned, please note the following amendment **“the Schedule Property is situated at Sulthanpete village, Nandi Hobli, Chikkaballapur Taluk”.**

Kavitha A.B. , Advocate
2577, 4th Floor, 13th Cross, 26th Main,1st sector, HSR layout, Bangalore 560102. Ph:- 9900546686.

ನೈಋತ್ಯ ರೈಲ್ವೆ

ಮುಕ್ತ ಟೆಂಡರ್ ಪ್ರಕಟಣೆ ಸಂಖ್ಯೆ. 06/ಎಸ್‌ಬಿಸಿ/21
ದಿನಾಂಕ : 08–04–2021

ಭಾರತದ ರಾಷ್ಟ್ರಪತಿಗಳ ಪರವಾಗಿ, ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ವಲಯ ಸಿ : ಕುಣಿಗಲ್ – ಚಿಕ್ಕಬಾಣಾವರ (ಹೊರತುಪಡಿಸಿ) – ಹಾಸನ (ಹೊರತುಪಡಿಸಿ) ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 1,20,00,000/-
2	ವಲಯ ಎಫ್ : ಮಾರಿಕುಪ್ಪಂ – ಬಂಗಾರಪೇಟೆ – ಕೋಲಾರ ನಲ್ಲಿ ಜೋಲಾರಪೇಟೆ (ಹೊರತುಪಡಿಸಿ) ಮಾಲೂರು (ಹೊರತುಪಡಿಸಿ) ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 2,00,00,000/-
3	ವಲಯ ಹೆಚ್ : ಬೆಂಗಳೂರು ಸಿಟಿ ಮತ್ತು ಬೆಂಗಳೂರು ದಂಡು, ಬೆಂಗಳೂರು ದಂಡು ಶೆಡ್‌ನಲ್ಲಿ ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 2,75,00,000/-
4	ವಲಯ ಡಿ : ಕೃಷ್ಣರಾಜಪುರಂ ಶೆಡ್ ಮತ್ತು ಕಾಲೋನಿ ಒಳಗೊಂಡಂತೆ ಬೆಂಗಳೂರು ಪೂರ್ವದಿಂದ ಮಾಲೂರು (ಒಳಗೊಂಡು) ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 2,20,00,000/-
5	ವಲಯ ಐ : ಧರ್ಮಾವರಂ (ಹೊರತುಪಡಿಸಿ) – ಪೆನುಕೊಂಡ ಮೂಲಕ ಸಾಯಿ ಪಿ ನಿಲಯಂ ಮತ್ತು ಪೆನುಕೊಂಡ – ಧರ್ಮಾವರಂ ಅಂದರೆ ಮಕ್ಕಾಜಿಪಲ್ಲಿ ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 2,20,00,000/-
6	ವಲಯ ಜೆ : ಬೆಂಗಳೂರು ಸಿಟಿ (ಹೊರತುಪಡಿಸಿ) ಯಶವಂತಪುರ – ಯಲಹಂಕ (ಒಳಗೊಂಡು) ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 2,25,00,000/-
7	ವಲಯ ಕೆ : ಯಶವಂತಪುರ (ಹೊರತುಪಡಿಸಿ) – ತುಮಕೂರು (ಒಳಗೊಂಡು) ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 1,00,04,290/-
8	ವಲಯ ಎಲ್ : ಓಮಲೂರು – ಕೇಲಮಂಗಲಂ ಕಿ.ಮೀ.11/900 – 145/008 ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 82,50,000/-
9	ವಲಯ ಎಂ : ಕೇಲಮಂಗಲಂ – ಲೊಟ್ಟೆಗೊಲ್ಲಹಳ್ಳಿ ಕಿ.ಮೀ.145/008 – 220/000 ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 82,50,000/-
10	ವಲಯ ಎನ್ : ಚೆನ್ನಸಂದ್ರ – ದೊಡ್ಡಬಳ್ಳಾಪುರ (ಹೊರತುಪಡಿಸಿ) ಮತ್ತು ಯಲಹಂಕ (ನಿಲ್ದಾಣ ಒಳಗೊಂಡು) ಚಿಕ್ಕಬಳ್ಳಾಪುರ ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 1,10,00,000/-
11	ವಲಯ ಎಸ್ : ಕೆಎಸ್‌ಆರ್ ಬೆಂಗಳೂರು ಸಿಟಿ ನಿಲ್ದಾಣ ಬೆಂಗಳೂರಿನ ಇತರ ಸೇವಾ ಕಟ್ಟಡಗಳಾದ ಸಿ&ಡಬ್ಲ್ಯು ಕಛೇರಿ, ಲೋಕೋ ಟ್ರಿಪ್ ಶೆಡ್, ಡಿಆರ್‌ಎಂ ಕಛೇರಿ, ಮೇಲ್ವಿಚಾರಕರ ತರಬೇತಿ ಕೇಂದ್ರ ಓಆರ್‌ಹೆಚ್, ಎಸ್‌ಆರ್‌ಹೆಚ್, ರೈಲ್ವೆ ಆಸ್ಪತ್ರೆ, ಆರ್‌ಪಿಎಫ್ ಬ್ಯಾರಕೇಡ್, ಜಿಆರ್‌ಪಿ ಬ್ಯಾರಕೇಡ್, ಇತ್ಯಾದಿ.,	ರೂ. 1,65,00,000/-
12	ವಲಯ ಜಿ : ಬೆಂಗಳೂರು ಸಿಟಿ (ಹೊರತುಪಡಿಸಿ) – ಮೈಸೂರು (ಹೊರತುಪಡಿಸಿ) ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 11,00,000/-
13	ವಲಯ ಬಿ : ಟಿಸಿಟಿಬಿ ನಿಲ್ದಾಣ ಕಟ್ಟಡ, ಸೇವಾ ಕಟ್ಟಡ ಮತ್ತು ಪ್ಲಾಟ್‌ಫಾರಂಗಳು ಮತ್ತು ಸರ್ಕ್ಯುಲೇಟಿಂಗ್ ಪ್ರದೇಶದ ನಿರ್ವಹಣೆ.	ರೂ. 49,95,685/-
14	ವಲಯ ಎ : ಹೆಜ್ಜಾಲದ ಐಆರ್‌ಐಡಿಎಂ ನಲ್ಲಿ ಸೇವಾ ಕಟ್ಟಡ ಮತ್ತು ಸಿಬ್ಬಂದಿ ವಸತಿಗೃಹಗಳ ನಿರ್ವಹಣೆ.	ರೂ. 33,00,000/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04–05–2021 ರಂದು 15.00 ಗಂಟೆಗಳವರೆಗೆ.

ಅರ್ಹತಾ ಅಗತ್ಯತೆಗಳನ್ನು ಒಳಗೊಂಡಂತೆ ಟೆಂಡರ್ ಪ್ರಕಟಣೆಯ ಸಂಪೂರ್ಣ ವಿವರಗಳನ್ನು ಮತ್ತು ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಲು www.ireps.gov.in ಗೆ ಲಾಗ್‌ಆನ್ ಮಾಡಿ.

ವಿಭಾಗೀಯ ರೈಲ್ವೆ ವ್ಯವಸ್ಥಾಪಕರು, ಕಾಮಗಾರಿಗಳು, ನೈಋತ್ಯ ರೈಲ್ವೆ, ಬೆಂಗಳೂರು.

ಪಿಯುಬಿ/03/ಎಎಎಸ್/ಪಿಆರ್‌ಬಿ/ಎಸ್‌ಬಿಸಿ/2021–22

ಚಾಕುವಿನಿಂದ ಇರಿದು ಗಾರೆ ಕೆಲಸಗಾರನ ಕೊಲೆ

ಬೆಂಗಳೂರು: ಗಾರೆ ಕೆಲಸ ಮಾಡುತ್ತಿದ್ದ ಕಾರ್ಮಿಕನನ್ನು ಅಪರಿಚಿತರು ಕೊಲೆ ಮಾಡಿರುವ ಘಟನೆ ವಿದ್ಯಾರಣ್ಯಪುರ ಠಾಣಾ ವ್ಯಾಪ್ತಿಯ ತಿಂಡ್ಲು ಬಳಿ ನಡೆದಿದೆ.

ಹುಬ್ಬಳ್ಳಿಯ ಪ್ರಕಾಶ್ (25) ಕೊಲೆಯಾದ ವ್ಯಕ್ತಿ. ಇವರು ಹಲವು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಗಾರೆ ಕೆಲಸ ಮಾಡಿಕೊಂಡಿದ್ದರು.

ತಿಂಡ್ಲು ಸಮೀಪದ ಸಪ್ತಗಿರಿ ಬಡಾವಣೆಯ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಗಾರೆ ಕೆಲಸ ಮಾಡುತ್ತಿದ್ದರು. ಇದರ ಸಮೀಪದಲ್ಲೇ ನಿರ್ಮಿಸಲಾಗಿದ್ದ ಕಾರ್ಮಿಕರ ಶೆಡ್‌ನಲ್ಲೇ ಪ್ರಕಾಶ್ ವಾಸವಿದ್ದರು.

‘ಮಂಗಳವಾರ ರಾತ್ರಿ ಪ್ರಕಾಶ್ ಮನೆಗೆ ವಾಪಸ್ ಆಗುತ್ತಿದ್ದಾಗ ಅಪರಿಚಿತರು ದಾಳಿ ನಡೆಸಿ, ಎದೆ ಹಾಗೂ ಹೊಟ್ಟೆಗೆ ಇರಿದು, ಪರಾರಿಯಾಗಿದ್ದಾರೆ. ಪ್ರಕಾಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ಘಟನೆ ನಡೆದ ಸ್ಥಳದಲ್ಲಿರುವ ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಲಾಗುತ್ತಿದೆ. ಪ್ರಕಾಶ್ ಒಬ್ಬರೇ ವಾಸವಿದ್ದರು. ಯಾವ ಕಾರಣಕ್ಕಾಗಿ ಕೊಲೆ ಮಾಡಲಾಗಿದೆ ಎಂಬುದರ ಕುರಿತು ತನಿಖೆ ನಡೆಯುತ್ತಿದೆ’ ಎಂದೂ ಹೇಳಿದರು.

‘ಅಂಬೇಡ್ಕರ್ ಆದರ್ಶ ಪಾಲಿಸಿ’

ಬೆಂಗಳೂರು: ‘ಡಾ.ಬಿ.ಆರ್.ಅಂಬೇಡ್ಕರ್ ಅವರು ಅಸ್ಪೃಶ್ಯತೆ ನಿವಾರಣೆಗಾಗಿ ಹೋರಾಡಿದ ಮಹಾನ್ ಮಾನವತಾವಾದಿ. ಸಮ ಸಮಾಜದ ಕಲ್ಪನೆ ಸಾಕಾರಗೊಳ್ಳಬೇಕಾದರೆ ನಾವೆಲ್ಲ ಅವರ ಆದರ್ಶಗಳನ್ನು ಪಾಲಿಸಬೇಕು’ ಎಂದು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಎಸ್.ಸಚ್ಚಿದಾನಂದ ಹೇಳಿದರು.

ವಿಶ್ವವಿದ್ಯಾಲಯವು ಬುಧವಾರ ಆಯೋಜಿಸಿದ್ದ ಅಂಬೇಡ್ಕರ್ ಅವರ 130ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅಂಬೇಡ್ಕರ್ ಶೋಷಿತ ಸಮುದಾಯದ ಧ್ವನಿಯಾಗಿದ್ದರು. ಅವರ ಏಳಿಗೆಗಾಗಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟರು. ಅವರ ಕೆಲಸಗಳು ನಮ್ಮೆಲ್ಲರಿಗೂ ಆದರ್ಶ. ನಾವೆಲ್ಲ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಭಾವನೆಗಳನ್ನು ಎತ್ತಿಹಿಡಿಯಬೇಕು. ಹಾಗಾದಾಗ ಮಾತ್ರ ಅಂಬೇಡ್ಕರ್ ಕಂಡ ಪ್ರಜಾಪ್ರಭುತ್ವದ ಕನಸು ನನಸಾಗಿಸಲು ಸಾಧ್ಯ’ ಎಂದರು.

ವಿಶ್ವವಿದ್ಯಾಲಯದ ಕುಲಸಚಿವ ಎನ್.ರಾಮಕೃಷ್ಣರೆಡ್ಡಿ, ಹಣಕಾಸು ಅಧಿಕಾರಿ ಮಂಜುನಾಥ್ ಹೆಗಡೆ ಹಾಗೂ ಉಪ ಕುಲಸಚಿವ ಬಿ.ವಸಂತ ಶೆಟ್ಟಿ ಇದ್ದರು.

ರಾಮನವಮಿ ಸಾಂಕೇತಿಕ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಉಲ್ಬಣಗೊಂಡಿರುವ ಕಾರಣ ನಗರದಲ್ಲಿ ರಾಮನವಮಿಯ ಉತ್ಸಾಹ ಕಳೆಗುಂದಿತ್ತು. ರಾಮ ಭಕ್ತರು ಮನೆ ಮನೆಯಲ್ಲೇ ರಾಮನ ಜಪ ಮಾಡಿದರು. ದೇಗುಲಗಳಲ್ಲಿ ಸಾಂಕೇತಿಕ ಆಚರಣೆ ನಡೆಯಿತು.

ಮನೆಗಳ ಮುಂದೆ ರಾಮನ ಚಿತ್ರವನ್ನು ರಂಗೋಲಿ ಮೂಲಕ ಚಿತ್ರಿಸಿ ಬಣ್ಣ ಹಚ್ಚಿ, ಮನೆಯೊಳಗೆ ಪೂಜೆ ಪುನಸ್ಕಾರಗಳನ್ನು ಮಾಡಿ ರಾಮಭಕ್ತರು ಸಂಭ್ರಮಿಸಿದರು.

ಶ್ರೀರಾಮನ ಮಂದಿರಗಳಲ್ಲಿ ಮಾತ್ರವಲ್ಲದೇ ಆಂಜನೇಯಸ್ವಾಮಿ ದೇವಾಲಯಗಳಲ್ಲಿ ಸಣ್ಣದಾಗಿ ಅಭಿಷೇಕ, ಪೂಜೆ ನಡೆಸಲಾಯಿತು. ಭಕ್ತರಿಗೆ ಪ್ರವೇಶ ಇಲ್ಲದ ಕಾರಣ ಸಾಮೂಹಿಕ ಪಾನಕ, ಕೋಸಂಬರಿಗಳ ವಿತರಣೆ ಇರಲಿಲ್ಲ. ಕೆಲವು ಗಲ್ಲಿಗಳಲ್ಲಿ ಎಂದಿನಂತೆ ಯುವಕರು ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಿದರು.

ಮೈಸೂರು ರಸ್ತೆಯ ಗಾಳಿ ಆಂಜನೇಯ ಸ್ವಾಮಿ ದೇವಾಲಯ, ವಿದ್ಯಾಪೀಠ ವೃತ್ತ, ಗಿರಿನಗರ, ರಾಗಿಗುಡ್ಡ ಆಂಜನೇಯಸ್ವಾಮಿ ದೇವಸ್ಥಾನ, ಹನುಮಂತನಗರದ ರಾಮಾಂಜನೇಯ ಸ್ವಾಮಿ ದೇವಸ್ಥಾನಗಳಲ್ಲಿ ಸಾಂಕೇತಿಕ ಪೂಜೆಗಳು ನಡೆದವು. ಭಕ್ತರಿಗೆ ಪ್ರವೇಶ ಇರಲಿಲ್ಲ. ಕೆಲ ದೇಗುಲಗಳಲ್ಲಿ ಭಕ್ತರಿಗೆ ಪ್ರವೇಶ ನೀಡದಂತೆ ಪೊಲೀಸರು ಕಾವಲಿದ್ದರು.

ಗಾಳಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ 135ನೇ ವರ್ಷದ ಬ್ರಹ್ಮ ರಥೋತ್ಸವಕ್ಕೆ ಬುಧವಾರ ಚಾಲನೆ ನೀಡಲಾಯಿತು. ಕೋವಿಡ್ ಹಿನ್ನೆಲೆಯಲ್ಲಿ ಈ ವರ್ಷ ಅರ್ಚಕರು, ಟ್ರಸ್ಟಿಗಳು ಮಾತ್ರ ಧಾರ್ಮಿಕ ಆಚರಣೆಗಳನ್ನು ಕೈಗೊಂಡಿದ್ದರು. ಗುರುವಾರ ಗಾಳಿ ಆಂಜನೇಯ ಸ್ವಾಮಿಯ ತೇರು ಎಳೆಯುವ ಕಾರ್ಯಕ್ರಮ ನಡೆಯಲಿದೆ ಎಂದು ಅರ್ಚಕರು ತಿಳಿಸಿದ್ದಾರೆ.

ಇಸ್ಕಾನ್ ದೇವಸ್ಥಾನದಲ್ಲಿ ಕೃಷ್ಣ, ಬಲರಾಮರ ಮೂಲ ವಿಗ್ರಹಗಳಿಗೆ ರಾಮ, ಲಕ್ಷ್ಮಣ ಅಲಂಕಾರ ಮತ್ತು ಶ್ರೀರಾಧಾ ಕೃಷ್ಣಚಂದ್ರ ವಿಗ್ರಹಗಳಿಗೆ ಸೀತಾರಾಮ ಅಲಂಕಾರ ಮಾಡಲಾಗಿತ್ತು. ಸಂಜೆ ರಾಮ ತಾರಕ ಹೋಮ ನೆರವೇರಿಸಲಾಯಿತು. ಶಯನ ಆರತಿ ಮತ್ತು ಶಯನ ಪಲ್ಲಕ್ಕಿಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ಉತ್ಸವವನ್ನು ಭಕ್ತರು ಆನ್ಲೈನ್ ಮೂಲಕ ವೀಕ್ಷಿಸಿದರು.

ಸನಾತನ ಸಂಸ್ಥೆಯಿಂದ ಶ್ರೀರಾಮ ನಾಮಜಪವನ್ನು ಆನ್‌ಲೈನ್‌ನಲ್ಲಿ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಹಿಂದೂ ಜನ ಜಾಗೃತಿ ಸಮಿತಿಯ ಚಂದ್ರಮೋಗೇರ್ ಮಾತನಾಡಿ, ‘ಸದ್ಯದ ಸಂಕಟದ ಕಾಲವನ್ನು ಎದುರಿಸಲು ಮತ್ತು ಆಧ್ಯಾತ್ಮಿಕ ಪ್ರಗತಿಗಾಗಿ ಶೀಘ್ರವೇ ರಾಮರಾಜ್ಯದ ನಿರ್ಮಾಣವಾಗಲಿ ಎಂಬ ಉದ್ದೇಶದಿಂದ ರಾಜ್ಯಾದ್ಯಂತ ಈ ಜಪಯಜ್ಞ ಆಯೋಜನೆ ಮಾಡಲಾಗಿದೆ’ ಎಂದು ಹೇಳಿದರು.

ರಾಮನವಮಿ ಅಂಗವಾಗಿ ಶ್ರೀರಾಮ, ಲಕ್ಷ್ಮಣ ಮತ್ತು ಹನುಮಂತನ ವೇಷ ಧರಿಸಿದ್ದವರು ನಗರದ ಖೋಡೆ ವೃತ್ತದ ಬಳಿ ಸಾರ್ವಜನಿಕರಿಗೆ ಉಚಿತವಾಗಿ ಮಾಸ್ಕ್ ವಿತರಿಸಿದರು

‘ಕಾಶ್ಮೀರ ನಿರ್ಧಾರದಲ್ಲಿ ಬದಲಾವಣೆ ಇಲ್ಲ’

ನವದೆಹಲಿ: ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನಕ್ಕೆ ಕೈಗೊಂಡಿರುವ ನಿರ್ಧಾರದಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ.

ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿ 2019ರ ಆಗಸ್ಟ್ 5ರಂದು ಕೈಗೊಂಡಿದ್ದ ನಿರ್ಧಾರವನ್ನು ಮರುಪರಿಶೀಲಿಸಿದರೆ ಭಾರತದ ಜತೆ ಮಾತುಕತೆ ನಡೆಸಲು ಸೌಹಾರ್ದಯುತ ವಾತಾವರಣ ಸೃಷ್ಟಿಯಾಗುತ್ತದೆ. ಹೀಗಾಗಿ, ಭಾರತ ಈ ನಿರ್ಧಾರವನ್ನು ವಾಪಸ್ ಪಡೆಯಬೇಕು ಎಂದು ಪಾಕಿಸ್ತಾನ ನೀಡಿರುವ ಹೇಳಿಕೆಗೆ ಭಾರತ ಈ ಸ್ಪಷ್ಟನೆ ನೀಡಿದೆ.

ವೆಂಕಟಸುಬ್ಬಯ್ಯ ಅವರಿಗೆ ನುಡಿನಮನ

‘ವಿದ್ವತ್ ಪರಂಪರೆಯ ಕೊನೆಯ ಕೊಂಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಇತ್ತೀಚೆಗೆ ನಿಧನರಾದ ನಿಘಂಟು ತಜ್ಞ ಜಿ.ವೆಂಕಟಸುಬ್ಬಯ್ಯ ಅವರು ವಿದ್ವತ್ ಪರಂಪರೆಯ ಕೊನೆಯ ಕೊಂಡಿಯಾಗಿದ್ದರು. ಅವರು ಹಸ್ತಪ್ರತಿಗಳನ್ನು ತಿದ್ದಿ, ತೀಡಿ ಶ್ರದ್ಧೆಯಿಂದ ಮುದ್ರಣಪ್ರತಿ ಸಿದ್ಧಪಡಿಸುತ್ತಿದ್ದರು. ಅವರ ವ್ಯಕ್ತಿತ್ವ ಮತ್ತು ವಿದ್ವತ್, ಆಳ ಮತ್ತು ವಿಸ್ತಾರದಿಂದ ಕೂಡಿತ್ತು’ ಎಂದು ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ್ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಬುಧವಾರ ಆಯೋಜಿಸಿದ್ದ ವೆಂಕಟಸುಬ್ಬಯ್ಯನವರ ನುಡಿನಮನ ಕಾರ್ಯಕ್ರಮದಲ್ಲಿ ಅವರು ‘ಜೀವಿ’ ಜೊತೆಗಿನ ಒಡನಾಟವನ್ನು ಸ್ಮರಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮನು ಬಳಿಗಾರ್, ‘ವೆಂಕಟಸುಬ್ಬಯ್ಯನವರು ಅರವತ್ತರ ದಶಕದಲ್ಲಿ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಆಗ ಸರ್ಕಾರದಿಂದ ₹3 ಸಾವಿರ ವಾರ್ಷಿಕ ಅನುದಾನ ಬರುತ್ತಿತ್ತು. ಈ ಸಂಬಂಧ ಅಂದಿನ ಹಣಕಾಸು ಸಚಿವ ರಾಮಕೃಷ್ಣ ಹೆಗಡೆಯವರನ್ನು ಭೇಟಿ ಮಾಡಿದ್ದ ‘ಜೀವಿ’ ಈ ಮೊತ್ತ ₹25 ಸಾವಿರಕ್ಕೆ ಹೆಚ್ಚಿಸುವಂತೆ ಅವರ ಮನವೊಲಿಸಿದ್ದರು. ಪರಿಷತ್ತನ್ನು ಭಾರತದ ಮುಂಚೂಣಿ ವಿದ್ವತ್ ಸಂಸ್ಥೆಗಳ ಸಾಲಿನಲ್ಲಿ ತಂದು ನಿಲ್ಲಿಸಿದ ಹಿರಿಮೆಯೂ ಅವರಿಗೆ ಸಲ್ಲಬೇಕು’ ಎಂದರು.

‘ಜೀವಿ ಅವರು ಪರಿಷತ್ತಿನ ಗೌರವ ಕಾರ್ಯದರ್ಶಿ ಹಾಗೂ ಅಧ್ಯಕ್ಷರಾಗಿ, ಅನಂತರ ‘ಕನ್ನಡ-ಕನ್ನಡ’ ಬೃಹತ್ ನಿಘಂಟಿನ ಪ್ರಧಾನ ಸಂಪಾದಕರಾಗಿ ನಾಲ್ಕು ದಶಕಗಳ ಕಾಲ ದಣಿವರಿಯದೆ ದುಡಿದಿದ್ದರು. ಅವರ ಪರಿಶ್ರಮದಿಂದಾಗಿ ಭಾರತೀಯ ಭಾಷೆಗಳಲ್ಲೇ ಅತ್ಯಂತ ಅಪರೂಪ ಹಾಗೂ ಅನನ್ಯವಾದ ನಿಘಂಟು ದಕ್ಕಿತು. ಆ ಮೂಲಕ ಕನ್ನಡಕ್ಕೆ ಭಾರತದಲ್ಲಿ ಅಸ್ಮಿತೆ ತಂದುಕೊಟ್ಟಿತು’ ಎಂದು ಪರಿಷತ್ತಿನ ಗೌರವ ಕಾರ್ಯದರ್ಶಿ ಕೆ.ರಾಜಕುಮಾರ್ ಹೇಳಿದರು.

ಕಾರ್ಯಕ್ರಮದಲ್ಲಿ ವೆಂಕಟಸುಬ್ಬಯ್ಯ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. (ಎಡದಿಂದ) ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್, ಮಲ್ಲೇಪುರಂ ಜಿ.ವೆಂಕಟೇಶ್, ಪರಿಷತ್ತಿನ ಗೌರವ ಕೋಶಾಧ್ಯಕ್ಷ ಪಿ.ಮಲ್ಲಿಕಾರ್ಜುನಪ್ಪ, ಗೌರವ ಕಾರ್ಯದರ್ಶಿ ರಾಜಕುಮಾರ್ ಇದ್ದಾರೆ

ಚಿತಾಗಾರದ ಮುಂದೆ ಹೆಣ ಹೊತ್ತ ಆಂಬುಲೆನ್ಸ್‌ಗಳ ಸಾಲು • ಮೇಡಿ ಅಗ್ರಹಾರದಲ್ಲಿ ಒಂದೇ ದಿನ 42 ಮೃತದೇಹ ದಹನ

ಮುಂಜಾನೆ 5.30ವರೆಗೂ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಗಳವಾರ ಬಂದ ಹೆಣಗಳ ಅಂತ್ಯಕ್ರಿಯೆ ಮುಗಿಸುವಾಗ ಬುಧವಾರ ಬೆಳಿಗ್ಗೆ 5.30 ಆಗಿತ್ತು. ಬುಧವಾರ ಮತ್ತೆ 8 ಗಂಟೆಯಿಂದ ಮತ್ತೆ ಹೆಣ ಸುಡುವ ಕೆಲಸ ಶುರು.

ಇದು ಯಲಹಂಕ ವಲಯದ ಮೇಡಿ ಅಗ್ರಹಾರ ಚಿತಾಗಾರದ ಪರಿಸ್ಥಿತಿ. ಇಲ್ಲಿ ಮಂಗಳವಾರ ಒಂದೇ ದಿನ 42 ಮೃತದೇಹಗಳ ಅಂತ್ಯಕ್ರಿಯೆ ನಡೆಸಲಾಗಿದೆ. ಬುಧವಾರವೂ ಇಲ್ಲಿ ಶವಗಳನ್ನು ಹೊತ್ತ ಆಂಬುಲೆನ್ಸ್‌ಗಳು ದಿನವಿಡೀ ಸಾಲುಗಟ್ಟಿ ನಿಂತಿದ್ದವು. ಇದು ಮೇಡಿ ಅಗ್ರಹಾರ ಚಿತಾಗಾರವೊಂದರ ಪರಿಸ್ಥಿತಿ ಮಾತ್ರವಲ್ಲ. ಕೋವಿಡ್‌ನಿಂದ ಸತ್ತವರ ಅಂತ್ಯಕ್ರಿಯೆಗೆ ಗೊತ್ತುಪಡಿಸಲಾದ ಇನ್ನುಳಿದ ಆರು (ಸುಮನಹಳ್ಳಿ, ಕೂಡ್ಲು, ಪಣತ್ತೂರು, ಪೀಣ್ಯ, ಬನಶಂಕರಿ ಹಾಗೂ ಕೆಂಗೇರಿ) ಚಿತಾಗಾರದ ಸಿಬ್ಬಂದಿಗೂ ಕಳೆದ 10 ದಿನಗಳಿಂದ ಹೆಣಗಳನ್ನು ಎಡೆಬಿಡದೆ ಸುಡುವ ಕಾಯಕ ತಪ್ಪಿಲ್ಲ.

‘ಕೋವಿಡ್‌ನಿಂದ ಸತ್ತವರ ಮೃತದೇಹಗಳ ಅಂತ್ಯಕ್ರಿಯೆ ನಡೆಸಲು ಗೊತ್ತುಪಡಿಸಲಾದ ಬಿಬಿಎಂಪಿಯ ಏಳು ಚಿತಾಗಾರಗಳ ಪೈಕಿ ಆರರಲ್ಲಿ ಐದು ದಿನಗಳಲ್ಲಿ 565 ಮಂದಿಯ (ಪಣತ್ತೂರು ಚಿತಾಗಾರದ ವಿವರ ಅಲಭ್ಯ) ಅಂತ್ಯಕ್ರಿಯೆ ನಡೆಸಲಾಗಿದೆ. ಈ ಎಲ್ಲ ಚಿತಾಗಾರಗಳ ಸಿಬ್ಬಂದಿ ತಡರಾತ್ರಿವರೆಗೂ ನಿರಂತರವಾಗಿ ಕೆಲಸ ಮಾಡಿದ್ದಾರೆ. ವಿದ್ಯುತ್ ಚಿತಾಗಾರದ ಬೆಂಕಿಯ ಬೇಗೆಯ ನಡುವೆ ಹಗಲೂ ರಾತ್ರಿ ಕೆಲಸ ಮಾಡಿದರೆ ಕಾರ್ಮಿಕರ ಆರೋಗ್ಯದ ಸ್ಥಿತಿ ಏನಾಗಬೇಡ’ ಎಂದು ಪ್ರಶ್ನಿಸುತ್ತಾರೆ ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ ಅ.ಸುರೇಶ.

‘ನಮಗೆ ಊಟ ಮಾಡುವುದಕ್ಕೂ ಪುರುಸೊತ್ತು ಇಲ್ಲ. ಅಷ್ಟೊಂದು ಕೆಲಸದ ಹೊರೆ ಇದೆ. ನಾವು ಇದುವರೆಗೆ (ರಾತ್ರಿ 10 ಗಂಟೆ) 18 ಶವಗಳನ್ನು ಸುಟ್ಟಿದ್ದೇವೆ. ಇನ್ನೂ 18 ಶವಗಳು ಬಾಕಿ ಇವೆ. ಇವುಗಳಲ್ಲಿ ಮೂರರ ಅಂತ್ಯಕ್ರಿಯೆಯನ್ನು ಮಾತ್ರ ಬುಧವಾರ ನಡೆಸಿ ಇನ್ನುಳಿದವುಗಳ ಅಂತ್ಯಕ್ರಿಯೆ ಗುರುವಾರ ನಡೆಸಲು ನಿರ್ಧರಿಸಿದ್ದೇವೆ’ ಎಂದು ಕೂಡ್ಲು ಚಿತಾಗಾರದ ಸಿಬ್ಬಂದಿ ಚಂದ್ರು ತಿಳಿಸಿದರು.

‘ಅಂತ್ಯಕ್ರಿಯೆ ನಡೆಸುವಾಗ ಬೆಂಕಿಯ ತಾಪಕ್ಕೆ ಹಾಗೇ ಸುಮ್ಮನೆ ನಿಲ್ಲುವುದಕ್ಕೂ ಆಗುವುದಿಲ್ಲ. ಆದರೆ, ನಾವು ಹಗಲೂ ರಾತ್ರಿ ಚಿತಾಗಾರದಲ್ಲಿ ಕೆಲಸ ಮಾಡಬೇಕಿದೆ. ಬಿಬಿಎಂಪಿಯವರು ಏನಾದರೂ ಪರ್ಯಾಯ ವ್ಯವಸ್ಥೆ ಮಾಡಬೇಕು’ ಎಂದು ಒತ್ತಾಯಿಸಿದರು.

ಚಿತಾಗಾರ ಸಿಬ್ಬಂದಿಯ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲಲು ‘ಪ್ರಜಾವಾಣಿ’ ಏ. 18ರ ಸಂಚಿಕೆಯಲ್ಲಿ ‘ತಡರಾತ್ರಿವರೆಗೂ ಶವ ಸುಡುವ ಚಿತಾಗಾರ ಕಾರ್ಮಿಕರು’ ಎಂಬ ವಿಶೇಷ ವರದಿ ಪ್ರಕಟಿಸಿತ್ತು. ಮರುದಿನ, ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಮೇಡಿ ಅಗ್ರಹಾರ ಚಿತಾಗಾರಕ್ಕೆ ತೆರಳಿ ಅಲ್ಲಿನ ಸಿಬ್ಬಂದಿಯ ಸಮಸ್ಯೆಗಳನ್ನು ಆಲಿಸಿದ್ದರು. ಎಲ್ಲ ಚಿತಾಗಾರಗಳಲ್ಲೂ ಪಾಳಿ ವ್ಯವಸ್ಥೆ ಮಾಡುವಂತೆ ಸೂಚಿಸಿದ್ದರು. ಅದಿನ್ನೂ ಜಾರಿಯಾಗಿಲ್ಲ. ಆದರೆ, ಕಾರ್ಮಿಕರಿಗೆ ತಿಂಗಳಾನುಗಟ್ಟಲೆ ಬಾಕಿ ಇದ್ದ ಸಂಬಳ ಬಿಡುಗಡೆಗೆ ಬಿಬಿಎಂಪಿ ಕ್ರಮ ಕೈಗೊಂಡಿದೆ.

ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಯನ್ನು ಗುರುವಾರದಿಂದ ತನ್ನ ವ್ಯಾಪ್ತಿಯ ಎಲ್ಲ 12 ವಿದ್ಯುತ್ ಚಿತಾಗಾರಗಳಲ್ಲೂ ನಡೆಸಲು ಬಿಬಿಎಂಪಿ ಕ್ರಮ ಕೈಗೊಂಡಿದೆ. ಇದರಿಂದ ಯಲಹಂಕ ವಲಯದ ಹೆಬ್ಬಾಳ ಕೆಂಪಾಪುರ, ಪೂರ್ವ ವಲಯದ ಕಲ್ಲಹಳ್ಳಿ, ದಕ್ಷಿಣ ವಲಯದ ವಿಲ್ಸನ್ ಗಾರ್ಡನ್ ಹಾಗೂ ಪಶ್ಚಿಮ ವಲಯದ ಹರಿಶ್ಚಂದ್ರ ಘಾಟ್ ಮತ್ತು ಮೈಸೂರು ರಸ್ತೆ ಚಿತಾಗಾರಗಳು ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆಗೆ ಹೆಚ್ಚುವರಿಯಾಗಿ ಲಭಿಸಲಿವೆ. ಇದರಿಂದಲಾದರೂ ಚಿತಾಗಾರ ಸಿಬ್ಬಂದಿ ಮೇಲೆ ಒತ್ತಡ ಕಡಿಮೆಯಾಗುತ್ತದೆಯೋ ಕಾದುನೋಡಬೇಕಿದೆ.

ಬೊಮ್ಮನಹಳ್ಳಿ ವಲಯದ ಕೂಡ್ಲು ಚಿತಾಗಾರದ ಬಳಿ ಬುಧವಾರ ಸಾಲುಗಟ್ಟಿ ನಿಂತಿದ್ದ ವಾಹನಗಳು. ಈ ಪ್ರದೇಶವನ್ನು ಬಿಬಿಎಂಪಿ ಸಿಬ್ಬಂದಿ ಸೋಂಕು ನಿವಾರಕ ಸಿಂಪಡಿಸಿ ಸ್ವಚ್ಛಗೊಳಿಸಿದರು– ಪ್ರಜಾವಾಣಿ ಚಿತ್ರ

> **ಚಿತಾಗಾರ ಸಿಬ್ಬಂದಿಯ ಒತ್ತಡ ನಿವಾರಿಸಲು ಬಿಬಿಎಂಪಿ ಮುಂದಾಗದಿದ್ದರೆ, ಎಲ್ಲ ಚಿತಾಗಾರಗಳ ಸಿಬ್ಬಂದಿ ಇನ್ನೆರಡು ದಿನಗಳಲ್ಲಿ ಕೆಲಸ ಸ್ಥಗಿತಗೊಳಿಸಲಿದ್ದಾರೆ.**
> **ಅ.ಸುರೇಶ.** ಅಂಬೇಡ್ಕರ್ ದಲಿತ ಸಂಘರ್ಷ ಸಮಿತಿಯ ರಾಜ್ಯ ಪ್ರಧಾನ ಕಾರ್ಯದರ್ಶಿ

ಬಿಬಿಎಂಪಿ ಚಿತಾಗಾರಗಳಲ್ಲಿ ನಡೆಸಿದ ಅಂತ್ಯಕ್ರಿಯೆಗಳ ವಿವರ (ಶುಕ್ರವಾರದಿಂದ ಗುರುವಾರದವರೆಗೆ)

ಚಿತಾಗಾರ	ಏ16	ಏ17	ಏ18	ಏ19	ಏ20	ಒಟ್ಟು
ಸುಮನಹಳ್ಳಿ	25	21	31	25	27	129
ಪೀಣ್ಯ	15	13	24	23	29	104
ಕೆಂಗೇರಿ	22	14	22	20	28	106
ಬನಶಂಕರಿ	15	19	24	27	29	114
ಕೂಡ್ಲು	12	18	19	15	23	87
ಮೇಡಿ ಅಗ್ರಹಾರ	20	26	26	28	42	142

ಚಿತಾಗಾರ ಕಾರ್ಮಿಕರ ಬೇಡಿಕೆಗಳು

- ಪ್ರತಿ ತಿಂಗಳೂ ಸರಿಯಾಗಿ ಸಂಬಳ ನೀಡಬೇಕು
- ಚಿತಾಗಾರ ಸಿಬ್ಬಂದಿಯ ಊಟ– ತಿಂಡಿಗೆ ವ್ಯವಸ್ಥೆ ಮಾಡಬೇಕು
- ಕೋವಿಡ್ ಲಸಿಕೆ ಹಾಕಿಸಬೇಕು
- ಕೋವಿಡ್‌ನಿಂದ ಸತ್ತರೆ ವಿಮೆ ಸೌಕರ್ಯ ಒದಗಿಸಬೇಕು
- ಸಿಬ್ಬಂದಿಗೆ ಕೋವಿಡ್ ತಗುಲಿದರೆ ಚಿಕಿತ್ಸೆಗೆ ಆಸ್ಪತ್ರೆಗಳಲ್ಲಿ ತಕ್ಷಣ ಹಾಸಿಗೆ ವ್ಯವಸ್ಥೆ ಕಲ್ಪಿಸಬೇಕು
- ಸುರಕ್ಷತಾ ಸಾಮಗ್ರಿಗಳನ್ನು ಒದಗಿಸಬೇಕು

‘ಅಂತ್ಯಕ್ರಿಯೆಗೂ ಪ್ರಭಾವ ಬಳಸದಿರಿ’

‘ತಮಗೆ ಬೇಕಾದ ಕುಟುಂಬದ ಸದಸ್ಯರೊಬ್ಬರ ಅಂತ್ಯಕ್ರಿಯೆಯನ್ನು ತಕ್ಷಣವೇ ಕೈಗೊಳ್ಳುವಂತೆ ಪ್ರಭಾವಿ ವ್ಯಕ್ತಿಯೊಬ್ಬರು ಬಿಬಿಎಂಪಿ ಅಧಿಕಾರಿಗಳ ಮೇಲೆ ಒತ್ತಡ ಹೇರಿದ್ದರು. ಹಾಗಾಗಿ ನಾವು ಸರದಿ ತಪ್ಪಿಸಿ ಅಂತ್ಯಕ್ರಿಯೆ ನಡೆಸಬೇಕಾಯಿತು. ತಮ್ಮ ಬಂಧುಗಳ ಅಂತ್ಯಕ್ರಿಯೆಗಾಗಿ ಸರದಿಯಲ್ಲಿ ಕಾಯುತ್ತಿದ್ದವರೆಲ್ಲ ಸಿಟ್ಟಿಗೆದ್ದು ನಮ್ಮ ಮೇಲೆ ಹಲ್ಲೆಗೇ ಮುಂದಾದರು. ಈ ಪರಿಸ್ಥಿತಿ ಸಂಭಾಳಿಸಲು ನಾವು ಬಹಳ ಕಷ್ಟ ಪಡಬೇಕಾಯಿತು’ ಎಂದು ಸುಮನಹಳ್ಳಿ ಚಿತಾಗಾರದ ಸಿಬ್ಬಂದಿ ಎನ್.ರವಿ ತಿಳಿಸಿದರು.

‘ಸಾವು ಎಲ್ಲರಿಗೂ ಒಂದೇ ಎಂಬುದನ್ನು ಪ್ರಭಾವಶಾಲಿ ವ್ಯಕ್ತಿಗಳು ಅರ್ಥ ಮಾಡಿಕೊಳ್ಳಬೇಕು. ಅಂತ್ಯಕ್ರಿಯೆಗೂ ಪ್ರಭಾವ ಬಳಸುವುದನ್ನು ನಿಲ್ಲಿಸಬೇಕು’ಎಂದು ಅವರು ಕೋರಿದರು.

‘ಒಂದೊಂದು ಆಂಬುಲೆನ್ಸ್‌ನಲ್ಲಿ ಎರಡು ಮೂರು ಹೆಣ’

‘ಚಿತಾಗಾರಗಳಿಗೆ ಬರುವ ಒಂದೊಂದು ಆಂಬುಲೆನ್ಸ್‌ಗಳಲ್ಲಿ ಎರಡು ಮೂರು ಹೆಣಗಳನ್ನು ಅಂತ್ಯಕ್ರಿಯೆಗೆ ತರಲಾಗುತ್ತಿದೆ. ಹೀಗೆ ಮಾಡಬೇಡಿ ಎಂದರೂ ಕೇಳುತ್ತಿಲ್ಲ. ಸ್ಮಶಾನಕ್ಕೆ ಬಂದ ಹೆಣವನ್ನು ಮರಳಿ ಕಳುಹಿಸಲು ಮನಸ್ಸಾಗುವುದಿಲ್ಲ. ಎಷ್ಟೇ ಒತ್ತಡವಾದರೂ ನಾವು ನಮ್ಮ ಕಾಯಕವನ್ನು ಶ್ರದ್ಧೆಯಿಂದ ಮಾಡುತ್ತಿದ್ದೇವೆ. ಜನರೂ ನಮ್ಮ ಕಷ್ಟವನ್ನು ಅರ್ಥಮಾಡಿಕೊಳ್ಳಬೇಕು’ ಎಂದು ಚಿತಾಗಾರ ಸಿಬ್ಬಂದಿಯೊಬ್ಬರು ತಿಳಿಸಿದರು.

ಅಂತ್ಯಸಂಸ್ಕಾರಕ್ಕೆ ಆರು ಕಡೆ ಜಮೀನು: ಸಚಿವ ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಸಂಸ್ಕಾರಕ್ಕಾಗಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಆರು ಕಡೆಗಳಲ್ಲಿ ಜಮೀನು ಗುರುತಿಸಲಾಗಿದೆ ಎಂದು ಕಂದಾಯ ಸಚಿವ ಆರ್. ಅಶೋಕ ತಿಳಿಸಿದರು.

‘ತಾವರೆಕೆರೆಯಲ್ಲಿ 4 ಎಕರೆ ಜಮೀನು ಗುರುತಿಸಲಾಗಿದೆ. ಇನ್ನೂ ಐದು ಕಡೆ ವ್ಯವಸ್ಥೆ ಮಾಡಲಾಗುವುದು. ಅಲ್ಲಿ ತೆರೆದ ಸ್ಥಳದಲ್ಲಿ ಅಂತ್ಯಸಂಸ್ಕಾರಕ್ಕೆ ಅವಕಾಶ ಕಲ್ಪಿಸಲಾಗುವುದು’ ಎಂದು ಪತ್ರಿಕಾಗೋಷ್ಠಿಯಲ್ಲಿ ಬುಧವಾರ ತಿಳಿಸಿದರು.

‘ಕೋವಿಡ್ ನಿಯಂತ್ರಣದಲ್ಲಿ ರಾಜ್ಯ ಸರ್ಕಾರದ ಎಲ್ಲರೂ ಜತೆಯಾಗಿದ್ದೇವೆ. ವಿರೋಧ ಪಕ್ಷದವರು ಆರೋಪಿಸುವಂತೆ ನಮ್ಮಲ್ಲಿ ಯಾವುದೇ ಒಡಕು ಇಲ್ಲ’ ಎಂದು ಅಶೋಕ ಹೇಳಿದರು.

ಮಾರ್ಗಸೂಚಿ ಪಾಲನೆ: ಐಪಿಎಸ್ ಅಧಿಕಾರಿಗಳಿಗೆ ಉಸ್ತುವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿಯಂತ್ರಣಕ್ಕಾಗಿ ರಾಜ್ಯ ಪೊಲೀಸ್ ಇಲಾಖೆ ತೆಗೆದುಕೊಂಡ ಕ್ರಮಗಳನ್ನು ಪರಿಶೀಲಿಸಲು ಮತ್ತು ಮಾರ್ಗಸೂಚಿ ಪಾಲನೆ ಮಾಡುವ ನಿಟ್ಟಿನಲ್ಲಿ ಉಸ್ತುವಾರಿಗಾಗಿ ಹಿರಿಯ ಐಪಿಎಸ್ ಅಧಿಕಾರಿಗಳನ್ನು ನೇಮಿಸಲಾಗಿದೆ.

ಭಾಸ್ಕರ್ ರಾವ್–ಉತ್ತರ ವಲಯ(-ವಿಜಯಪುರ, ಬಾಗಲಕೋಟೆ, ಬೆಳಗಾವಿ), ಎ.ಎಸ್.ಎನ್. ಮೂರ್ತಿ– ಬಳ್ಳಾರಿ ವಲಯ(ಬಳ್ಳಾರಿ, ರಾಯಚೂರು), ಅರುಣ್ ಚಕ್ರವರ್ತಿ–ಈಶಾನ್ಯವಲಯ(ಬೀದರ್, ಕಲಬುರ್ಗಿ), ಅಮ್ರಿತ್ ಪೌಲ್–ದಕ್ಷಿಣ ವಲಯ(ಮೈಸೂರು, ಮಂಡ್ಯ, ಹಾಸನ), ಸೀಮಂತ ಕುಮಾರ್ ಸಿಂಗ್–ಕೇಂದ್ರ ವಲಯ(ಬೆಂಗಳೂರು ಗ್ರಾಮಾಂತರ, ತುಮಕೂರು),ಉಮೇಶ್ ಕುಮಾರ್– ಪೂರ್ವ ವಲಯ(ಶಿವಮೊಗ್ಗ,ದಾವಣಗೆರೆ), ಹೇಮಂತ ನಿಂಬಾಳ್ಕರ್– ಪಶ್ಚಿಮ ವಲಯ–(ದಕ್ಷಿಣ ಕನ್ನಡ, ಉಡುಪಿ).

ಈ ಎಲ್ಲ ಅಧಿಕಾರಿಗಳು ಇದೇ 22 ರಂದು ನಿಗದಿ ಮಾಡಿದ ವಲಯಗಳಿಗೆ ಭೇಟಿ ನೀಡಿ, ಇದೇ 26 ರೊಳಗೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವರದಿ ನೀಡಬೇಕು ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಅಮಾನತು: ಕರ್ತವ್ಯ ಲೋಪ, ರೆಮಿಡಿಸಿವಿರ್ ಕೃತಕ ಅಭಾವಕ್ಕೆ ಕಾರಣದ ಆರೋಪದ ಮೇಲೆ ಸಹಾಯಕ ಔಷಧ ನಿಯಂತ್ರಕ ಬಿ.ಆರ್.ವೆಂಕಟೇಶ್ ಅವರನ್ನು ಅಮಾನತುಗೊಳಿಸಲಾಗಿದೆ.

ಶಿಕ್ಷಕರಿಗೆ ಹಾಜರಾತಿ ವಿನಾಯಿತಿ

ಬೆಂಗಳೂರು: ಕೋವಿಡ್ ಕಾರಣಕ್ಕೆ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೂ ಇದೇ 22ರಿಂದ ಮೇ 4ರವರೆಗೆ ನೇರ ತರಗತಿ ಸ್ಥಗಿತಗೊಳಿಸಿರುವುದರಿಂದ ಒಂದರಿಂದ 10ನೇ ತರಗತಿಯ ಶಿಕ್ಷಕರಿಗೆ ಇದೇ 27ರಿಂದ ಮೇ 4ರವರೆಗೆ ಶಾಲೆಗಳಿಗೆ ಹಾಜರಾಗುವುದರಿಂದ ವಿನಾಯಿತಿ ನೀಡಿ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

ಆದರೆ, 10ನೇ ತರಗತಿಗೆ ಬೋಧಿಸುವ ಶಿಕ್ಷಕರು, ಆ ವಿದ್ಯಾರ್ಥಿಗಳೊಂದಿಗೆ ಕಲಿಕಾ ವಿಷಯಕ್ಕೆ ಸಂಬಂಧಿಸಿದಂತೆ ಆನ್‌ಲೈನ್ ಅಥವಾ ದೂರವಾಣಿ ಸಂಪರ್ಕದಲ್ಲಿದ್ದು, ಪಾಠಕ್ಕೆ ಸಂಬಂಧಿಸಿದ ಗೊಂದಲ ಪರಿಹರಿಸಬೇಕು ಎಂದು ಸೂಚಿಸಲಾಗಿದೆ.

ಒಂದರಿಂದ 9ರವರೆಗಿನ ತರಗತಿಗಳಿಗೆ ಪೂರೈಸಿದ ಶೈಕ್ಷಣಿಕ ಚಟುವಟಿಕೆಯನ್ನು ಶಾಲಾ ಹಂತದಲ್ಲಿ ಏ. 26ರ ಒಳಗೆ ಮೌಲ್ಯಾಂಕನ ಪೂರ್ಣಗೊಳಿಸಲು ತಿಳಿಸಲಾಗಿದೆ. ಈ ಹಿಂದೆ ಏ. 30ರ ಒಳಗೆ ಪೂರ್ಣಗೊಳಿಸಲು ಸೂಚಿಸಲಾಗಿತ್ತು.

ಮೆಟ್ರೊಗೆ ಕ್ಯೂ

ಬಸ್‌ಗಳ ಸಂಚಾರ ಕಡಿಮೆಯಾಗಿದ್ದರಿಂದ ಮೆಟ್ರೊ ರೈಲು ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿತ್ತು. ನಗರದಲ್ಲಿ ವಿಧಾನಸೌಧ ನಿಲ್ದಾಣದ ಮುಂದೆ ಬುಧವಾರ ಸರದಿಯಲ್ಲಿ ನಿಂತಿದ್ದ ಪ್ರಯಾಣಿಕರು ಪ್ರಜಾವಾಣಿ ಚಿತ್ರ

‘ಮನೆಯಿಂದಲೇ ಕಾರ್ಯನಿರ್ವಹಿಸಿ’

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಏ.22ರಿಂದ 30ರವರೆಗೆ ಮನೆಯಿಂದಲೇ ಕಾರ್ಯನಿರ್ವಹಿಸುವಂತೆ ಕುಲಪತಿ ಪ್ರೊ.ಕೆ.ಆರ್. ವೇಣುಗೋಪಾಲ್ ಸೂಚನೆ ನೀಡಿದ್ದಾರೆ.

‘ಸರ್ಕಾರದ ಆದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಆದರೆ, ಅಗತ್ಯ ಸೇವೆಯಲ್ಲಿ ತೊಡಗಿಸಿಕೊಂಡಿರುವ ಸಿಬ್ಬಂದಿ ಕಚೇರಿಗೆ ಬಂದು ಕಾರ್ಯನಿರ್ವಹಿಸಬೇಕು’ ಎಂದೂ ಅವರು ಹೇಳಿದ್ದಾರೆ.

‘ಬೋಧಕ ಸಿಬ್ಬಂದಿಯು ಮೇ 4ರವರೆಗೆ ಅಥವಾ ಮುಂದಿನ ಆದೇಶದವರೆಗೆ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳಬೇಕು’ ಎಂದು ಅವರು ಸೂಚಿಸಿದ್ದಾರೆ.

ಮಾರುಕಟ್ಟೆ ಸ್ಥಳಾಂತರಕ್ಕೆ ವರ್ತಕರ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಹರಡುವುದನ್ನು ತಡೆಯುವ ನಿಟ್ಟಿನಲ್ಲಿ ಮಾರುಕಟ್ಟೆಗಳ ಸ್ಥಳಾಂತರಕ್ಕೆ ಸರ್ಕಾರ ಮುಂದಾಗಿದ್ದು, ಅದಕ್ಕೆ ಸಿದ್ಧತೆಗಳನ್ನು ಆರಂಭಿಸಿದೆ. ಆದರೆ, ಅಗತ್ಯ ಎನಿಸಿದರೆ ಒಂದಷ್ಟು ದಿನ ಮಾರುಕಟ್ಟೆ ಮುಚ್ಚುತ್ತೇವೆ, ಸ್ಥಳಾಂತರ ಸಾಧ್ಯವಿಲ್ಲ ಎಂದು ವರ್ತಕರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಯಶವಂತಪುರ ಎಪಿಎಂಸಿಯಲ್ಲಿನ ತರಕಾರಿ ಮಾರುಕಟ್ಟೆ ಕಳೆದ ವರ್ಷವೇ ದಾಸನಪುರ ಎಪಿಎಂಸಿಗೆ ಸ್ಥಳಾಂತರ ಆಗಿದೆ. ಈರುಳ್ಳಿ, ಬೆಳ್ಳುಳ್ಳಿ ಮತ್ತು ಆಲೂಗಡ್ಡೆ ವಹಿವಾಟು ಕೆಲ ದಿನಗಳ ಕಾಲ ದಾಸನಪುರಕ್ಕೆ ಸ್ಥಳಾಂತರ ಆಗಿತ್ತು. ಸದ್ಯ ಯಶವಂತಪುರಕ್ಕೆ ಮರಳಿದೆ.

ಈಗ ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ಮಾರುಕಟ್ಟೆಗಳನ್ನು ಸ್ಥಳಾಂತರಿಸಲು ಬಿಬಿಎಂಪಿ ಮತ್ತು ಕೃಷಿ ಮಾರುಕಟ್ಟೆ ಇಲಾಖೆ ಅಧಿಕಾರಿಗಳು ತಯಾರಿ ನಡೆಸಿದ್ದಾರೆ. ಕಲಾಸಿಪಾಳ್ಯ ಮತ್ತು ಯಶವಂತಪುರ ಮಾರುಕಟ್ಟೆಗಳಿಗೆ ಅಧಿಕಾರಿಗಳು ಬುಧವಾರ ಭೇಟಿ ನೀಡಿ ಪರಿಶೀಲನೆಯನ್ನೂ ನಡೆಸಿದ್ದಾರೆ.

‘ಯಶವಂತಪುರ ಎಪಿಎಂಸಿಯಲ್ಲಿನ ಈರುಳ್ಳಿ, ಬೆಳ್ಳುಳ್ಳಿ ಮತ್ತು ಆಲೂಗಡ್ಡೆ ವ್ಯಾಪಾರದ ಮೇಲಷ್ಟೇ ಅಧಿಕಾರಿಗಳಿಗೆ ಕಣ್ಣಿಟ್ಟಿದ್ದಾರೆ. ರೈತರೊಂದಿಗೆ ನೇರ ಸಂಬಂಧ ಇರುವ ಕಾರಣ ಈ ಮಾರುಕಟ್ಟೆಯನ್ನು ಇಲ್ಲೇ ಉಳಿಸಬೇಕು’ ಎಂದು ವರ್ತಕರು ಒತ್ತಾಯಿಸಿದ್ದಾರೆ.

‘ದಾಸನಪುರ ಮಾರುಕಟ್ಟೆಯಲ್ಲಿ ಕಳೆದ ವರ್ಷ ಹಲವು ಸವಾಲುಗಳನ್ನು ಎದುರಿಸಿ ಸಂಕಷ್ಟ ಅನುಭವಿಸಿದ್ದೇವೆ. ವ್ಯಾಪಾರ ವಹಿವಾಟು ನಷ್ಟವಾಗಿ ವರ್ತಕರು ಕೋಟ್ಯಂತರ ರೂಪಾಯಿ ಕಳೆದುಕೊಂಡಿದ್ದಾರೆ. ದಾಸ್ತಾನಿಡುವ ಪದಾರ್ಥಗಳಿಗೆ ಭದ್ರತೆ ಇಲ್ಲ. ಉತ್ತಮ ಸಾರಿಗೆ ವ್ಯವಸ್ಥೆ ಇಲ್ಲ. ಸಮೀಪದಲ್ಲಿ ಬ್ಯಾಂಕ್ ಕೂಡ ಇಲ್ಲದ ಕಾರಣ ಹಣ ಜೇಬಿನಲ್ಲಿಟ್ಟುಕೊಂಡು ಓಡಾಡುವುದೂ ಕಷ್ಟ’ ಎಂದು ಯಶವಂತಪುರ ಆಲೂಗಡ್ಡೆ, ಈರುಳ್ಳಿ ವರ್ತಕರ ಸಂಘದ ಕಾರ್ಯದರ್ಶಿ ಉದಯಶಂಕರ್ ಹೇಳಿದರು.

‘ಸ್ಥಳಾಂತರ ಒಂದನ್ನು ಬಿಟ್ಟು ಸರ್ಕಾರ ಕೈಗೊಳ್ಳುವ ಎಲ್ಲ ನಿರ್ಧಾರಗಳಿಗೆ ನಾವು ಬದ್ಧರಾಗಿದ್ದೇವೆ. ನಿಗದಿತ ಸಮಯದಲ್ಲೇ ವಹಿವಾಟು ನಡೆಸುತ್ತೇವೆ’ ಎಂದು ಭರವಸೆ ನೀಡಿದರು.

ಕಲಾಸಿಪಾಳ್ಯ ಮಾರುಕಟ್ಟೆಯನ್ನೂ ಕಳೆದ ವರ್ಷದಂತೆ ಎಲೆಕ್ಟ್ರಾನಿಕ್ ಸಿಟಿ ಸಮೀಪಕ್ಕೆ ಸ್ಥಳಾಂತರ ಮಾಡಲು ತಯಾರಿ ನಡೆಯುತ್ತಿದೆ. ಇದಕ್ಕೆ ವರ್ತಕರಿಂದ ವಿರೋಧ ವ್ಯಕ್ತವಾಗಿದೆ.

‘ಸರ್ಕಾರ ಹೇಳಿದ ಸಮಯದಲ್ಲಷ್ಟೆ ಅಂಗಡಿಗಳನ್ನು ತೆರೆದು ವಹಿವಾಟು ನಡೆಸುತ್ತೇವೆ. ಅಗತ್ಯ ಎನಿಸಿದರೆ ಕೆಲ ದಿನಗಳ ಮಟ್ಟಿಗೆ ಸಂಪೂರ್ಣ ಬಂದ್ ಮಾಡುತ್ತೇವೆ. ಅದರೆ, ಸ್ಥಳಾಂತರ ಮಾತ್ರ ಸಾಧ್ಯವಿಲ್ಲ’ ಎಂದು ಕಲಾಸಿಪಾಳ್ಯ ತರಕಾರಿ ವರ್ತಕರ ಸಂಘದ ಅಧ್ಯಕ್ಷ ಆರ್.ವಿ.ಗೋಪಿ ತಿಳಿಸಿದರು.

ಕೆ.ಆರ್.ಮಾರುಕಟ್ಟೆ ಹೊರಾಂಗಣದಲ್ಲಿ ತರಕಾರಿ ಮಾರಾಟ

ಕೆ.ಆರ್.ಮಾರುಕಟ್ಟೆ ಸ್ಥಳಾಂತರ ಅಸಾಧ್ಯ

‘ಕೆ.ಆರ್.ಮಾರುಕಟ್ಟೆಯಲ್ಲಿ 25 ರೀತಿಯ ಅಂಗಡಿ ಮುಂಗಟ್ಟುಗಳಿವೆ. ಅವುಗಳನ್ನು ಸ್ಥಳಾಂತರ ಮಾಡುವುದು ಅಸಾಧ್ಯದ ಮಾತು’ ಎಂದು ಕೆ.ಆರ್. ಮಾರುಕಟ್ಟೆ ವರ್ತಕರ ಸಂಘದ ಅಧ್ಯಕ್ಷ ದಿವಾಕರ್ ಹೇಳುತ್ತಾರೆ.

‘ಕೆ.ಆರ್. ಮಾರುಕಟ್ಟೆ ಒಂದರಲ್ಲೇ 2,200 ಅಂಗಡಿಗಳಿವೆ. ಹೂವು, ಹಣ್ಣು, ತರಕಾರಿ, ತೆಂಗಿನಕಾಯಿ, ಬಾಳೆ ಎಲೆ, ವೀಳ್ಯದೆಲೆ, ಕುಂಕುಮ, ಅಲ್ಯೂಮಿನಿಯಂ ಪಾತ್ರೆ, ಗ್ಯಾಸ್ ಸ್ಟವ್, ಸ್ಟೀಲ್ ಪಾತ್ರೆ, ದಿನಸಿ ಅಂಗಡಿ, ಬಟ್ಟೆ, ಪೇಪರ್, ಪುಸ್ತಕ, ಪ್ಲಾಸ್ಟಿಕ್ ಅಂಗಡಿಗಳು, ಕಾಂಡಿಮೆಂಟ್ ಸ್ಟೋರ್‌ಗಳು, ಮೀನು, ಮಾಂಸದ ಅಂಗಡಿಗಳು ಇಲ್ಲಿವೆ. ಇವೆಲ್ಲವನ್ನೂ ಎಲ್ಲಿಗೆ ಮತ್ತು ಹೇಗೆ ಸ್ಥಳಾಂತರ ಮಾಡಲು ಸಾಧ್ಯ’ ಎಂದು ಅವರು ಪ್ರಶ್ನಿಸಿದರು.

‘ಮಾರುಕಟ್ಟೆಯ ಹೊರಾಂಗಣದಲ್ಲಿನ ಫುಟ್‌ಪಾತ್ ಅಂಗಡಿಗಳನ್ನು ನೋಡಿ ಅದನ್ನೇ ಕೆ.ಆರ್.ಮಾರುಕಟ್ಟೆ ಎಂದು ಭಾವಿಸಲಾಗಿದೆ. ಮಾರುಕಟ್ಟೆಯ ಒಳಗೆ ಜನರಿಲ್ಲದೆ ಕಾಯುವ ಪರಿಸ್ಥಿತಿ ಇದೆ. ಹೀಗಾಗಿ, ಮಾರುಕಟ್ಟೆ ಸ್ಥಳಾಂತರ ನಿರ್ಧಾರವನ್ನು ಬಿಬಿಎಂಪಿ ಮಾಡಬಾರದು’ ಎಂದು ಒತ್ತಾಯಿಸಿದರು.

ಕರ್ನಾಟಕಕ್ಕೆ 25 ಸಾವಿರ ಡೋಸ್ ರೆಮ್‌ಡೆಸಿವಿರ್

ಪ್ರಜಾವಾಣಿ ವಾರ್ತೆ

ನವದೆಹಲಿ: ರೆಮ್‌ಡೆಸಿವಿರ್ ಔಷಧವನ್ನು 19 ರಾಜ್ಯಗಳಿಗೆ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರ ಸರ್ಕಾರ ಬುಧವಾರ ಹಂಚಿಕೆ ಮಾಡಿದ್ದು, ಕರ್ನಾಟಕಕ್ಕೆ 25,400 ಡೋಸ್‌ಗಳಷ್ಟು ದೊರೆಯಲಿದೆ.

ಮ್ಯ್ಲಾನ್ ಕಂಪನಿಯಿಂದ 17,400 ಮತ್ತು ಸಿಪ್ಲಾದಿಂದ 1000, ಸನ್ ಕಂಪನಿಯಿಂದ 6000 ಹಾಗೂ ಜ್ಯುಬಿಲಂಟ್‌ನಿಂದ 1000 ಡೋಸ್‌ಗಳಷ್ಟು ರೆಮ್‌ಡೆಸಿವಿರ್ ದೊರೆಯಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪರಿಸ್ಥಿತಿಯನ್ನು ಅವಲಂಬಿಸಿ ಮತ್ತೆ ರೆಮ್‌ಡೆಸಿವಿರ್ ಪೂರೈಕೆಗೆ ಕ್ರಮಗಳನ್ನು ಕೈಗೊಳ್ಳಲಾಗುವುದು. ರೆಮ್‌ಡೆಸಿವಿರ್ ಸಮರ್ಪಕ ಪೂರೈಕೆಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಯನ್ನು ನೇಮಿಸಬೇಕು ಎಂದು ಕೇಂದ್ರ ಸರ್ಕಾರ ರಾಜ್ಯಗಳಿಗೆ ಸೂಚಿಸಿದೆ.

ಅತಿ ಹೆಚ್ಚು ಕೋವಿಡ್ ಪ್ರಕರಣಗಳು ಪತ್ತೆಯಾಗಿರುವ ಮಹಾರಾಷ್ಟ್ರಕ್ಕೆ 2.69 ಲಕ್ಷ ಹಾಗೂ ಗುಜರಾತ್‌ಗೆ 1.63 ಲಕ್ಷ, ಉತ್ತರ ಪ್ರದೇಶಕ್ಕೆ 1.22 ಲಕ್ಷ, ಮಧ್ಯಪ್ರದೇಶಕ್ಕೆ 92,400ರಷ್ಟು ಡೋಸ್‌ಗಳನ್ನು ಕೇಂದ್ರ ಸರ್ಕಾರ ಹಂಚಿಕೆ ಮಾಡಿದೆ.

‘ದುಪ್ಪಟ್ಟು ದರ ಪಡೆದರೆ ದೂರು ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿಯ ಸಿ.ಎಚ್.ಬಿ.ಎಂ.ಎಸ್. ಪೋರ್ಟಲ್ ಹಾಗೂ ಇತರ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಗಳ ರೆಫರಲ್ ಮೂಲಕ ಸರ್ಕಾರಿ ಕೋಟಾದಡಿಯಲ್ಲಿ ಆಸ್ಪತ್ರೆಗಳಿಗೆ ದಾಖಲಾಗುವ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ಸಂಪೂರ್ಣ ಉಚಿತವಾಗಿರುತ್ತದೆ. ರೆಮ್‌ಡಿಸಿವಿರ್ ಚುಚ್ಚುಮದ್ದನ್ನೂ ಉಚಿತವಾಗಿ ನೀಡಲು ತೀರ್ಮಾನಿಸಲಾಗಿದೆ’ ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ತಿಳಿಸಿದೆ.

‘ಕೋವಿಡ್ ರೋಗಿಗಳಿಗೆ ‘ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ’ ಯೋಜನೆಯ ಅಡಿಯಲ್ಲಿ ಸಾರ್ವಜನಿಕ ಹಾಗೂ ಖಾಸಗಿ ಆಸ್ಪತ್ರೆಗಳ ಮೂಲಕ ಚಿಕಿತ್ಸೆ ಒದಗಿಸಲಾಗುತ್ತಿದೆ. ಒಂದೊಮ್ಮೆ ರೋಗಿಗಳು ತಮ್ಮ ಇಚ್ಛಾನುಸಾರ ನೇರವಾಗಿ ಖಾಸಗಿ ಆಸ್ಪತ್ರೆಗಳಿಗೆ ದಾಖಲಾದರೆ ಚಿಕಿತ್ಸೆಯ ಸಂಪೂರ್ಣ ವೆಚ್ಚವನ್ನು ಅವರೇ ಭರಿಸಬೇಕು’ ಎಂದು ಟ್ರಸ್ಟ್‌ನ ಕಾರ್ಯಕಾರಿ ನಿರ್ದೇಶಕಿ ಕೆ.ಎಸ್. ಲತಾಕುಮಾರಿ ಹೇಳಿದ್ದಾರೆ.

‘ಸರ್ಕಾರವು ಜನರಲ್ ವಾರ್ಡ್‌ಗೆ ₹10 ಸಾವಿರ, ಎಚ್‌ಡಿಯುಗೆ ₹12 ಸಾವಿರ, ಐಸೊಲೇಷನ್ ಐಸಿಯು (ವೆಂಟಿಲೇಟರ್ ಇಲ್ಲದೆ) ₹15 ಸಾವಿರ ಹಾಗೂ ಐಸೊಲೇಷನ್ ಐಸಿಯು (ವೆಂಟಿಲೇಟರ್ ಸಹಿತ) ₹25 ಸಾವಿರ ದರ ನಿಗದಿ ಮಾಡಿದೆ. ಒಂದೊಮ್ಮೆ ಖಾಸಗಿ ಆಸ್ಪತ್ರೆಗಳು ಇದಕ್ಕಿಂತಲೂ ಹೆಚ್ಚಿನ ದರಗಳನ್ನು ವಿಧಿಸಿದರೆ, ಆಸ್ಪತ್ರೆಗೆ ದಾಖಲಿಸಿಕೊಳ್ಳಲು ನಿರಾಕರಿಸಿದರೆ ಅಥವಾ ಚಿಕಿತ್ಸೆ ನೀಡಲು ವಿಳಂಬ ಮಾಡಿದರೆ 1912ಗೆ ಕರೆ ಮಾಡಿ ದೂರು ನೀಡಬಹುದು. 18004258330ಗೂ ಸಂಪರ್ಕಿಸಬಹುದು. ಇಲ್ಲವೇ sastgrievance@gmail.com ಮೂಲಕವೂ ದೂರು ಸಲ್ಲಿಸಬಹುದು’ ಎಂದು ಅವರು ತಿಳಿಸಿದ್ದಾರೆ.

ಬಿಬಿಎಂಪಿ: ಮಧ್ಯಾಹ್ನ 3ರಿಂದ 5ರವರೆಗೆ ಮಾತ್ರ ಭೇಟಿಗೆ ಅವಕಾಶ

ಬೆಂಗಳೂರು: ನಗರದಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಬಿಬಿಎಂಪಿ ಕೇಂದ್ರ ಕಚೇರಿಗೆ ಸಾರ್ವಜನಿಕ ಭೇಟಿಗೆ ಮಧ್ಯಾಹ್ನ 3 ರಿಂದ ಸಂಜೆ 5ರವರೆಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಜನಪ್ರತಿನಿಧಿಗಳು, ಪತ್ರಕರ್ತರಿಗೆ ಈ ನಿರ್ಬಂಧದಿಂದ ವಿನಾಯಿತಿ ನೀಡಲಾಗಿದೆ.

‘ಕೊರೊನಾ ಸೋಂಕು ವ್ಯಾಪಕವಾಗಿ ಹರಡುತ್ತಿರುವುದರಿಂದ ಜನರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರು ಸಹಕರಿಸಬೇಕು’ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ನೀರಿನ ಶುಲ್ಕ: ಡಿಜಿಟಲ್ ಪಾವತಿ ಮುಂದುವರಿಕೆ

ಪ್ರಜಾವಾಣಿ

ಬೆಂಗಳೂರು: ಡಿಜಿಟಲ್ ಮಾರ್ಗಗಳ ಮೂಲಕವೂ ನೀರಿನ ಶುಲ್ಕ ಪಾವತಿಸಲು ವ್ಯವಸ್ಥೆ ಮಾಡಿದ್ದ ಜಲಮಂಡಳಿ, ಈ ಸೌಲಭ್ಯ ಮುಂದುವರಿಸಿದೆ.

ಮಂಡಳಿಯ ಕಿಯೋಸ್ಕ್ ಗಳಲ್ಲಿ ಚೆಕ್ ಅಥವಾ ಡಿಡಿ ಮೂಲಕವೂ ಶುಲ್ಕ ತೆಗೆದುಕೊಳ್ಳಲಾಗುತ್ತಿತ್ತು. ಆದರೆ, ಚೆಕ್‌ಗಳು ಹೆಚ್ಚಿನ ಬ್ಯಾಂಕುಗಳಲ್ಲಿ ತಿರಸ್ಕೃತವಾಗುತ್ತಿದ್ದುದರಿಂದ ಮಂಡಳಿ ಡಿಜಿಟಲ್ ಪಾವತಿಗೆ ಅವಕಾಶ ನೀಡಿದೆ.

ಚೆಕ್ ಅಥವಾ ಡಿಡಿ ಬದಲಿಗೆ ಮಂಡಳಿಯ ಕಿಯೋಸ್ಕ್‌ಗಳಲ್ಲಿ ನಗದು ಮೂಲಕ ಮಾತ್ರ ಶುಲ್ಕ ಸ್ವೀಕರಿಸಲಾಗುತ್ತದೆ. ಅಲ್ಲದೆ, ಬಿಬಿಪಿಎಸ್, ಪೇಟಿಎಂ, ಭೀಮ್, ಅಮೇಜಾನ್, ಫೋನ್‌ಪೇ, ಗೂಗಲ್‌ಪೇ ಸೇರಿದಂತೆ ಡಿಜಿಟಲ್ ಮಾಧ್ಯಮದ ಮೂಲಕ ಪಾವತಿಸಬಹುದು ಎಂದು ಮಂಡಳಿ ಹೇಳಿದೆ.

ಮಂಡಳಿಯ ಜಾಲತಾಣ www.bwssb.gov.in ಗೆ ಲಾಗಿನ್ ಆಗಿಯೂ ಶುಲ್ಕ ಪಾವತಿಸಬಹುದು.

ಅಪಘಾತ: ಐವರು ಮಹಿಳೆಯರು ಸಾವು

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕಿನ ಕೊಳ್ಳೂರು ಬಳಿ ಬುಧವಾರ ಬೆಳಿಗ್ಗೆ ಟಂಟಂ ವಾಹನ ಮತ್ತು ಟ್ಯಾಂಕರ್ ಮಧ್ಯೆ ಡಿಕ್ಕಿ ಸಂಭವಿಸಿ, ಐವರು ಮಹಿಳಾ ಕೂಲಿಕಾರ್ಮಿಕರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಐವರು ಗಂಭೀರವಾಗಿ ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ವಡಗೇರಾ ತಾಲ್ಲೂಕಿನ ಮುನಮುಟಗಿ ಗ್ರಾಮದ ದೇವೀಂದ್ರಮ್ಮ (57), ಅಯ್ಯಮ್ಮ (45), ಶರಣಮ್ಮ (35), ಉಮಾದೇವಿ (40) ಹಾಗೂ ಕಾಶೀಂಬಿ (55) ಮೃತರು. ಇವರು ಜಮೀನಿನ ಕೂಲಿಕೆಲಸಕ್ಕೆ ಟಂಟಂ ವಾಹನದಲ್ಲಿ ತೆರಳುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಶಹಾಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೊಮ್ಮನಹಳ್ಳಿ ಯುವ ಕಾಂಗ್ರೆಸ್ ಕಾರ್ಯಕರ್ತರು ಎಚ್‌ಎಸ್‌ಆರ್ ಬಡಾವಣೆಯಲ್ಲಿ ಬುಧವಾರ ‘ಯಮಕಿಂಕರ’ರ ವೇಷತೊಟ್ಟು ಕೋವಿಡ್ ಕುರಿತು ಅರಿವು ಮೂಡಿಸಿದರು. ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಅನಿಲ್ ರೆಡ್ಡಿ ಇದ್ದಾರೆ.

ಬಸ್ ಪಾಸ್ ಅವಧಿ ವಿಸ್ತರಣೆ

ಬೆಂಗಳೂರು: ಏಪ್ರಿಲ್ ತಿಂಗಳಿನಲ್ಲಿ ಮಾಡಿಸಿದ್ದ ಮಾಸಿಕ ಪಾಸ್‌ಗಳ ಅವಧಿಯನ್ನು ಮೇ 16ರವರೆಗೆ ವಿಸ್ತರಿಸಿ ಬಿಎಂಟಿಸಿ ಆದೇಶ ಹೊರಡಿಸಿದೆ.

ಮುಷ್ಕರದ ಕಾರಣ ಬಸ್ ಸಂಚಾರ ಇಲ್ಲದೆ ಪಾಸ್ ಪಡೆದಿದ್ದವರಿಗೆ ಅನಾನುಕೂಲ ಆಗಿದ್ದು, ಅದನ್ನು ಸರಿಪಡಿಸಲು ಈ ಕ್ರಮ ಕೈಗೊಳ್ಳಲಾಗಿದೆ. ಅದೇ ಪಾಸ್‌ಗಳನ್ನು ತೋರಿಸಿ ಪ್ರಯಾಣಿಸಬಹುದು ಎಂದು ಬಿಎಂಟಿಸಿ ತಿಳಿಸಿದೆ.

ಮಹಾರಾಷ್ಟ್ರದಲ್ಲಿ ಅಂತರ್ ನಗರ, ಜಿಲ್ಲಾ ಪ್ರಯಾಣಕ್ಕೆ ನಿರ್ಬಂಧ

ಉದ್ಧವ್ ಠಾಕ್ರೆ

ಮುಂಬೈ: ಹೆಚ್ಚುತ್ತಿರುವ ಕೋವಿಡ್–19 ಪ್ರಕರಣಗಳನ್ನು ನಿಯಂತ್ರಿಸುವ ಸಲುವಾಗಿ ಮಹಾರಾಷ್ಟ್ರ ಸರ್ಕಾರವು ಅಂತರ್ ನಗರ ಮತ್ತು ಜಿಲ್ಲಾ ಪ್ರಯಾಣಕ್ಕೆ ನಿಷೇಧ ಹೇರಿ ಹೊಸ ಮಾರ್ಗಸೂಚಿ ಪ್ರಕಟಿಸಿದೆ.

‘ಬ್ರೇಕ್ ದಿ ಚೈನ್’ ಕಾರ್ಯಕ್ರಮದಡಿ ಹೊಸ ನಿರ್ಬಂಧಗಳು ಗುರುವಾರ ರಾತ್ರಿ 8ರಿಂದ ಜಾರಿಗೆ ಬರಲಿದ್ದು, ಮೇ 1ರ ಬೆಳಿಗ್ಗೆ 7ಗಂಟೆಯವರಿಗೆ ಜಾರಿಯಲ್ಲಿರುತ್ತದೆ ಎಂದು ಸರ್ಕಾರವು ತಿಳಿಸಿದೆ.

ಅಂತರ್ ನಗರ ಮತ್ತು ಜಿಲ್ಲಾ ಪ್ರಯಾಣದ ನಿಷೇಧಕ್ಕೆ ಸಂಬಂಧಿಸಿದಂತೆ ವೈದ್ಯಕೀಯ ತುರ್ತುಸ್ಥಿತಿ, ಅಗತ್ಯ ಸೇವೆಗಳು ಮತ್ತು ಅಂತ್ಯಕ್ರಿಯೆ ಮತ್ತು ವೈದ್ಯಕೀಯ ಹಾಜರಾತಿಗೆ ಮಾತ್ರ ವಿನಾಯಿತಿ ನೀಡಲಾಗಿದೆ.

ವಸಂತ ಅಸ್ನೋಟಿಕರ್ ಹತ್ಯೆ: ಅಪರಾಧಿಗೆ ಜೀವಾವಧಿ ಶಿಕ್ಷೆ

ಶಿರಸಿ: ಕಾರವಾರ- ಜೋಯಿಡಾ ಶಾಸಕರಾಗಿದ್ದ ವಸಂತ ಅಸ್ನೋಟಿಕರ್ ಅವರನ್ನು ಗುಂಡಿಟ್ಟು ಹತ್ಯೆ ಮಾಡಿದ್ದ ಮುಂಬೈ ಮೂಲದ ಶಾರ್ಪ್ ಶೂಟರ್ ಸಂಜಯ ಮೋಹಿತೆಗೆ ಜೀವಾವಧಿ ಶಿಕ್ಷೆ ಹಾಗೂ ₹68 ಸಾವಿರ ದಂಡ ವಿಧಿಸಿ ಇಲ್ಲಿನ 1ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಮಂಗಳವಾರ ತೀರ್ಪು ಪ್ರಕಟಿಸಿದೆ.

2000ರ ಫೆ.19 ರಂದು ಕಾರವಾರ ನಗರದ ದೈವಜ್ಞ ಭವನದ ಎದುರು ಅವರ ಹತ್ಯೆ ನಡೆದಿತ್ತು. ಇನ್ನಿತರ ಆರೋಪಿಗಳಾಗಿದ್ದ ದಿಲೀಪ ನಾಯ್ಕ 2004ರಲ್ಲಿ ಹತ್ಯೆ ಆಗಿದ್ದರು. ಉಳಿದ ಆರೋಪಿಗಳಾದ ಬಾಬು, ಅಂತೋನಿಯನ್ನು ಮುಂಬೈ ಪೊಲೀಸರು ಎನ್‌ಕೌಂಟರ್ ಮಾಡಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ಅಪರಾಧ ತನಿಖಾ ವಿಭಾಗ (ಸಿಐಡಿ) ದೋಷಾರೋಪಣ ಪಟ್ಟಿ ಸಲ್ಲಿಸಿತ್ತು.

ನ್ಯಾಯಾಧೀಶ ಶಾಂತವೀರ ಶಿವಪ್ಪ ಅಪರಾಧಿಗೆ ಶಿಕ್ಷೆ ಪ್ರಮಾಣ ಪ್ರಕಟಿಸಿದರು. ಸರ್ಕಾರಿ ಅಭಿಯೋಜಕಿ ಸುನಂದಾ ಮಡಿವಾಳರ ವಾದ ಮಂಡಿಸಿದ್ದರು.

ನಿಧನ ವಾರ್ತೆ

ಉರ್ದು ಕವಿ ಸೈಯದ್ ಇಸಾರ್


ಸೈಯದ್ ಅಹ್ಮದ್ ಇಸಾರ್

ಬೆಂಗಳೂರು: ಉರ್ದು ಕವಿ, ನಿವೃತ್ತ ಐಎಫ್‌ಎಸ್ ಅಧಿಕಾರಿ ಸೈಯದ್ ಅಹ್ಮದ್ ಇಸಾರ್ (98) ಅವರು ಹೃದಯಾಘಾತದಿಂದ ನಗರದಲ್ಲಿ ಬುಧವಾರ ನಿಧನರಾದರು.

ನಗರದ ಮುನಿರೆಡ್ಡಿಪಾಳ್ಯದಲ್ಲಿ 1922ರಲ್ಲಿ ಅವರು ಜನಿಸಿದ್ದರು. ಶಾಲಾ ಹಂತದಲ್ಲಿಯೇ ಅವರು ಪರ್ಷಿಯನ್ ಭಾಷೆ ಅಧ್ಯಯನ ಮಾಡಿದ್ದರು. ಅಮೆರಿಕದ ವಾಷಿಂಗ್ಟನ್ ವಿಶ್ವವಿದ್ಯಾಲಯದ ಉನ್ನತ ಶಿಕ್ಷಣ ಪೂರೈಸಿದ್ದ ಅವರು, 1956ರ ನಂತರ ಅರಣ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸಿದರು.

‘ಇಸಾರ್’ ಕಾವ್ಯನಾಮದ ಮೂಲಕವೇ ಅವರು ಪ್ರಸಿದ್ಧರಾಗಿದ್ದರು. ಪರ್ಷಿಯನ್ ಕವಿಗಳಾದ ಮೌಲಾನಾ ಜಲಾಲುದ್ದೀನ್ ಮಹಮ್ಮದ್ ರೂಮಿ, ಡಾ. ಅಲ್ಲಮಾ ಇಕ್ಬಾಲ್, ಉಮರ್ ಖಯ್ಯಾಮ್, ಮೌಲಾನಾ ಸಾದ್ ಅವರ ಕವಿತೆಗಳನ್ನು ಉರ್ದುಗೆ ಭಾಷಾಂತರಿಸಿದ್ದರು. ಅಲ್ಲದೆ, ಅಸ್ರಾರ್–ಎ–ಖುದಿ, ರೂಬೂರ್ಖ್–ಎ–ಬೇಖುದಿ, ಜಾವೇದ್ ನಾಮ, ಝುಬೂರೇ ಅಜ್ಮ್, ಅರ್ಮಘನ್–ಎ’ ಹಿಜಾಝ್ ಎಂಬ ಕೃತಿಗಳನ್ನು ರಚಿಸಿದ್ದರು. ‘ತರಾನ ಒ ತರಂಗ್’ ಅವರು ರಚಿಸಿದ ಕವನ ಸಂಕಲನ.

ಇದಾರಾ ಅದಬ್ ಎ ಇಸ್ಲಾಮಿ ಹಫೀಜ್ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ರಾಜ್ಯ ಉರ್ದು ಅಕಾಡೆಮಿ, ಉತ್ತರಪ್ರದೇಶ ಹಾಗೂ ಮಹಾರಾಷ್ಟ್ರ ಉರ್ದು ಅಕಾಡೆಮಿ ಪ್ರಶಸ್ತಿಗೆ ಅವರು ಭಾಜನರಾಗಿದ್ದರು.

ನಗರದ ಖುದ್ದೂಸ್ ಸಾಹೇಬ್ ಸ್ಮಶಾನದಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ನಿಧನ ವಾರ್ತೆ

ಎಸ್.ಎಂ.ರವಿ

ಎಸ್.ಎಂ.ರವಿ

ಬೆಂಗಳೂರು: ಮೈಸೂರು ಬ್ಯಾಂಕ್ ಕಾಲೊನಿಯ ಪತ್ರಿಕಾ ವಿತರಕ ಎಸ್.ಎಂ.ರವಿ (37) ಅನಾರೋಗ್ಯ ಸಮಸ್ಯೆಯಿಂದ ನಗರದ ಖಾಸಗಿ ಆಸ್ಪತ್ರೆಯಲ್ಲಿ ಬುಧವಾರ ನಿಧನರಾದರು.

ಶ್ರೀನಗರದಲ್ಲಿ ವಾಸವಿದ್ದ ಅವರಿಗೆ ಪತ್ನಿ ಹಾಗೂ ಇಬ್ಬರು ಪುತ್ರರು ಇದ್ದಾರೆ. ಬನಶಂಕರಿ ಚಿತಾಗಾರದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಚ್.ಆರ್. ಭಾಸ್ಕರ್

ಎಚ್.ಆರ್. ಭಾಸ್ಕರ್

ಹಿರಿಯೂರು: ಮಾಜಿ ಸಚಿವ ಕೆ.ಎಚ್. ರಂಗನಾಥ್ ಅವರ ಹಿರಿಯ ಪುತ್ರ ಹಾಗೂ ಕೆಪಿಸಿಸಿ ಸದಸ್ಯ ಎಚ್.ಆರ್.ಭಾಸ್ಕರ್ (59) ಅವರು ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಕೋವಿಡ್‌ನಿಂದಾಗಿ ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಬುಧವಾರ ಸಂಜೆ ಬೆಂಗಳೂರಿನಲ್ಲಿ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆಮ್ಲಜನಕ ವ್ಯವಸ್ಥೆ ಇಲ್ಲದ ಆಸ್ಪತ್ರೆಗಳಲ್ಲಿ ರೋಗಿಗಳ ದಾಖಲಾತಿ ಬೇಡ: ಆರೋಗ್ಯ ಸಚಿವ ಡಾ. ಸುಧಾಕರ್

ಸಣ್ಣ ಆಸ್ಪತ್ರೆಗಳಲ್ಲಿ ಕೋವಿಡ್ ಚಿಕಿತ್ಸೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಮ್ಲಜನಕದ ಪೂರೈಕೆ ವ್ಯವಸ್ಥೆ ಇಲ್ಲದ ಸಣ್ಣ ಆಸ್ಪತ್ರೆಗಳಲ್ಲಿ ಕೋವಿಡ್ ರೋಗಿಗಳಿಗೆ ಚಿಕಿತ್ಸೆ ನೀಡುವುದನ್ನು ನಿಷೇಧಿಸಲಾಗುವುದು ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದರು.

ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಅವರ ಕಚೇರಿಯಲ್ಲಿ ಬುಧವಾರ ಕೋವಿಡ್ ನಿಯಂತ್ರಣ ಮತ್ತು ಚಿಕಿತ್ಸೆ ಕುರಿತು ಚರ್ಚಿಸಿದ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, '20ರಿಂದ 30 ಹಾಸಿಗೆಗಳ ಸಾಮರ್ಥ್ಯದ ಸಣ್ಣ ಆಸ್ಪತ್ರೆಗಳಲ್ಲೂ ಕೋವಿಡ್ ರೋಗಿಗಳನ್ನು ದಾಖಲಿಸಲಾಗುತ್ತಿದೆ. ಅಲ್ಲಿ ಆಮ್ಲಜನಕದ ಕೊರತೆಯಿಂದ ಸಾವಿನ ಸಂಖ್ಯೆ ಹೆಚ್ಚುವ ಅಪಾಯವಿದೆ' ಎಂದರು.

ಆಮ್ಲಜನಕ ಪೂರೈಕೆ ವ್ಯವಸ್ಥೆ ಹೊಂದಿರುವ ಆಸ್ಪತ್ರೆಗಳು ಮಾತ್ರ ಕೋವಿಡ್ ರೋಗಿಗಳನ್ನು ದಾಖಲು ಮಾಡಿಕೊಳ್ಳಬೇಕು. ಆಮ್ಲಜನಕದ ಪೂರೈಕೆ ಇಲ್ಲದ ಆಸ್ಪತ್ರೆಗಳಲ್ಲಿ ಕೋವಿಡ್ ಹೊರತಾದ ರೋಗಿಗಳಿಗೆ ಚಿಕಿತ್ಸೆ ನೀಡಬೇಕು. ಈ ಸಂಬಂಧ ಸ್ಪಷ್ಟವಾಗಿ ಆದೇಶ ಹೊರಡಿಸಲಾಗುವುದು ಎಂದು ಹೇಳಿದರು.

ಆಮ್ಲಜನಕದ ಕೊರತೆ ಇಲ್ಲ: ಆಮ್ಲಜನಕದ ಕೊರತೆ ನೀಗಲು ಹಲವು ದಿನಗಳಿಂದ ಪ್ರಯತ್ನ ಆರಂಭಿಸಲಾಗಿತ್ತು. ಸಂಸದ ತೇಜಸ್ವಿ ಸೂರ್ಯ ಮತ್ತು ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಅವರೊಂದಿಗೆ ಕೈಗಾರಿಕೆಗಳ ಪ್ರತಿನಿಧಿಗಳ ಜತೆ ಸಭೆ ನಡೆಸಲಾಗಿತ್ತು. ಅದು ಫಲಪ್ರದವಾಗಿದ್ದು, ಸದ್ಯದ ಸ್ಥಿತಿಯಲ್ಲಿ ಆಸ್ಪತ್ರೆಗಳಿಗೆ ಅಗತ್ಯವಿರುವಷ್ಟು ಆಮ್ಲಜನಕ ಲಭಿಸುತ್ತಿದೆ ಎಂದರು.

ಮೇ ಅಂತ್ಯದ ವೇಳೆಗೆ ರಾಜ್ಯಕ್ಕೆ 1,500 ಟನ್‌ನಷ್ಟು ಆಮ್ಲಜನಕ ಬೇಕಾಗುತ್ತದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಈ ಕಾರಣದಿಂದ ಆಮ್ಲಜನಕದ ಹಂಚಿಕೆ ಹೆಚ್ಚಿಸುವಂತೆ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಆರೋಗ್ಯ ಸಚಿವರಿಗೆ ಪತ್ರ ಬರೆಯಲಾಗುವುದು ಎಂದರು.

ರೆಮ್‌ಡೆಸಿವಿರ್ ಔಷಧಿ ಕೊರತೆ ಪರಿಹರಿಸುವುದಕ್ಕೂ ಪ್ರಯತ್ನ ಆರಂಭವಾಗಿದೆ. ಮಂಗಳವಾರ ಒಂದೇ ದಿನ 23,000 ಡೋಸ್‌ನಷ್ಟು ರೆಮ್‌ಡೆಸಿವಿರ್ ಔಷಧಿ ಪೂರೈಕೆಯಾಗಿದೆ. ಈ ಪೈಕಿ 10,000 ಡೋಸ್‌ಗಳನ್ನು ಸರ್ಕಾರಿ ಆಸ್ಪತ್ರೆಗೆ ಮತ್ತು 13,000 ಡೋಸ್ ಔಷಧಿಯನ್ನು ಖಾಸಗಿ ಆಸ್ಪತ್ರೆಗಳಿಗೆ ಒದಗಿಸಲಾಗಿದೆ ಎಂದು ವಿವರಿಸಿದರು.

ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಇನ್ನೂ ತೀವ್ರ ನಿಗಾ ಘಟಕದ (ಐಸಿಯು) 2,000 ಹಾಸಿಗೆಗಳ ಅಗತ್ಯವಿದೆ ಎಂದು ಅಂದಾಜಿಸಲಾಗಿದೆ. ಈ ಸಂಖ್ಯೆ ಹೆಚ್ಚಿಸಲು ಈಗಾಗಲೇ ಪ್ರಯತ್ನ ಆರಂಭಿಸಲಾಗಿದೆ ಎಂದು ಸುಧಾಕರ್ ಹೇಳಿದರು.

ಮುಖ್ಯಾಂಶಗಳು

- ಆಮ್ಲಜನಕದ ಕೊರತೆಯಿಂದ ಸಾವಿನ ಸಂಖ್ಯೆ ಹೆಚ್ಚುವ ಅಪಾಯ
- ಆಮ್ಲಜನಕದ ಹಂಚಿಕೆ ಹೆಚ್ಚಿಸುವಂತೆ ಪ್ರಧಾನಿ ಅವರಿಗೆ ಪತ್ರ
- ಮಂಗಳವಾರ 23,000 ಡೋಸ್ ರೆಮ್‌ಡೆಸಿವಿರ್ ಔಷಧಿ ಪೂರೈಕೆ

ಸೋಂಕಿತರ ಜೀವ ರಕ್ಷಣೆಗೆ ಕ್ರಮ ಏನು: ಕುಮಾರಸ್ವಾಮಿ ಪ್ರಶ್ನೆ



ಬೆಂಗಳೂರು: 'ಕೋವಿಡ್ ತಡೆಯುವ ನಿಟ್ಟಿನಲ್ಲಿ ಮಾರ್ಗಸೂಚಿಯನ್ನು ಸರ್ಕಾರ ಹೊರಡಿಸಿದೆ. ಆದರೆ, ಈಗಾಗಲೇ ಸೋಂಕಿಗೆ ತುತ್ತಾಗಿರುವ ಜನರ ಜೀವ ಉಳಿಸಲು ಏನು ಕ್ರಮ ಕೈಗೊಂಡಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಈ ಸಂಬಂಧ ಸರಣಿ ಟ್ವೀಟ್‌ಗಳನ್ನು ಮಾಡಿರುವ ಅವರು, 'ಕೋವಿಡ್ ನಿಯಂತ್ರಿಸುವ ನಿಟ್ಟಿನಲ್ಲಿ ಸರಣಿ ಸಭೆಗಳನ್ನು ಸರ್ಕಾರ ನಡೆಸಿದೆ. ವಿರೋಧ ಪಕ್ಷದ ನಾಯಕರ ಸಲಹೆ ಪಡೆದಿದೆ. ಆದರೆ, ಆಸ್ಪತ್ರೆಯಲ್ಲಿ ಇರುವವರ ರಕ್ಷಣೆಗೆ ಏನು ಮಾಡಲಾಗಿದೆ ಎಂಬುದನ್ನು ಸಭೆಯ ಬಳಿಕ ಸರ್ಕಾರ ಹೇಳಿಲ್ಲ. ಸೋಂಕಿತರ ಪರಿಸ್ಥಿತಿಯನ್ನು ಸರ್ಕಾರ ಅರಿತಿಲ್ಲ ಏಕೆ' ಎಂದು ಕೇಳಿದ್ದಾರೆ.

'ಕೋವಿಡ್ ಎರಡನೇ ಅಲೆ ಬರುವ ಬಗ್ಗೆ ತಜ್ಞರು, ಪ್ರತಿಪಕ್ಷಗಳ ನಾಯಕರು ಹೇಳುತ್ತಲೇ ಬಂದಿದ್ದರು. ಔಷಧ, ಪರಿಕರಗಳ ಅಭಾವ ಇದೆ. ಆಮ್ಲಜನಕ, ರೆಮ್‌ಡಿಸಿವಿರ್ ಸಿಗುತ್ತಿಲ್ಲ. ಚಿಕಿತ್ಸೆಯೇ ದುರ್ಬಲವಾಗಿದೆ. ಈ ಸಂಬಂಧ ಹಲವು ಬಾರಿ ನಾನು ಎಚ್ಚರಿಕೆ ನೀಡಿದ್ದೇನೆ. ಆದರೂ, ಸರ್ಕಾರ ಎಚ್ಚೆತ್ತುಕೊಂಡಿಲ್ಲ. ಚಿಕಿತ್ಸೆ ದೊರೆಯುವ ವಿಶ್ವಾಸ ಜನರಲ್ಲಿ ಕುಗ್ಗಿ ಹೋಗಿದೆ' ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

'ಆರೋಗ್ಯ ಸೇವೆ ಒದಗಿಸಲಾಗದ ಸರ್ಕಾರದ ದೈನೇಸಿ ಸ್ಥಿತಿ ಜನರಲ್ಲಿ ಆತಂಕ ಸೃಷ್ಟಿಸಿದೆ. ಜನರ ವಿಶ್ವಾಸ ಮೂಡಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಏನೇನು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂಬುದನ್ನೂ ಜನರಿಗೆ ತಿಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

ಕಡಿಮೆ ದರದಲ್ಲಿ ಲಸಿಕೆ: ನೆರವಿನ ಹಸ್ತವಲ್ಲವೇ?

ಬೆಂಗಳೂರು: 'ದೇಶದಲ್ಲಿ ಕಡಿಮೆ ದರದಲ್ಲಿ ಲಸಿಕೆ ಪೂರೈಕೆ ಮತ್ತು ಕೋವಿಡ್ ಲ್ಯಾಬ್‌ಗಳ ವ್ಯವಸ್ಥೆ ಮಾಡಿರುವುದು ನೆರವಿನ ಹಸ್ತವಲ್ಲವೇ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಬಿಜೆಪಿ ಪ್ರಶ್ನಿಸಿದೆ.

ನಮ್ಮ ಪ್ರಶ್ನೆಗಳಿಗೆ ಉತ್ತರಿಸುವ ಧೈರ್ಯ ತೋರುವಿರಾ ಎಂದೂ ಬಿಜೆಪಿ ಟ್ವೀಟ್‌ನಲ್ಲಿ ಕೆಣಕಿದೆ. ಕೋವಿಡ್ ವೇಳೆ ಆರ್ಥಿಕ ಸ್ಥಿತಿ ಪಾತಾಳ ಸೇರದಂತೆ ನೋಡಿಕೊಂಡಿದ್ದು ನೆರವಿನ ಹಸ್ತವಲ್ಲವೇ? ದೇಶಾದ್ಯಂತ ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಸುಧಾರಣೆ ಆರಂಭಿಸಿದ್ದು ನೆರವಿನ ಹಸ್ತವಲ್ಲವೇ? ದೇಶದ ಜನರಲ್ಲಿ ಆತ್ಮವಿಶ್ವಾಸ ಮೂಡಿಸಿದ್ದು ನೆರವಿನ ಹಸ್ತವಲ್ಲವೇ? ಎಂದು ಪ್ರಶ್ನಿಸಿರುವ ಬಿಜೆಪಿ, ಲಸಿಕೆಯ ಬಗ್ಗೆ ಸುಳ್ಳು ಸುದ್ದಿಗಳನ್ನು ಹಬ್ಬಿಸಿದ್ದೇ ಕಾಂಗ್ರೆಸ್ ನೀಡಿದ ನೆರವಿನ ಹಸ್ತ. ತಪ್ಪು ದಾರಿಗೆಳೆದದ್ದೇ ಕಾಂಗ್ರೆಸ್ ಸಾಧನೆ ಎಂದು ಕುಟುಕಿದೆ.

ಸುದ್ದಿ 2 ನಿಮಿಷ

ರೈತರ ಆತ್ಮಹತ್ಯೆ: ಕುಟುಂಬಕ್ಕೆ ನೆರವಾಗಲು ಸೂಚನೆ

ಬೆಂಗಳೂರು: ಖಾಸಗಿ ಲೇವಾದೇವಿಗಾರರಿಂದ ಸಾಲ ಪಡೆದು ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬಗಳಿಗೆ ನೆರವಾಗಲು ಸರ್ಕಾರ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್ ಸಲ್ಲಿಸಿದ್ದ ಪ್ರತಿಕ್ರಿಯೆ ಪರಿಶೀಲಿಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಎಂಟು ವಾರಗಳಲ್ಲಿ ಅನುಸರಣಾ ವರದಿ ಸಲ್ಲಿಸಬೇಕು' ಎಂದು ತಿಳಿಸಿತು.

ನ್ಯಾಯಾಲಯದ ಈ ಹಿಂದಿನ ಆದೇಶವನ್ನು ಮುಖ್ಯ ಕಾರ್ಯದರ್ಶಿ ಪಾಲಿಸಿಲ್ಲ ಎಂದ ಪೀಠ, ನ್ಯಾಯಾಲಯದ ಈ ಆದೇಶವನ್ನು ನೀತಿ, ನಿರ್ಧಾರ ಕೈಗೊಳ್ಳುವ ಸೂಕ್ತ ಪ್ರಾಧಿಕಾರದ ಮುಂದೆ ಮಂಡಿಸುವಂತೆ ಸೂಚನೆ ನೀಡಿತು. ವಿಚಾರಣೆಯನ್ನು ಜೂ.11ಕ್ಕೆ ನಿಗದಿ ಮಾಡಿತು.

ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದ ಅಖಂಡ ಕರ್ನಾಟಕ ರೈತ ಸಂಘ, 'ಕಳೆದ ಎರಡು ದಶಕಗಳ ಅವಧಿಯಲ್ಲಿ ರಾಜ್ಯದಲ್ಲಿ 20 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ವಿವರಿಸಿತ್ತು.

ವೇಳಾಪಟ್ಟಿಯಂತೆ ವಿಟಿಯು ಪರೀಕ್ಷೆ: ಕುಲಸಚಿವ

ಬೆಳಗಾವಿ: 'ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ವಿಟಿಯು)ದಿಂದ ಸ್ನಾತಕ ಪದವಿ ಕೋರ್ಸ್‌ಗಳ (ಬಿ.ಇ, ಬಿ.ಆರ್ಕ್., ಬಿ.ಪ್ಲಾನ್) ಮೊದಲ ಸೆಮಿಸ್ಟರ್ ಪರೀಕ್ಷೆಗಳನ್ನು ಶೈಕ್ಷಣಿಕ ದೃಷ್ಟಿಯಿಂದಾಗಿ ಪೂರ್ಣಗೊಳಿಸಲೇಬೇಕಿದೆ. ಈಗಾಗಲೇ ಪ್ರಕಟಿಸಿರುವ ಅಧಿಸೂಚನೆಯಲ್ಲಿನ ವೇಳಾಪಟ್ಟಿಯಂತೆ ಸುರಕ್ಷಾ ಕ್ರಮಗಳನ್ನು ಅನುಸರಿಸಿ ನಡೆಸಲಾಗುವುದು' ಎಂದು ಕುಲಸಚಿವ ಪ್ರೊ.ಎ.ಎಸ್. ದೇಶಪಾಂಡೆ ತಿಳಿಸಿದ್ದಾರೆ.

'ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದಾಗಿ ಅನಿವಾರ್ಯವಾಗಿ ಯಾರಾದರೂ ತಪ್ಪಿಸಿಕೊಂಡರೆ, ಅಂಥವರನ್ನು 2ನೇ ಸೆಮಿಸ್ಟರ್‌ಗೆ ಕಳುಹಿಸಲಾಗುವುದು. ಅವರು ಬಾಕಿ ಉಳಿಸಿಕೊಂಡಿರುವ ವಿಷಯದ ಪರೀಕ್ಷೆಯನ್ನು ಮುಂಬರುವ ಸೆಮಿಸ್ಟರ್ ಪರೀಕ್ಷೆ ಜೊತೆ ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಮೊದಲ ಪ್ರಯತ್ನವೆಂದು ಪರಿಗಣಿಸಲಾಗುವುದು. ಈ ಅವಕಾಶವನ್ನು ಬಿ.ಇ, ಬಿ.ಆರ್ಕ್., ಬಿ.ಪ್ಲಾನ್ ಕೋರ್ಸ್‌ನ ರೆಗ್ಯುಲರ್ ವಿದ್ಯಾರ್ಥಿಗಳಿಗೆ ಮಾತ್ರವೇ ಕಲ್ಪಿಸಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

'ಈಗಾಗಲೇ 2 ವಿಷಯಗಳ ಪರೀಕ್ಷೆಗಳು ಮುಗಿದಿದ್ದು, ಶೇಕಡ 98ರಷ್ಟು ವಿದ್ಯಾರ್ಥಿಗಳು ಹಾಜರಾಗಿದ್ದಾರೆ. ಇನ್ನು 4 ವಿಷಯಗಳು ಉಳಿದಿವೆ. ಪರೀಕ್ಷೆ ಮುಗಿಸುವುದರಲ್ಲಿ ವಿಳಂಬವಾದರೆ ಇಡೀ ಶೈಕ್ಷಣಿಕ ವರ್ಷದ ಚಟುವಟಿಕೆಗಳ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಬಹುದು ಮತ್ತು ಈಗಾಗಲೇ 4 ತಿಂಗಳು ವಿಳಂಬ ಆಗಿರುವುದರಿಂದ ಮತ್ತೆ ಮುಂದೂಡಿದರೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ತೊಂದರೆ ಆಗುತ್ತದೆ. ಹೀಗಾಗಿ, ಪರೀಕ್ಷೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಉತ್ತಮವಾಗಿ ಅಭ್ಯಾಸ ಮಾಡಿ ಎದುರಿಸಬೇಕು. ಕೋವಿಡ್ ಮಾರ್ಗಸೂಚಿಗಳನ್ನು ಅನುಸರಿಸಬೇಕು' ಎಂದು ಸಲಹೆ ನೀಡಿದ್ದಾರೆ.

'ಕೋವಿಡ್ ಲಕ್ಷಣವಿರುವ ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಪ್ರತ್ಯೇಕ ವ್ಯವಸ್ಥೆ ಮಾಡುವಂತೆ ಎಲ್ಲ ಕಾಲೇಜುಗಳಿಗೆ ಸೂಚನೆ ನೀಡಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೆಂಟಿಲೇಟರ್ ಸಿಗದೇ ಕಾರಿನಲ್ಲೇ ಪ್ರಾಣಬಿಟ್ಟ ವ್ಯಕ್ತಿ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ವ್ಯಕ್ತಿ, ಜೀವ ರಕ್ಷಕ ವೆಂಟಿಲೇಟರ್ ಇರುವ ಬೆಡ್ ಸಿಗದೇ ಇರುವುದಕ್ಕೆ ಬುಧವಾರ ನಗರದ ಖಾಸಗಿ ಆಸ್ಪತ್ರೆಯ ಎದುರಿನಲ್ಲೇ ಪ್ರಾಣ ಬಿಟ್ಟಿದ್ದಾರೆ.

ಕಾಳಗಿ ಪಟ್ಟಣದ ಶಂಕರ (50) ಮೃತಪಟ್ಟವರು.

ನಗರದ ಸರ್ಕಾರಿ, ಖಾಸಗಿ ಆಸ್ಪತ್ರೆಗಳಿಗೆ ಸುಮಾರು ನಾಲ್ಕು ಗಂಟೆ ಸುತ್ತಾಡಿದರೂ ಬೆಡ್‌ಗಳು ಖಾಲಿ ಇರಲಿಲ್ಲ ಎನ್ನಲಾಗಿದೆ. ಮಧ್ಯಾಹ್ನದ ವೇಳೆಗೆ ನಗರದ ಸತ್ಯ ಆಸ್ಪತ್ರೆಯಲ್ಲಿ ಬೆಡ್ ಖಾಲಿ ಇರುವ ಬಗ್ಗೆ ವಿಚಾರಿಸಿಕೊಂಡು ಬರುವಷ್ಟರಲ್ಲಿ ಕಾರಿನಲ್ಲೇ ಪ್ರಾಣಬಿಟ್ಟರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

'ತೀವ್ರ ಉಸಿರಾಟದ ತೊಂದರೆಯಿಂದ ಬಳಲುತ್ತಿದ್ದ ಶಂಕರ್ ಅವರಿಗೆ ಕೊರೊನಾ ಪರೀಕ್ಷೆ ಮಾಡಿಸಲಾಗಿತ್ತು. ವರದಿ ನೆಗೆಟಿವ್ ಬಂದಿತ್ತು' ಎಂದು ಮೂಲಗಳು ತಿಳಿಸಿವೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಶರಣಬಸಪ್ಪ ಗಣಜಲಖೇಡ, 'ವೆಂಟಿಲೇಟರ್ ಬೆಡ್ ಸಿಗದೇ ಇದ್ದುದಕ್ಕೆ ರೋಗಿ ಸಾವನ್ನಪ್ಪಿರುವ ಬಗ್ಗೆ ಮಾಹಿತಿ ಇಲ್ಲ. ನಗರದ ಜಿಮ್ಸ್ ಆಸ್ಪತ್ರೆಯಲ್ಲಿ 40 ವೆಂಟಿಲೇಟರ್ ಸೇರಿದಂತೆ 400 ಹಾಸಿಗೆಗಳನ್ನು ಕೋವಿಡ್ ರೋಗಿಗಳಿಗಾಗಿ ಮೀಸಲಿಡಲಾಗಿದೆ. ಇಎಸ್‌ಐ ಆಸ್ಪತ್ರೆಯಲ್ಲಿ ಕೋವಿಡ್ ಹಾಗೂ ಕೋವಿಡ್ ಅಲ್ಲದ ರೋಗಿಗಳಿಗೂ ಚಿಕಿತ್ಸೆ ನೀಡಲಾಗುತ್ತಿದೆ. ತಾಲ್ಲೂಕು ಕೇಂದ್ರಗಳಲ್ಲಿಯೂ ಆಕ್ಸಿಜನ್ ಸಿಲಿಂಡರ್ ಹೊಂದಿದ ತಲಾ 10 ಹಾಸಿಗೆಗಳನ್ನು ಸಜ್ಜುಗೊಳಿಸಲಾಗುತ್ತಿದೆ' ಎಂದರು.

ಕರ್ಫ್ಯೂ: ಕೆಲವು ಬಂದ್– ಹಲವು ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ 14 ದಿನಗಳ ಕಾಲ ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಬಂದ್ ಘೋಷಿಸಿದ್ದು, ಈ ಸಂದರ್ಭದಲ್ಲಿ ಹಲವು ಚಟುವಟಿಕೆಗಳನ್ನು ನಿರ್ಬಂಧಿಸಿ ಆದೇಶ ಹೊರಡಿಸಿದೆ.

ರಾತ್ರಿ ಕರ್ಫ್ಯೂ 9 ಗಂಟೆಯಿಂದ ಮಾರನೇ ದಿನ ಬೆಳಿಗ್ಗೆ 6 ಗಂಟೆಯವರೆಗೆ ಇರುತ್ತದೆ. ಈ ಸಂದರ್ಭದಲ್ಲಿ ಎಲ್ಲ ರೀತಿಯ ಚಟುವಟಿಕೆಗಳನ್ನು ನಿರ್ಬಂಧಿಸಲಾಗಿದೆ.

ಆಸ್ಪತ್ರೆಗೆ ಹೋಗುವವರು, ಅಗತ್ಯ ವಸ್ತುಗಳ ಸಾಗಣೆಗೆ ಅವಕಾಶವಿರುತ್ತದೆ. 14 ದಿನಗಳ ಕಾಲ ಬೆಳಿಗ್ಗೆ 6 ರಿಂದ ರಾತ್ರಿ 9 ರವರೆಗೆ ಹಲವು ಚಟುವಟಿಕೆಗಳ ಮೇಲೆ ನಿರ್ಬಂಧ ವಿಧಿಸಲಾಗಿದೆ. ಅವುಗಳ ವಿವರ ಈ ಕೆಳಗಿನಂತಿದೆ.

ಏನೆಲ್ಲ ಇರುವುದಿಲ್ಲ

- ಶಾಲೆಗಳು, ಕಾಲೇಜುಗಳು, ಕೋಚಿಂಗ್ ಕೇಂದ್ರಗಳು. (ಆನ್‌ಲೈನ್, ದೂರಶಿಕ್ಷಣ ಮುಂದುವರೆಸಬಹುದು)
- ಸಿನಿಮಾ ಹಾಲ್‌ಗಳು, ಶಾಪಿಂಗ್ ಮಾಲ್, ಜಿಮ್ನಾಷಿಯಂ, ಯೋಗ ಕೇಂದ್ರಗಳು, ಸ್ಪಾ, ಕ್ರೀಡಾ ಕಾಂಪ್ಲೆಕ್ಸ್‌ಗಳು, ಸ್ಟೇಡಿಯಂ, ಈಜುಕೊಳ, ಮನರಂಜನಾ ಅಮ್ಯೂಸ್‌ಮೆಂಟ್ ಪಾರ್ಕ್, ಬಾರ್, ಕ್ಲಬ್, ಆಡಿಟೋರಿಯಂಗಳು ಮತ್ತಿತರ ಸಮಾವೇಶದ ತಾಣಗಳು
- ಎಲ್ಲ ರೀತಿಯ ಸಮಾವೇಶಗಳು, ಎಲ್ಲಾ ಧಾರ್ಮಿಕ ಸ್ಥಳಗಳು, ಪೂಜಾ, ಪ್ರಾರ್ಥನಾ ಮಂದಿರಗಳಿಗೆ ಭಕ್ತರಿಗೆ ಅವಕಾಶ ಇಲ್ಲ. ಆದರೆ, ಪೂಜಾ ಕೈಂಕರ್ಯ ನಡೆಸಲು ಅರ್ಚಕರಿಗೆ ಅವಕಾಶ ಇದೆ. ಆಯಾ ಧರ್ಮಗಳ ಧಾರ್ಮಿಕ ವಿಧಿ–ವಿಧಾನ ನಡೆಸಲು ಅವಕಾಶ ಇದೆ

ಯಾವುದಕ್ಕೆಲ್ಲಾ ಅವಕಾಶ ಇದೆ

- ನೆರೆಹೊರೆಯ ಕಿರಾಣಿ ಅಂಗಡಿ, ನ್ಯಾಯ ಬೆಲೆ ಅಂಗಡಿ, ಆಹಾರ ಪದಾರ್ಥಗಳು, ಹಣ್ಣು, ತರಕಾರಿ, ಡೇರಿ, ಹಾಲು ಮತ್ತು ಇತರ ಉತ್ಪನ್ನಗಳು, ಮೀನು– ಮಾಂಸ, ಪ್ರಾಣಿಗಳ ಆಹಾರಗಳ (ಫೀಡ್ಸ್) ಮಾರಾಟಕ್ಕೆ ಅವಕಾಶ
- ಅಂತರ ರಾಜ್ಯಗಳಿಗೆ ಬಸ್ ಮತ್ತು ರೈಲುಗಳ ಸೇವೆಗೆ ಅವಕಾಶ ಇದೆ. ಸಾರಿಗೆ ಸಂಸ್ಥೆ ಬಸ್ಸುಗಳು, ಖಾಸಗಿ ಬಸ್ಸುಗಳು, ಟ್ಯಾಕ್ಸಿ, ಆಟೋರಿಕ್ಷಾಗಳ ಓಡಾಟಕ್ಕೆ ಅವಕಾಶ ಇದೆ. ಆಸನಗಳ ಒಟ್ಟು ಸಾಮರ್ಥ್ಯದ ಶೇ 50 ರಷ್ಟು ಮಾತ್ರ ಪ್ರಯಾಣಿಕರನ್ನು ಕರೆದೊಯ್ಯಬೇಕು
- ಲಾಡ್ಜ್ ಮತ್ತು ಹೋಟೆಲ್‌ಗಳಲ್ಲಿ ಉಳಿದುಕೊಂಡ ಅತಿಥಿಗಳಿಗೆ ಆಹಾರ ಪೂರೈಕೆ ಮಾಡಬಹುದು
- ಸಲೂನು, ಬ್ಯೂಟಿ ಪಾರ್ಲರ್‌ಗಳು ಕೋವಿಡ್ ನಿಯಮ ಪಾಲಿಸಿ ಕಾರ್ಯಾಚರಣೆ ನಡೆಸಬಹುದು
- 50 ಜನರ ಮಿತಿಯಲ್ಲಿ ಮದುವೆ ನಡೆಸಬಹುದು
- ಶವ ಸಂಸ್ಕಾರ, ಅಂತಿಮ ದರ್ಶನಕ್ಕೆ 20 ಜನರಿಗೆ ಮಾತ್ರ ಅವಕಾಶ

ವಾರಾಂತ್ಯ ಪೂರ್ಣ ಬಂದ್

- ಶುಕ್ರವಾರ ರಾತ್ರಿ 9 ರಿಂದ ಸೋಮವಾರ ಬೆಳಿಗ್ಗೆ 6 ಗಂಟೆಯವರೆಗೆ ಬಂದ್ ಇರುತ್ತದೆ. ಈ ಸಂದರ್ಭದಲ್ಲಿ ತುರ್ತು ಮತ್ತು ಅಗತ್ಯ ಚಟುವಟಿಕೆಗಳನ್ನು ಬಿಟ್ಟು ಬೇರೆಯದಕ್ಕೆ ಅವಕಾಶ ಇಲ್ಲ. ರೋಗಿಗಳ ಸಾಗಣೆ, ಆರೋಗ್ಯ ಪರೀಕ್ಷೆ, ಲಸಿಕೆ ಹಾಕಿಸಿಕೊಳ್ಳಲು ಹೋಗುವವರಿಗೆ ಮಾತ್ರ ಅವಕಾಶ.
- ಅಂಗಡಿಗಳಲ್ಲಿ ಹಣ್ಣು ತರಕಾರಿ, ಹಾಲು ಮತ್ತಿತರ ಅಗತ್ಯ ವಸ್ತುಗಳನ್ನು ಬೆಳಿಗ್ಗೆ 6 ರಿಂದ 10 ಗಂಟೆಯ ಒಳಗೆ ಖರೀದಿಸಲು ಅನುಮತಿ.
- ಕೈಗಾರಿಕೆಗಳಲ್ಲಿ ಕಾರ್ಯ ನಿರ್ವಹಿಸಲು ಹೋಗುವವರಿಗೆ, ಟೆಲಿಕಾಂ ಸಿಬ್ಬಂದಿ ಮತ್ತು ಈ ಕಾರ್ಯಕ್ಕಾಗಿ ಒಯ್ಯುವ ವಾಹನಗಳು, ಇಂಟರ್‌ನೆಟ್ ಸೇವೆಗೆ ಹೋಗುವವರಿಗೆ ಮಾತ್ರ ಅವಕಾಶವಿದೆ.
- ರೆಸ್ಟೋರೆಂಟ್ ಮೂಲಕ ಪಾರ್ಸೆಲ್ ಒಯ್ಯಲು ಅವಕಾಶ
- ಮದುವೆಗೆ ಅವಕಾಶ ಇದ್ದು, 50 ಜನ ಸೇರಬಹುದು.

ಮೇ 13ರಂದು ಬೆಳಿಗ್ಗೆ 7.35ಕ್ಕೆ ಸನ್ಯಾಸ ಸ್ವೀಕಾರ

ಮೇ 14ರಂದು ಮಧ್ಯಾಹ್ನ 12.35 ಹಾಗೂ 12.50ರ ನಡುವಿನ ಅಭಿಜಿನ್ ಮುಹೂರ್ತದಲ್ಲಿ ಪಟ್ಟಾಭಿಷೇಕ ನಡೆಯಲಿದೆ– ಸೋದೆ ಮಠದ ಸ್ವಾಮೀಜಿ

ಅನಿರುದ್ಧ ಸರಳತ್ತಾಯ ಶೀರೂರು ಮಠದ ಉತ್ತರಾಧಿಕಾರಿ

ಉಡುಪಿ: 'ಅಷ್ಟಮಠಗಳಲ್ಲಿ ಒಂದಾಗಿರುವ ಶೀರೂರು ಮಠಕ್ಕೆ ನೂತನ ಉತ್ತರಾಧಿಕಾರಿಯನ್ನಾಗಿ ಅನಿರುದ್ಧ ಸರಳತ್ತಾಯ ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ಸೋದೆ ಮಠದ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಘೋಷಿಸಿದರು.

ಬುಧವಾರ ಹಿರಿಯಡ್ಕ ಸಮೀಪದ ಶೀರೂರು ಮೂಲಮಠದಲ್ಲಿ ಮಾತನಾಡಿದ ಶ್ರೀಗಳು, 'ಧರ್ಮಸ್ಥಳದ ನಿಡ್ಲೆಯ ಎಂ.ಉದಯಕುಮಾರ್ ಸರಳತ್ತಾಯ ಹಾಗೂ ಶ್ರೀವಿದ್ಯಾ ದಂಪತಿಯ 16 ವರ್ಷದ ಪುತ್ರ ಅನಿರುದ್ಧ ಸರಳತ್ತಾಯ ಅವರು ಶೀರೂರು ಮಠದ 31ನೇ ಯತಿಗಳಾಗಲಿದ್ದಾರೆ' ಎಂದರು.



'2 ವರ್ಷಗಳಿಂದ ಶೀರೂರು ಮಠಕ್ಕೆ ಯೋಗ್ಯ ಉತ್ತರಾಧಿಕಾರಿಯ ಆಯ್ಕೆ ಕಸರತ್ತು ನಡೆದಿತ್ತು. ಅನಿರುದ್ಧ ಸರಳತ್ತಾಯರ ಜಾತಕದಲ್ಲಿ ಸನ್ಯಾಸಿ ಹಾಗೂ ಪೀಠಾಧಿಪತಿಯಾಗುವ ಯೋಗ ಇರುವುದರಿಂದ ಅವರನ್ನು ಆಯ್ಕೆ ಮಾಡಲಾಯಿತು. ಎಸ್ಸೆಸ್ಸೆಲ್ಸಿಯವರೆಗೂ ಲೌಕಿಕ ಶಿಕ್ಷಣ ಪಡೆದಿರುವ ನಿಯೋಜಿತ ಯತಿ, ಶಿರಸಿಯ ಸೋಂದಾ ಕ್ಷೇತ್ರದಲ್ಲಿ ವೇದಾಧ್ಯಯನದಲ್ಲಿ ತೊಡಗಲಿದ್ದಾರೆ' ಎಂದರು.

2018 ರ ಜುಲೈ 19 ರಂದು ಶೀರೂರು ಮಠದ ಲಕ್ಷ್ಮೀವರ ತೀರ್ಥ ಸ್ವಾಮೀಜಿ ವಿಧಿವಶರಾಗಿದ್ದರು. 2 ವರ್ಷ 9 ತಿಂಗಳು ಪೀಠ ಖಾಲಿ ಉಳಿದಿತ್ತು. ಶೀರೂರು ಮಠದ ಆಡಳಿತದಲ್ಲಿ ಪಾರದರ್ಶಕತೆ ಇಲ್ಲದಿರುವ ವಿಚಾರ ನ್ಯಾಯಾಲಯದಲ್ಲಿದ್ದು, ನೂತನ ಉತ್ತರಾಧಿಕಾರಿ ನೇಮಕ ಮಾಡುವಂತಿಲ್ಲ. ಮಾಡಿದರೆ ಕಾನೂನು ಹೋರಾಟ ಮಾಡುವುದಾಗಿ ಲಕ್ಷ್ಮೀವರ ತೀರ್ಥ ಶ್ರೀಗಳ ಪೂರ್ವಾಶ್ರಮದ ಸಹೋದರ ಲಾತವ್ಯ ಆಚಾರ್ಯ ಎಚ್ಚರಿಕೆ ನೀಡಿದ್ದಾರೆ.

ಕೊಡಗು ಜಿಲ್ಲೆಯ ಬೇತು ಗ್ರಾಮದಲ್ಲಿ ಬುಧವಾರ ಸುರಿದ ಮಳೆ

ಕೊಡಗು, ಹಾಸನ ಜಿಲ್ಲೆಯಲ್ಲಿ ಉತ್ತಮ ಮಳೆ

ಮಡಿಕೇರಿ/ಹಾಸನ: ಕೊಡಗು ಜಿಲ್ಲೆಯಾದ್ಯಂತ ಬುಧವಾರ ಧಾರಾಕಾರ ಮಳೆಯಾಗಿದೆ.

ಸುಂಟಿಕೊಪ್ಪ, ಸಿದ್ದಾಪುರ, ಪೊನ್ನಂಪೇಟೆ, ನಾಪೋಕ್ಲು, ಭಾಗಮಂಡಲ, ತಲಕಾವೇರಿ ಹಾಗೂ ಮಡಿಕೇರಿ ಸುತ್ತಮುತ್ತ ಗುಡುಗುಸಹಿತ ಅರ್ಧ ಗಂಟೆ ಮಳೆಯಾಯಿತು.

ಗೋಣಿಕೊಪ್ಪಲು ವ್ಯಾಪ್ತಿಯಲ್ಲಿ ಗಾಳಿಸಹಿತ ಜೋರು ಮಳೆಯಾಗಿದ್ದು, ಗ್ರಾಮೀಣ ಪ್ರದೇಶದ ಅಲ್ಲಲ್ಲಿ ವಿದ್ಯುತ್ ಕಂಬಗಳು ಧರೆಗುರುಳಿದ್ದು, ವಿದ್ಯುತ್ ವ್ಯತ್ಯಯವಾಗಿದೆ.

ಹಾಸನ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಸುಮಾರು ಒಂದು ತಾಸು ಗುಡುಗು ಸಹಿತ ಉತ್ತಮ ಮಳೆಯಾಗಿದೆ. ಸಕಲೇಶಪುರ ತಾಲ್ಲೂಕಿನ ಯಸಳೂರು ಭಾಗದಲ್ಲಿ ಮನೆ ಹೆಂಚುಗಳು ಹಾರಿ ಹೋಗಿವೆ. ವಡೂರು ಗ್ರಾಮದಲ್ಲಿ ಸಿಡಿಲು ಬಡಿದು ಹಸು ಮೃತಪಟ್ಟಿದೆ.

ಕಂದಾಯ ಸಚಿವ ಆರ್. ಅಶೋಕ ಎಚ್ಚರಿಕೆ

ಮಾರ್ಗಸೂಚಿ ಪಾಲಿಸದಿದ್ದರೆ ಕಠಿಣ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ಫ್ಯೂ ಅವಧಿಯಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸದೇ ಇದ್ದರೆ, ಇನ್ನೂ ಕಠಿಣ ನಿಯಮಗಳನ್ನು ಜಾರಿ ಮಾಡುವುದು ಅನಿವಾರ್ಯ ಎಂದು ಕಂದಾಯ ಸಚಿವ ಆರ್.ಅಶೋಕ ಎಚ್ಚರಿಕೆ ನೀಡಿದ್ದಾರೆ.

ಕೊರೋನಾ ಸೋಂಕಿನ ಸರಪಳಿ ಮುರಿಯಲು ಸಾರ್ವಜನಿಕರು ಮನೆಯಲ್ಲೇ ಇರಬೇಕು. ಅನಿವಾರ್ಯ ಇದ್ದರಷ್ಟೇ ಹೊರಗೆ ಬರಬೇಕು. 14 ದಿನಗಳಲ್ಲಿ ಸೋಂಕು ಸರಪಳಿ ಮುರಿದರೆ ಮುಂದೆ ಕಠಿಣ ಕ್ರಮಗಳ ಜಾರಿಯಿಂದ ತಪ್ಪಿಸಲುಕೊಳ್ಳಲು ಸಾಧ್ಯ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು.

ಮುಂದಿನ ಎರಡು ತಿಂಗಳು ಹೆಚ್ಚು ಜಾಗ್ರತೆ ವಹಿಸಿ, ಕೋವಿಡ್ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ.

ಮಹಾರಾಷ್ಟ್ರ ಮತ್ತು ದೆಹಲಿಯಲ್ಲಿ ಕೋವಿಡ್ ತಾರಕಕ್ಕೆ ಏರಿದೆ. ಅಲ್ಲಿ ರೀತಿ ಇಲ್ಲಿ ಉಲ್ಬಣ ಆಗಬಾರದು ಎಂದು ಅವರು ತಿಳಿಸಿದರು.

ಕರ್ಫ್ಯೂ ಸಹಕಾರಿ: ಮೇ 4 ರವರೆಗಿನ ರಾತ್ರಿ ಕರ್ಫ್ಯೂ ಮತ್ತು ವಾರಾಂತ್ಯದ ಬಂದ್‌ನಿಂದ ಕೊರೊನಾ ಸೋಂಕಿನ ಸರಪಳಿ ಮುರಿಯಲು ಸಾಧ್ಯ ಎಂದು ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಹೇಳಿದರು.

ತಾಂತ್ರಿಕ ಸಲಹಾ ಸಮಿತಿಯ ತಜ್ಞರು ವೈಜ್ಞಾನಿಕ ಆಧಾರದ ಮೇಲೆ ನೀಡಿರುವ ಸಲಹೆಗಳ ಮೇರೆಗೆ ಮಾರ್ಗಸೂಚಿ ರೂಪಿಸಲಾಗಿದೆ. ಸಾರ್ವಜನಿಕರು ಇದನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ, ಮುಂದಿನ ಮೂರು–ನಾಲ್ಕು ದಿನಗಳಲ್ಲಿ ಸೋಂಕಿನ ಪ್ರಮಾಣ ಇಳಿಕೆಯಾಗುತ್ತದೆ ಎಂದರು.

ವಿವಿಗಳಲ್ಲಿ ಕೋವಿಡ್ ನಿರ್ವಹಣಾ ಸಮಿತಿ ರಚಿಸಿ: ರಾಜ್ಯಪಾಲ

ಬೆಂಗಳೂರು: ಸರ್ಕಾರಿ ಮತ್ತು ಖಾಸಗಿ ವಲಯದ ಎಲ್ಲ 33 ವಿಶ್ವವಿದ್ಯಾಲಯಗಳಲ್ಲಿ ಕೋವಿಡ್ ನಿರ್ವಹಣಾ ಸಮಿತಿ ರಚಿಸುವಂತೆ ಕುಲಪತಿಗಳಿಗೆ ರಾಜ್ಯಪಾಲ ವಜುಭಾಯಿ ವಾಲಾ ಸೂಚಿಸಿದರು.

ವಿಶ್ವವಿದ್ಯಾಲಯಗಳ ವ್ಯಾಪ್ತಿಯಲ್ಲಿ ಕೋವಿಡ್ ನಿರ್ವಹಣೆ ಉದ್ದೇಶದಿಂದ ಕುಲಪತಿಗಳ ಜೊತೆ ರಾಜಭವನದಲ್ಲಿ ಬುಧವಾರ ಅವರು ಸಮಾಲೋಚನೆ ನಡೆಸಿದರು. ಉನ್ನತ ಶಿಕ್ಷಣ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಇದ್ದರು.

ಎಲ್ಲ ವಿಶ್ವವಿದ್ಯಾಲಯಗಳು, ಅವುಗಳ ವ್ಯಾಪ್ತಿಯ ಕಾಲೇಜುಗಳು, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಕೋವಿಡ್ ಮಾರ್ಗಸೂಚಿ ಕಟ್ಟುನಿಟ್ಟಾಗಿ ಪಾಲಿಸುವಂತೆ ನಿಗಾ ವಹಿಸಬೇಕು ಎಂದು ಕುಲಪತಿಗಳಿಗೆ ವಾಲಾ ನಿರ್ದೇಶನ ನೀಡಿದರು.

18 ವರ್ಷ ದಾಟಿದ ಎಲ್ಲರಿಗೂ ಮೇ 1ರಿಂದ ಲಸಿಕೆ ನೀಡಲಾಗುವುದು. ಆಯಾ ವಿಶ್ವವಿದ್ಯಾಲಯ ಹಾಗೂ ಅದರ ವ್ಯಾಪ್ತಿಯ ಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಲಸಿಕೆ ಹಾಕಿಸಿಕೊಳ್ಳುವಂತೆ ಮನವೊಲಿಕೆ ಸೇರಿ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕು ಎಂದೂ ಅವರು ಸೂಚಿಸಿದರು.

ಪರೀಕ್ಷೆ ಮಾಡಿಸಿ: 'ವಿದ್ಯಾರ್ಥಿಗಳಲ್ಲಿ ಅಥವಾ ಸಿಬ್ಬಂದಿಯಲ್ಲಿ ಕೋವಿಡ್ ರೋಗಲಕ್ಷಣ ಕಂಡುಬಂದರೆ ತಕ್ಷಣ ಪರೀಕ್ಷೆ ಮಾಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಕುಲಪತಿಗಳು, ಕುಲಸಚಿವರು ಹಾಗೂ ಸಿಬ್ಬಂದಿ ಕೆಲಸ ಮಾಡಬೇಕು' ಎಂದು ಅಶ್ವತ್ಥನಾರಾಯಣ ಸಲಹೆ ಮಾಡಿದರು.

'ಇಡೀ ರಾಜ್ಯದಲ್ಲಿ ಆರು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದಾರೆ. ಎಲ್ಲರೂ ಲಸಿಕೆ ಪಡೆಯುವಂತೆ ಪ್ರೇರೇಪಿಸಬೇಕು. ಜೊತೆಗೆ ಪೋಷಕರು ಲಸಿಕೆ ಪಡೆದರೆ ಅದೇ ಒಂದು ದೊಡ್ಡ ಮೈಲುಗಲ್ಲು ಆಗುತ್ತದೆ' ಎಂದರು.

'ಆಯಾ ವಿಶ್ವವಿದ್ಯಾಲಯಗಳಲ್ಲಿ ಇರುವ ಎಲ್ಲ ಸೌಲಭ್ಯಗಳನ್ನು ಕೋವಿಡ್ ನಿರ್ವಹಣೆಗಾಗಿ ಬಳಸಿಕೊಳ್ಳಿ. ನಿಮ್ಮ ಸುತ್ತಮುತ್ತಲಿನ ಪ್ರದೇಶಗಳ ಜನರ ಸಂಕಷ್ಟಕ್ಕೆ ಸ್ಪಂದಿಸಿ' ಎಂದೂ ಅವರು ಹೇಳಿದರು.

'ಸರ್ಕಾರದ ವೈಫಲ್ಯಕ್ಕೆ ಸೋಂಕಿನ ಸಂಖ್ಯೆ ಸಾಕ್ಷಿ'

ಬೆಂಗಳೂರು: 'ಕೋವಿಡ್ ನಿಯಂತ್ರಿಸುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ ಎನ್ನುವುದಕ್ಕೆ ಸೋಂಕಿನ ಸಂಖ್ಯೆಗಳೇ ಸಾಕ್ಷಿ. ಜನರ ಆಕ್ರೋಶಕ್ಕೆ ಹೆದರಿ ಮುಖ್ಯಕಾರ್ಯದರ್ಶಿ ಮೂಲಕ ಸರ್ಕಾರ ಹೇಳಿಕೆಗಳನ್ನು ಕೊಡಿಸುತ್ತಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಬುಧವಾರ ಟೀಕಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕೋವಿಡ್ ತಾಂತ್ರಿಕ ಸಮಿತಿ ಸಲಹೆಯಂತೆ ನಿರ್ಧಾರ ಕೈಗೊಳ್ಳಬೇಕೆಂದು ಸರ್ಕಾರಕ್ಕೆ ಸಲಹೆ ನೀಡಿದ್ದೇವೆ. ರಾಜ್ಯಪಾಲರು ಕರೆದ ಸರ್ವಪಕ್ಷ ಸಭೆಯಲ್ಲಿ ಸರ್ಕಾರದ ವೈಫಲ್ಯಗಳನ್ನು ಹೇಳಿದ್ದೇವೆ. ಪ್ರಧಾನಿಯ ಸಂದೇಶ ಬಂದ ಬಳಿಕ ಲಾಕ್‌ಡೌನ್‌ನಿಂದ ಸರ್ಕಾರ ಹಿಂದೆ ಸರಿದಿರಬೇಕು' ಎಂದರು.

ಕೋವಿಡ್ ನಿಯಂತ್ರಣ: ಜಿಲ್ಲಾ ಉಸ್ತುವಾರಿಗಳಿಗೆ ಸೂಚನೆ

ಬೆಂಗಳೂರು: ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ಸಂಬಂಧಪಟ್ಟ ಜಿಲ್ಲೆಗಳಲ್ಲಿ ಕೊರೊನಾ ವೈರಾಣು ಹರಡುವುದನ್ನು ತಡೆಗಟ್ಟಲು ಕೂಡಲೇ ಕಾರ್ಯಪ್ರವೃತ್ತರಾಗಬೇಕು ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸೂಚಿಸಿದ್ದಾರೆ.

ಕೋವಿಡ್ ನಿಯಂತ್ರಣದಲ್ಲಿ ಜಿಲ್ಲಾಡಳಿತಕ್ಕೆ ಸಹಕಾರ ನೀಡಬೇಕು. ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ನೀಡಬೇಕು. ಸೋಂಕಿತರಿಗೆ ಅಗತ್ಯ ವೈದ್ಯಕೀಯ ಸೌಲಭ್ಯವನ್ನು ಕೊಡಿಸಲು ತ್ವರಿತ ಕ್ರಮ ಕೈಗೊಂಡು ಪರಿಸ್ಥಿತಿ ಉಲ್ಬಣಿಸದಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ.ಕೆಲವು ಸಚಿವರನ್ನು ಬಿಟ್ಟು ಉಳಿದ ಬಹುತೇಕರು ಕೋವಿಡ್ ನಿಯಂತ್ರಣ ಕಾರ್ಯದ ಬಗ್ಗೆ ತಲೆ ಕೆಡಿಸಿಕೊಳ್ಳದೇ ಇರುವ ಕಾರಣ ಯಡಿಯೂರಪ್ಪ ಈ ಸೂಚನೆ ನೀಡಿದ್ದಾರೆ.

ನಟ ವಿನೋದ್ ಆಳ್ವಗೆ ಮಧ್ಯಂತರ ಜಾಮೀನು

ಪುತ್ತೂರು: ಪರಿಶಿಷ್ಟ ಪಂಗಡದ ಯುವಕನ ಮೇಲೆ ಹಲ್ಲೆ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬುಧವಾರ ಸಂಪ್ಯ ಠಾಣೆಗೆ ಶರಣಾದ ಚಿತ್ರನಟ ವಿನೋದ್ ಆಳ್ವ ಅವರನ್ನು ಪೊಲೀಸರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯ ಅವರಿಗೆ ಮಧ್ಯಂತರ ಜಾಮೀನು ನೀಡಿದೆ.

ಪಡುವನ್ನೂರು ಗ್ರಾಮದ ಪದಡ್ಕ ನಿವಾಸಿ ಉದಯ್ ನಾಯ್ಕ ಮೇಲೆ ಹಲ್ಲೆ ನಡೆಸಿದ ಆರೋಪದಡಿ ವಿನೋದ್ ಆಳ್ವ ಸೇರಿ ಇಬ್ಬರ ವಿರುದ್ಧ ಸಂಪ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪಡುಮಲೆ ನಾಗಬೆರ್ಮರ ಸಾನ್ನಿಧ್ಯಕ್ಕೆ ಹೋಗುವ ರಸ್ತೆ ಕಾಮಗಾರಿ ವೇಳೆ ಅಹವಾಲು ಹೇಳಿಕೊಂಡಿದ್ದಕ್ಕೆ ಅವರು ಹಲ್ಲೆನಡೆಸಿ, ಅವಾಚ್ಯ ಪದಗಳಿಂದ ನಿಂದಿಸಿರುವುದಾಗಿ ಉದಯ್ ದೂರು ನೀಡಿದ್ದರು.

ಸಂಕ್ಷಿಪ್ತ ಸುದ್ದಿ

ಶಾಸಕ ಮಾಡಾಳ್ ವಿರೂಪಾಕ್ಷಪ್ಪಗೆ ಕೋವಿಡ್

ಚನ್ನಗಿರಿ: ಕೆಎಸ್‌ಡಿಎಲ್ ಅಧ್ಯಕ್ಷ, ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರಿಗೆ ಕೋವಿಡ್ ಇರುವುದು ಬುಧವಾರ ದೃಢಪಟ್ಟಿದೆ.

ಮೂರು ದಿನಗಳ ಹಿಂದೆ ಅವರ ಪುತ್ರ ಮಾಡಾಳ್ ಮಲ್ಲಿಕಾರ್ಜುನ ಅವರಿಗೆ ಕೊರೊನಾ ಸೋಂಕು ತಗುಲಿರುವುದು ಪತ್ತೆಯಾಗಿತ್ತು. ಶಾಸಕರ ಪತ್ನಿ ಹಾಗೂ ಆಪ್ತ ಸಹಾಯಕ ಸೇರಿ ಎಂಟು ಮಂದಿಗೆ ಕೋವಿಡ್ ತಗುಲಿದೆ.

ಕೆ–ಸೆಟ್ ಮತ್ತೆ ಮುಂದೂಡಿಕೆ

ಮೈಸೂರು: ಏಪ್ರಿಲ್ 25ಕ್ಕೆ ನಿಗದಿಯಾಗಿದ್ದ ಕರ್ನಾಟಕ ರಾಜ್ಯ ಉಪನ್ಯಾಸಕರ ಅರ್ಹತಾ ಪರೀಕ್ಷೆಯನ್ನು (ಕೆ–ಸೆಟ್) ಮತ್ತೆ ಮುಂದೂಡಲಾಗಿದೆ.

ಈ ಮೊದಲು ಏ.11ರಂದು ನಡೆಸಲು ನಿಗದಿ ಮಾಡಿದ್ದ ಪರೀಕ್ಷೆಯನ್ನು ಸಾರಿಗೆ ನೌಕರರ ಮುಷ್ಕರ ಕಾರಣ 25ಕ್ಕೆ ಮುಂದೂಡಲಾಗಿತ್ತು. ಕೊರೊನಾ ಸೋಂಕು ನಿಯಂತ್ರಿಸಲು ವಾರಾಂತ್ಯ ಕರ್ಫ್ಯೂ ವಿಧಿಸಿರುವ ಕಾರಣ ಈಗ ಎರಡನೇ ಬಾರಿ ಮುಂದೂಡಲಾಗಿದೆ. ಪರೀಕ್ಷಾ ದಿನಾಂಕವನ್ನು ಮುಂದಿನ ದಿನಗಳಲ್ಲಿ ಪ್ರಕಟಿಸುವುದಾಗಿ ಮೈಸೂರು ವಿಶ್ವವಿದ್ಯಾಲಯದ ಕೆ–ಸೆಟ್ ಸಂಯೋಜಕ ಪ್ರೊ.ಎಚ್‌.ರಾಜಶೇಖರ್ ತಿಳಿಸಿದ್ದಾರೆ.

ಮಾಹಿತಿಗೆ http://kset.uni-mysore.ac.in

ಕಾನೂನು ಪದವಿ ಪರೀಕ್ಷೆ ಮುಂದೂಡಿಕೆ

ಹುಬ್ಬಳ್ಳಿ: ಕೋವಿಡ್–19 ಎರಡನೇ ಅಲೆಯ ಹಿನ್ನೆಲೆಯಲ್ಲಿ ಏ.22 ರಿಂದ 28ರವರೆಗೆ ನಡೆಯಬೇಕಾಗಿದ್ದ ಐದು ವರ್ಷಗಳ ಕಾನೂನು ಪದವಿ ಪರೀಕ್ಷೆಗಳನ್ನು ಮುಂದೂಡಲಾಗಿದೆ.

ಪರೀಕ್ಷೆ ನಡೆಸುವ ಮುಂದಿನ ದಿನಾಂಕವನ್ನು ನಂತರ ತಿಳಿಸಲಾಗುವುದು ಎಂದು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಕುಲಸಚಿವರು (ಮೌಲ್ಯಮಾಪನ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಶೈಲ ಶ್ರೀಗೆ ಕೋವಿಡ್ ದೃಢ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಯಡೂರದ ಕಾಡಸಿದ್ದೇಶ್ವರ ಮಠದ ಪೀಠಾಧಿಪತಿಯೂ ಆಗಿರುವ ಶ್ರೀಶೈಲ ಪೀಠದ ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಕೋವಿಡ್–19 ದೃಢಪಟ್ಟಿದೆ.

'ಅವರು ತಾಲ್ಲೂಕಿನ ಯಡೂರದಲ್ಲಿ ಹೋಂ ಐಸೋಲೇಷನ್ ಮೂಲಕ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರ ಆರೋಗ್ಯ ಸ್ಥಿರವಾಗಿದೆ. ಶ್ರೀಶೈಲ ಕ್ಷೇತ್ರದಲ್ಲಿ ನಡೆದ ಯುಗಾದಿ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಸ್ವಾಮೀಜಿಯ ಸೇವಾ ಸಿಬ್ಬಂದಿಗೂ ಕೋವಿಡ್ ದೃಢಪಟ್ಟಿದೆ.

ಇತ್ತೀಚೆಗೆ ತಮ್ಮ ಮತ್ತು ಸಿಬ್ಬಂದಿ ಸಂಪರ್ಕಕ್ಕೆ ಬಂದವರೆಲ್ಲರೂ ಕೋವಿಡ್ ಪರೀಕ್ಷೆ ಮಾಡಿಸಿಕೊಳ್ಳಬೇಕು ಎಂದು ಸ್ವಾಮೀಜಿ ತಿಳಿಸಿದ್ದಾರೆ' ಎಂದು ಮಠದ ಪ್ರಕಟಣೆ ತಿಳಿಸಿದೆ.

ಕೋವಿಡ್: ರಾಜ್ಯದಲ್ಲಿ ಮರಣ ಪ್ರಮಾಣ ಅಲ್ಪ ಇಳಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್‌ನಿಂದ ಮೃತಪಟ್ಟವರ ಸಂಖ್ಯೆ ಇಳಿಕೆ ಕಂಡಿದ್ದು, ತುಸು ಸಮಾಧಾನ ತಂದಂತಾಗಿದೆ.

ಬುಧವಾರ ಒಟ್ಟು 116 ಮಂದಿ ಅಸುನೀಗಿದ್ದಾರೆ. ಮಂಗಳವಾರಕ್ಕೆ (149) ಹೋಲಿಸಿದರೆ ಇದು ಕಡಿಮೆ.

ಆದರೆ, ಕೋವಿಡ್ ಪೀಡಿತರ ಸಂಖ್ಯೆ ಮತ್ತೆ ಏರುಗತಿಯಲ್ಲಿ ಸಾಗಿದ್ದು, ಬುಧವಾರ ಒಂದೇ ದಿನ 23,558 ಮಂದಿಗೆ ಸೋಂಕು ತಗುಲಿದೆ. ಇದರೊಂದಿಗೆ ಸೋಂಕು ದೃಢ ಪ್ರಮಾಣವು ಶೇ 15.47ಕ್ಕೆ ಹೆಚ್ಚಿದೆ. ಮರಣ ಪ್ರಮಾಣ ದರ ಶೇ 0.49ಕ್ಕೆ ತಗ್ಗಿದೆ.

ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಹೊಸದಾಗಿ ಕೋವಿಡ್ ಪ್ರಕರಣಗಳು ವರದಿಯಾಗಿದ್ದು, 26 ಜಿಲ್ಲೆಗಳಲ್ಲಿ ಮೂರಂಕಿ ಮುಟ್ಟಿದೆ. ಮಂಗಳವಾರಕ್ಕೆ ಹೋಲಿಸಿದರೆ ಬೆಂಗಳೂರಿನಲ್ಲಿ ಸೋಂಕಿತರ ಪ್ರಮಾಣ ಇಳಿಕೆಯಾಗಿದೆ. ಒಟ್ಟು 13,640 ಮಂದಿಗೆ ಕೋವಿಡ್ ದೃಢಪಟ್ಟಿದೆ.

ತುಮಕೂರಿನಲ್ಲಿ ಒಟ್ಟು 1,176 ಮಂದಿ ಸೋಂಕಿತರಾಗಿರುವುದು ಖಾತರಿಯಾಗಿದೆ. ಮೈಸೂರು (975), ಬಳ್ಳಾರಿ (792), ಕಲಬುರ್ಗಿ (757), ಬೆಂಗಳೂರು ಗ್ರಾಮಾಂತರ (544), ಮಂಡ್ಯ (492), ಉಡುಪಿ (471), ಹಾಸನ (445) ಜಿಲ್ಲೆಗಳಲ್ಲಿಯೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ. ರಾಜ್ಯದಲ್ಲಿ ಈವರೆಗೆ ಸೋಂಕಿಗೊಳಗಾದವರ ಸಂಖ್ಯೆ 12 ಲಕ್ಷದ ಗಡಿ ದಾಟಿದೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ ಒಟ್ಟು 70 ಮಂದಿ ಸಾವಿಗೀಡಾಗಿದ್ದಾರೆ. ಕಲಬುರ್ಗಿ ಹಾಗೂ ಮೈಸೂರಿನಲ್ಲಿ ಕ್ರಮವಾಗಿ 8 ಮತ್ತು 7 ಮಂದಿ, ಬೀದರ್‌ನಲ್ಲಿ ಐದು, ಬಳ್ಳಾರಿಯಲ್ಲಿ ನಾಲ್ಕು, ಹಾಸನದಲ್ಲಿ ಮೂರು, ಮಂಡ್ಯ, ರಾಮನಗರ, ವಿಜಯಪುರ, ಬೆಂಗಳೂರು ಗ್ರಾಮಾಂತರದಲ್ಲಿ ತಲಾ ಇಬ್ಬರು, ಬಾಗಲಕೋಟೆ, ಚಿಕ್ಕಬಳ್ಳಾಪುರ, ದಕ್ಷಿಣ ಕನ್ನಡ, ಹಾವೇರಿ, ಕೊಡಗು, ಕೋಲಾರ, ರಾಯಚೂರು, ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಇದುವರೆಗೆ ಸಾವಿಗೀಡಾದವರ ಸಂಖ್ಯೆ 13,762ಕ್ಕೆ ಏರಿಕೆಯಾಗಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 1.76 ಲಕ್ಷ ದಾಟಿದ್ದು, ತೀವ್ರ ನಿಗಾ ಘಟಕಕ್ಕೆ ದಾಖಲಾಗುವವರ ಸಂಖ್ಯೆ ಮತ್ತೆ ಹೆಚ್ಚಿದೆ. ಸದ್ಯ 904 ಮಂದಿ ಐಸಿಯುನಲ್ಲಿದ್ದಾರೆ.

ಕೋವಿಡ್ ಪೀಡಿತರ ಪೈಕಿ 6,412 ಜನ ಗುಣಮುಖರಾಗಿದ್ದಾರೆ. ಇದರೊಂದಿಗೆ ಚೇತರಿಸಿಕೊಂಡವರ ಒಟ್ಟು ಸಂಖ್ಯೆ 10.32 ಲಕ್ಷಕ್ಕೆ ಏರಿದೆ.

ಕಂಪ್ಯೂಟರ್ ಜ್ಞಾನ ವಿಭಾಗ ಅಂಕ ಗಳಿಕೆ ಸುಲಭ

ಬ್ಯಾಂಕ್ ಪರೀಕ್ಷೆ ಸೇರಿದಂತೆ ಬಹುತೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕಂಪ್ಯೂಟರ್ ಜ್ಞಾನದ ಬಗ್ಗೆ ಪ್ರಶ್ನೆಗಳಿರುತ್ತವೆ. ಈ ಪ್ರಶ್ನೆಗಳಿಗೆ ಉತ್ತರಿಸುವುದು ಸುಲಭ. ಸ್ವಲ್ಪ ಶ್ರಮ ಹಾಕಿದರೆ ಒಟ್ಟಾರೆ ಅಂಕ ಗಳಿಕೆಯನ್ನು ಹೆಚ್ಚಿಸಿಕೊಳ್ಳಬಹುದು.

ಅದ್ವಿತ್ ಆರ್. ಕೊಪ್ಪಳ

ಕಂಪ್ಯೂಟರ್ ಜ್ಞಾನ ಅಥವಾ ಅರಿವು ವಿಭಾಗ ಹಲವಾರು ಪ್ರಮುಖ ಸ್ಪರ್ಧಾತ್ಮಕ ಪರೀಕ್ಷೆಗಳ ಪಠ್ಯದಲ್ಲಿ ಅವಿಭಾಜ್ಯ ಅಂಗ ಎನ್ನಬಹುದು. ಕಂಪ್ಯೂಟರ್ ಅರಿವು ವಿಭಾಗದಲ್ಲಿ ಹೆಚ್ಚಿನ ಪ್ರಶ್ನೆಗಳು ನೇರವಾಗಿರುತ್ತವೆ. ಹೀಗಾಗಿ ಸ್ಪರ್ಧಾರ್ಥಿಗಳು ಈ ವಿಭಾಗದಲ್ಲಿ ಸರಿಯಾಗಿ ಉತ್ತರ ಬರೆಯುವ ಮೂಲಕ ತಮ್ಮ ಒಟ್ಟಾರೆ ಅಂಕಗಳನ್ನು ಹೆಚ್ಚಿಸಿಕೊಳ್ಳಬಹುದು.

ಕಂಪ್ಯೂಟರ್ ಜ್ಞಾನ

ಸರ್ಕಾರಿ ಇಲಾಖೆಗಳಲ್ಲಿ ವಿವಿಧ ಹುದ್ದೆಗಳಿಗೆ ಸೇರಬೇಕಾದರೆ ಕಂಪ್ಯೂಟರ್ ಅಪ್ಲಿಕೇಶನ್‌ನ ಬೇಸಿಕ್ ಜ್ಞಾನ ಅವಶ್ಯಕ. ಜೊತೆಗೆ ವಿವಿಧ ಕಂಪ್ಯೂಟರ್ ಅಪ್ಲಿಕೇಶನ್, ಪರಿಭಾಷೆ, ಶಾರ್ಟ್‌ಕಟ್ ಹಾಗೂ ಸಾಫ್ಟ್‌ವೇರ್‌ಗಳ ಬಗ್ಗೆ ಅರಿವಿದ್ದರೆ ಪರೀಕ್ಷೆಯ ಈ ವಿಭಾಗದಲ್ಲಿ ಉತ್ತಮ ಅಂಕ ಗಳಿಸಿ ಅರ್ಹತೆ ಸಾಧಿಸಬಹುದು.

ಕಂಪ್ಯೂಟರ್ ಜ್ಞಾನ ವಿಭಾಗದಲ್ಲಿ ಈ ಕೆಲವು ಅಂಶಗಳನ್ನು ಪರಿಗಣಿಸಬಹುದು.

- ಪ್ರಶ್ನೆಗಳು ನೇರವಾಗಿರುತ್ತವೆ.
- ಮೂಲಭೂತ ಕಂಪ್ಯೂಟರ್ ಜ್ಞಾನವನ್ನು ಆಧರಿಸಿ ಇರುತ್ತವೆ.
- ಕಡಿಮೆ ಸಮಯದಲ್ಲಿ ಉತ್ತರಿಸಬಹುದು.
- ದೀರ್ಘವಾದ ಉತ್ತರ ಅಥವಾ ಲೆಕ್ಕಾಚಾರ ಇದಕ್ಕೆ ಅಗತ್ಯವಿಲ್ಲ.
- ಬಹುತೇಕ ಬ್ಯಾಂಕ್ ಪರೀಕ್ಷೆಗಳಲ್ಲಿ ಪ್ರತ್ಯೇಕ ವಿಭಾಗವಿರುವುದಿಲ್ಲ. ಆದರೆ ರೀಸನಿಂಗ್ ಎಬಿಲಿಟಿ ವಿಭಾಗದಲ್ಲಿ ಸೇರಿಸಲಾಗುತ್ತದೆ.

ಕಂಪ್ಯೂಟರ್ ತಿಳಿವಳಿಕೆ ವಿಭಾಗದಲ್ಲಿ ಈ ಕೆಲವು ವಿಷಯಗಳನ್ನು ಸೇರಿಸಲಾಗುತ್ತದೆ. ಕಂಪ್ಯೂಟರ್‌ನ ಮೂಲಭೂತ ವಿಷಯಗಳು, ಮೈಕ್ರೊಸಾಫ್ಟ್ ವಿಂಡೋಸ್, ಮೈಕ್ರೊಸಾಫ್ಟ್ ಆಫೀಸ್, ಎಂಎಸ್ ವರ್ಡ್, ಎಂಎಸ್ ಪವರ್‌ಪಾಯಿಂಟ್, ಎಂಎಸ್ ಎಕ್ಸೆಲ್, ಎಂಎಸ್ ಆ್ಯಕ್ಸೆಸ್, ಎಂಎಸ್ ಔಟ್‌ಲುಕ್, ಕಂಪ್ಯೂಟರ್ ಶಾರ್ಟ್‌ಕಟ್ ಕೀಗಳು, ಕಂಪ್ಯೂಟರ್ ಅಬ್ರಿವಿಯೇಶನ್, ಉನ್ನತ ಮಟ್ಟದ ಕಂಪ್ಯೂಟರ್ ಲ್ಯಾಂಗ್ವೇಜ್, ಕ್ಲೌಡ್ ಕಂಪ್ಯೂಟಿಂಗ್‌ನ ಮೂಲಭೂತ ಜ್ಞಾನ, ಕಂಪ್ಯೂಟರ್ ನೆಟ್‌ವರ್ಕ್, ವಿವಿಧ ಬಗೆಯ ಕಂಪ್ಯೂಟರ್‌ಗಳು, ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್, ಅಂತರ್ಜಾಲ, ಇನ್‌ಪುಟ್ ಮತ್ತು ಔಟ್‌ಪುಟ್, ಕಂಪ್ಯೂಟರ್ ವೈರಸ್, ವೆಬ್‌ಸೈಟ್, ಕಂಪ್ಯೂಟರ್‌ಗೆ ಸಂಬಂಧಿಸಿದ ವಿವಿಧ ಶಬ್ದಗಳು, ವೆಬ್ ಬ್ರೌಸರ್, ಕಂಪ್ಯೂಟರ್ ಬಿಡಿಭಾಗಗಳು, ಡೇಟಾಬೇಸ್ ನಿರ್ವಹಣೆ ವ್ಯವಸ್ಥೆ ಮೊದಲಾದವುಗಳು.

ಐಬಿಪಿಎಸ್ (ಪ್ರೊಬೇಷನರಿ ಆಫೀಸರ್), ಐಬಿಪಿಎಸ್ ಕ್ಲರ್ಕ್, ಐಬಿಪಿಎಸ್ (ವಿಶೇಷ ಅಧಿಕಾರಿ), ಆರ್‌ಆರ್‌ಬಿ, ಆರ್‌ಬಿಐ ಅಸಿಸ್ಟೆಂಟ್, ಐಬಿಪಿಎಸ್ ಆರ್‌ಆರ್‌ಬಿ, ಐಬಿಪಿಎಸ್ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್ ಕ್ಲರ್ಕ್, ಎಲ್‌ಐಸಿ (ಹೌಸಿಂಗ್ ಫೈನಾನ್ಸ್ ಲಿಮಿಟೆಡ್), ಎನ್‌ಐಎಸಿಎಲ್ ಅಸಿಸ್ಟೆಂಟ್, ಎನ್‌ಐಎಸಿಎಲ್ ಅಡ್ಮಿನಿಸ್ಟ್ರೇಟಿವ್ ಆಫೀಸರ್, ಎಫ್‌ಸಿಐ ಮ್ಯಾನೇಜರ್, ಆರ್‌ಆರ್‌ಬಿ ಜ್ಯೂನಿಯರ್ ಎಂಜಿನಿಯರ್ ಮೊದಲಾದ ಹುದ್ದೆಗಳಿಗೆ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಕಂಪ್ಯೂಟರ್ ಜ್ಞಾನದ ಕುರಿತ ಪ್ರಶ್ನೆಗಳು ಇರುತ್ತವೆ.

ಬಹುತೇಕ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸ್ಪರ್ಧಾರ್ಥಿಗಳು ಒಟ್ಟಾರೆ ಕನಿಷ್ಠ ಅರ್ಹತಾ ಅಂಕಗಳನ್ನು ಗಳಿಸಬೇಕಾಗುತ್ತದೆ. ಹೀಗಾಗಿ ಪ್ರತಿಯೊಂದು ವಿಭಾಗದಲ್ಲೂ ಉತ್ತಮ ಅಂಕಗಳನ್ನು ಗಳಿಸಬೇಕಾಗುತ್ತದೆ. ಪ್ರಶ್ನೆಪತ್ರಿಕೆಯ ಬೇರೆ ಕೆಲವು ವಿಭಾಗಗಳಿಗೆ ಹೋಲಿಸಿದರೆ ಕಂಪ್ಯೂಟರ್ ಅರಿವು ವಿಭಾಗ ಹೆಚ್ಚು ಸುಲಭ ಎನ್ನಬಹುದು. ಹೀಗಾಗಿ ಹೆಚ್ಚು ಒತ್ತು ಕೊಟ್ಟು ಓದಿದರೆ ಪರೀಕ್ಷೆಯಲ್ಲಿ ಅರ್ಹತೆ ಗಳಿಸಬಹುದು.

ಮಾದರಿ ಪ್ರಶ್ನೆ: ———— ಕಂಪ್ಯೂಟರ್ ನೆಟ್‌ವರ್ಕ್‌ನಲ್ಲಿ ಅಳವಡಿಸಿರುವ ಪ್ರತಿಯೊಂದು ಡಿವೈಸ್ (ಉದಾ: ಕಂಪ್ಯೂಟರ್, ಪ್ರಿಂಟರ್) ಗೆ ನೀಡಲಾಗಿರುವ ನ್ಯೂಮರಿಕಲ್ ಲೇಬಲ್.

1 ಇಮೇಲ್ 2 ಟೋಪೊಲೊಜಿ 3 ರೌಟರ್
4 ಐಪಿ ಅಡ್ರೆಸ್ 5 ವೆಬ್‌ಸೈಟ್
ಉತ್ತರ: 4 ಐಪಿ ಅಡ್ರೆಸ್

ಪ್ರಶ್ನೋತ್ತರ ಸಾಮಾನ್ಯ ಅಧ್ಯಯನ

(ಮುಂದುವರಿದ ಭಾಗ)

8). 21(ಎ) ವಿಧಿಯಡಿಯಲ್ಲಿ 6 ರಿಂದ 14 ವರ್ಷಗಳವರೆಗಿನ ಮಕ್ಕಳಿಗೆ ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕಾಗಿದೆ. ಇದನ್ನು ಜಾರಿಗೆ ತಂದ ವರ್ಷ ಯಾವುದು?
ಎ) 2000 ಬಿ) 2002 ಸಿ) 2003 ಡಿ) 2004
ಉತ್ತರ: (ಬಿ)
ವಿವರಣೆ: 2002ರ ಸಂವಿಧಾನದ 86ನೇ ತಿದ್ದುಪಡಿಯ ಮೂಲಕ 21 (ಎ) ವಿಧಿಯಡಿಯಲ್ಲಿ 6 ರಿಂದ 14 ವರ್ಷಗಳವರೆಗಿನ ಮಕ್ಕಳಿಗೆ ಶಿಕ್ಷಣ ಪಡೆಯುವುದು ಮೂಲಭೂತ ಹಕ್ಕು ಎಂದು ಘೋಷಿಸಲಾಯಿತು.

9) 'ಜನರ ಮತದ ಆಧಾರದ ಮೇಲೆ ನಿಂತಿರುವ ಸರ್ಕಾರವು ನೀತಿಗಳನ್ನು ರೂಪಿಸುವ ಸಂದರ್ಭದಲ್ಲಿ ರಾಜ್ಯ ನಿರ್ದೇಶಕ ತತ್ವಗಳನ್ನು ಅಲಕ್ಷಿಸಬಾರದು' – ಈ ಹೇಳಿಕೆಯನ್ನು ಕೆಳಗಿನ ಯಾರು ನೀಡಿದರು?
ಎ) ಡಾ. ಬಿ.ಆರ್. ಅಂಬೇಡ್ಕರ್
ಬಿ) ಜವಾಹರ್ ಲಾಲ್ ನೆಹರು
ಸಿ) ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಡಿ) ಕೆ.ಟಿ.ಶಾ
ಉತ್ತರ: (ಎ)
ವಿವರಣೆ: ಡಾ.ಅಂಬೇಡ್ಕರ್‌ರವರು 'ಜನರ ಮತದ ಆಧಾರದ ಮೇಲೆ ನಿಂತಿರುವ ಸರ್ಕಾರವು ನೀತಿಗಳನ್ನು ರೂಪಿಸುವ ಸಂದರ್ಭದಲ್ಲಿ ರಾಜ್ಯ ನಿರ್ದೇಶಕ ತತ್ವಗಳನ್ನು ಅಲಕ್ಷಿಸಲಾರದು' ಎಂದಿದ್ದಾರೆ. 'ಈ ತತ್ವಗಳನ್ನು ಉದಾಸೀನ ಮಾಡುವ ಸರ್ಕಾರವು ಚುನಾವಣೆ ಸಂದರ್ಭದಲ್ಲಿ ಮತದಾರರ ಮುಂದೆ ಉತ್ತರ ನೀಡಬೇಕಾಗುತ್ತದೆ' ಎಂದು ಸಂವಿಧಾನ ರಚನಾ ಸಭೆಯಲ್ಲಿಯೇ ಅಂಬೇಡ್ಕರ್ ತಮ್ಮ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ರಾಜ್ಯ ನಿರ್ದೇಶಕ ತತ್ವಗಳು ಭಾರತವನ್ನು ಒಂದು 'ಕಲ್ಯಾಣ ರಾಜ್ಯ'ವನ್ನಾಗಿ ಪರಿವರ್ತಿಸಲು ಸಹಕಾರಿಯಾಗಿವೆ.

10) 'ಫೆಡರಲ್ ಪಾರ್ಲಿಮೆಂಟ್' ಎಂಬುದು ಯಾವ ದೇಶದ ಸಂಸತ್ತಾಗಿದೆ?
ಎ) ಆಸ್ಟ್ರೇಲಿಯಾ ಬಿ) ಜಪಾನ್
ಸಿ) ಬ್ರೆಜಿಲ್ ಡಿ) ಮೇಲಿನ ಯಾವುದೂ ಅಲ್ಲ
ಉತ್ತರ: (ಎ)
ವಿವರಣೆ: ವಿವಿಧ ದೇಶಗಳಲ್ಲಿ ಸಂಸತ್ತು ಬೇರೆ ಬೇರೆ ಹೆಸರುಗಳಿಂದ ಕರೆಯಲ್ಪಡುತ್ತದೆ. ಜಪಾನ್‌ನಲ್ಲಿ ಡಯಟ್ ಹಾಗೂ ಬ್ರೆಜಿಲ್‌ನಲ್ಲಿ ನ್ಯಾಷನಲ್ ಕಾಂಗ್ರೆಸ್ ಎಂದು ಕರೆಯುವರು.

11) ಆಬ್ಸಲ್ಯೂಟ್ ವಿಟೊ ಎಂದರೇನು?
ಎ) ರಾಷ್ಟ್ರಾಧ್ಯಕ್ಷ ಸಂಸತ್ತಿನಿಂದ ಅನುಮೋದಿಸಲ್ಪಟ್ಟ ಒಂದು ಮಸೂದೆಯನ್ನು ತಿರಸ್ಕರಿಸುವುದು
ಬಿ) ರಾಷ್ಟ್ರಾಧ್ಯಕ್ಷ ಸಂಸತ್ತಿನಿಂದ ಅನುಮೋದಿಸಲ್ಪಟ್ಟ ಮಸೂದೆಗೆ ಒಪ್ಪಿಗೆ ನೀಡದೆ, ಸಂಸತ್ತಿನ ಮರುಪರಿಶೀಲನೆಗೆ ಹಿಂತಿರುಗಿಸಬಹುದು
ಸಿ) ರಾಷ್ಟ್ರಾಧ್ಯಕ್ಷ ಮಸೂದೆಯನ್ನು ಅನಿರ್ದಿಷ್ಟ ಕಾಲದವರೆಗೆ ತಮ್ಮ ಬಳಿಯೇ ಇಟ್ಟುಕೊಳ್ಳುವುದು
ಡಿ) ಮೇಲಿನ ಯಾವೂದೂ ಅಲ್ಲ
ಉತ್ತರ: (ಎ)
ವಿವರಣೆ: ಸಂಸತ್ತನಿಂದ ಅನುಮೋದಿಸಲ್ಪಟ್ಟ ಯಾವುದೇ ಒಂದು ಮಸೂದೆ ರಾಷ್ಟ್ರಾಧ್ಯಕ್ಷರ ಅಂಗೀಕಾರ ಇಲ್ಲದ ಕಾಯ್ದೆಯಾಗುವುದಿಲ್ಲ. ರಾಷ್ಟ್ರಾಧ್ಯಕ್ಷರು 4 ರೀತಿಯ ವಿಟೊ ಅಧಿಕಾರ ಚಲಾಯಿಸುತ್ತಾರೆ.
i. ಅಬ್ಸಲ್ಯೂಟ್ ವಿಟೊ: ಸಂಸತ್‌ನಿಂದ ಅನುಮೋದಿಸಲ್ಪಟ್ಟ ಒಂದು ಮಸೂದೆಯನ್ನು ತಿರಸ್ಕರಿಸುವ ಅಧಿಕಾರ ರಾಷ್ಟ್ರಾಧ್ಯಕ್ಷರಿಗೆ ಇದೆ. ಇದನ್ನು 'ಅಬ್ಸಲ್ಯೂಟ್ ವಿಟೊ' ಎಂದು ಕರೆಯಲಾಗುತ್ತದೆ
ii. ಸಸ್ಪೆನ್ಸಿವ್ ವಿಟೊ: ಸಂಸತ್‌ನಿಂದ ಅನುಮೋದಿಸಲ್ಪಟ್ಟ ಮಸೂದೆಯನ್ನು ರಾಷ್ಟ್ರಾಧ್ಯಕ್ಷ ಒಪ್ಪಿಗೆ ನೀಡದೆ ಸಂಸತ್ತಿನ ಮರುಪರಿಶೀಲನೆಗೆ ಹಿಂತಿರುಗಿಸಬಹುದು. ಇದನ್ನು 'ಸಸ್ಪೆನ್ಸಿವ್ ವಿಟೊ' ಎನ್ನುವರು
iii. ಪಾಕೆಟ್ ವಿಟೊ: ಈ ಪ್ರಕರಣದಲ್ಲಿ ರಾಷ್ಟ್ರಾಧ್ಯಕ್ಷ ಒಂದು ಮಸೂದೆಗೆ ಅಂಗೀಕಾರ ನೀಡುವುದಿಲ್ಲ ಅಥವಾ ಅಂಗೀಕಾರವನ್ನು ತಡೆಹಿಡಿಯುವುದಿಲ್ಲ ಅಥವಾ ಸಂಸತ್ತಿನ ಮರುಪರಿಶೀಲನೆಗೆ ಹಿಂತಿರುಗಿಸುವುದಿಲ್ಲ; ಬದಲಾಗಿ ಹಿಡಿದಿಟ್ಟುಕೊಳ್ಳುತ್ತಾರೆ. ಇದನ್ನು 'ಪಾಕೆಟ್ ವಿಟೊ' ಎನ್ನುವರು.
iv. ಕ್ವಾಲಿಫೈಡ್ ವಿಟೊ: ಶಾಸನ ಸಭೆಯು ರಾಷ್ಟ್ರಾಧ್ಯಕ್ಷರನ್ನು ವಿಶೇಷ ಬಹುಮತದಲ್ಲಿ ಮೀರಿ ನಡೆಯಬಹುದು. (ಈ ಅಧಿಕಾರ ಅಮೆರಿಕಾದ ಅಧ್ಯಕ್ಷರಿಗೆ ಮಾತ್ರ ಇದೆ, ಭಾರತದ ರಾಷ್ಟ್ರಪತಿಗೆ ಇಲ್ಲ).



12) ಬಸವಣ್ಣನವರಿಗೆ ಸಂಬಂಧಿಸಿದಂತೆ ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?
1. ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿದ್ದರು.
2. ಇವರು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಜೀವಿಸಿದ್ದರು.
3. ಲಿಂಗಾಯಿತ ಧರ್ಮದ ಸ್ಥಾಪಕರು.
4. ಅನುಭವ ಮಂಟಪದ ಸ್ಥಾಪಕರು.
ಉತ್ತರ ಸಂಕೇತಗಳು:
ಎ) 1, 2 ಮತ್ತು 3 ಬಿ) 1, 2 ಮತ್ತು 4
ಸಿ) 1, 3 ಮತ್ತು 4 ಡಿ) ಮೇಲಿನ ಎಲ್ಲವೂ
ಉತ್ತರ: (ಸಿ)
ವಿವರಣೆ:
1. ಬಸವಣ್ಣನವರ ಪ್ರತಿಭೆಯನ್ನು ಮೆಚ್ಚಿಕೊಂಡ 2ನೇ ಬಿಜ್ಜಳ ಇವರನ್ನು ಮಂತ್ರಿಯಾನ್ನಾಗಿ ಮಾಡಿಕೊಂಡರು.
2. ಇವರು ಕಲ್ಯಾಣ ಕಲಚೂರಿಗಳ ಕಾಲದಲ್ಲಿ ಜೀವಿಸಿದ್ದರು.
3. ಅಂದಿನ ವೀರಶೈವ ಚಳುವಳಿಗಾರರು, ಇಂದಿನ ಲಿಂಗಾಯಿತ ಧರ್ಮದ ಸ್ಥಾಪಕರು.
4. ಅನುಭವ ಮಂಟಪವನ್ನು ಸ್ಥಾಪಿಸಿದರು. ಇದೊಂದು ವಚನ ಮಂಟಪ. ಇಲ್ಲಿ ಧಾರ್ಮಿಕ ಗೋಷ್ಠಿ ನಡೆಯುತ್ತಿದ್ದು, ಅಲ್ಲಮಪ್ರಭು ಇದರ ಅಧ್ಯಕ್ಷರಾಗಿದ್ದರು.

13) ಚೌತ ಹಾಗೂ ಸರ್ದೇಶ್‌ಮುಖಿ ಈ ಎರಡು ತೆರಿಗೆಗಳು, ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿವೆ?
ಎ) ಸೇನಾ ತೆರಿಗೆ ಬಿ) ನ್ಯಾಯದಾನ ತೆರಿಗೆ
ಸಿ) ಭೂ ಸುಧಾರಣೆ ತೆರಿಗೆ ಡಿ) ಕ್ಷೇತ್ರಾಭಿವೃದ್ಧಿ ತೆರಿಗೆ
ಉತ್ತರ: ಎ
ವಿವರಣೆ: ಚೌತ್ ಹಾಗೂ ಸರ್ದೇಶ್‌ಮುಖಿ ಮಿಲಿಟರಿ ತೆರಿಗೆಗಳು. ಶಿವಾಜಿಯು ಈ ತೆರಿಗೆಗಳನ್ನು ತನ್ನ ನೆರೆಹೊರೆಯ ರಾಜ್ಯಗಳ ಮೇಲೆ ವಿಧಿಸುತ್ತಿದ್ದ. ಚೌತ್ 1/4 ರಷ್ಟು, ಸರ್ದೇಶ್‌ಮುಖಿ 1/10 ಪಾಲನ್ನು ಹೊಂದಿತ್ತು.

14) 'ಭಕ್ತಿ ಮಾರ್ಗದಿಂದ ಮಾತ್ರ ದೇವರನ್ನು ಕಾಣಲು ಸಾಧ್ಯ' ಎಂದವರು ಯಾರು?
ಎ) ರಮಾನಂದ ಬಿ) ಕಬೀರರು
ಸಿ) ಮೀರಬಾಯಿ ಡಿ) ಆತ್ಮಾನಂದ
ಉತ್ತರ: (ಬಿ)
ವಿವರಣೆ: ಕಬೀರರು ವಾರಾಣಸಿಯಲ್ಲಿನ ನೇಕಾರ, ಮುಸ್ಲಿಂ ದಂಪತಿ ನಿರು ಮತ್ತು ನಿಮ ಬಳಿ ಬೆಳೆದರು. ಇವರ ಭಕ್ತಿ ಪೂರಕ ಗೀತ ರಚನೆಗಳು 'ದೋಹ' ಪ್ರಕಾರದಲ್ಲಿವೆ.

15) ಉತ್ತರ ಭಾರತದಲ್ಲಿ ಭಕ್ತಿ ಚಳವಳಿಯನ್ನು ಜನಪ್ರಿಯಗೊಳಿಸಿದ ಕೀರ್ತಿ ಯಾರಿಗೆ ಸಲ್ಲುತ್ತದೆ?
ಎ) ಕಬೀರರು ಬಿ) ಗುರುನಾನಕ್
ಸಿ) ಚೈತನ್ಯ ಡಿ) ರಮಾನಂದ
ಉತ್ತರ: (ಡಿ)
ವಿವರಣೆ: ಭಕ್ತಿ ಚಳವಳಿ ದಕ್ಷಿಣ ಭಾರತದ ಸಂತರಿಂದ ಪ್ರತಿಪಾದಿಸಲ್ಪಟ್ಟರೂ ಉತ್ತರ ಭಾರತದಲ್ಲಿ ಈ ಚಳವಳಿಯನ್ನು ಜನಪ್ರಿಯಗೊಳಿಸಿದ ಕೀರ್ತಿ ರಮಾನಂದರಿಗೆ ಸಲ್ಲುತ್ತದೆ.

(ಪ್ರಶ್ನೋತ್ತರ ಸಂಯೋಜನೆ: ಜ್ಞಾನಗಂಗೋತ್ರಿ ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ, ವಿಜಯನಗರ, ಬೆಂಗಳೂರು)

ಪ್ರಜಾವಾಣಿ ಉದ್ಯೋಗ ವಾರ್ತೆ

ರಾಜ್ಯ ನೌಕರರ ವಿಮಾ ನಿಗಮದಲ್ಲಿ ಹುದ್ದೆಗಳು

ರಾಜ್ಯ ನೌಕರರ ವಿಮಾ ನಿಗಮ(ಇಎಸ್‌ಐಸಿ) ಬೋಧಕರ ಹುದ್ದೆಗಳ ಆಯ್ಕೆಗೆ ಅರ್ಜಿ ಆಹ್ವಾನಿಸಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
ಹುದ್ದೆಗಳು: ಪ್ರೊಫೆಸರ್, ಅಸಿಸ್ಟೆಂಟ್ ಪ್ರೊಫೆಸರ್
ಹುದ್ದೆಗಳ ಸಂಖ್ಯೆ: 24
ಸ್ಥಳ: ಬೆಂಗಳೂರು
ವಯೋಮಿತಿ: ಕನಿಷ್ಠ 30 ವರ್ಷ, ಗರಿಷ್ಠ 69 ವರ್ಷ
ಅರ್ಜಿ ಶುಲ್ಕ: ಇಲ್ಲ
ನೇಮಕಾತಿ ಪ್ರಕ್ರಿಯೆ: ಲಿಖಿತ ಪರೀಕ್ಷೆ, ಸಂದರ್ಶನ
ಅರ್ಜಿ ಸಲ್ಲಿಕೆ ವಿಧಾನ: ಆನ್‌ಲೈನ್ ಮೂಲಕ
ವಾಕ್ ಇನ್ ಸಂದರ್ಶನ: ಏಪ್ರಿಲ್ 28 ಹಾಗೂ 29
ಹೆಚ್ಚಿನ ಮಾಹಿತಿಗೆ: https://www.esic.nic.in/recruitments

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಂಖ್ಯಾಶಾಸ್ತ್ರ

ಗಣಿತ

ಎಸ್ಸೆಸ್ಸೆಲ್ಸಿ

ಪೀಠಿಕೆ

ನಾವು ಪ್ರತಿನಿತ್ಯ ವಿವಿಧ ವಿಸ್ತೃತ ಮಾಹಿತಿಗಳನ್ನು ನೈಜ ಸಂಗತಿಗಳು, ಸಾಂಖ್ಯಿಕ ಅಂಶಗಳು, ಕೋಷ್ಟಕಗಳು ಅಥವಾ ನಕ್ಷೆಗಳು ಇತ್ಯಾದಿ ರೂಪದಲ್ಲಿ ನೋಡುತ್ತೇವೆ. ಈ ನೈಜ ಸಂಗತಿಗಳ ಅಥವಾ ಅಂಶಗಳ ಸಾಂಖ್ಯಿಕ ಅಥವಾ ಬೇರೆ ರೀತಿಯ ನಿರ್ದಿಷ್ಟ ಉದ್ದೇಶದ ಸಂಗ್ರಹಣೆಯನ್ನು ದತ್ತಾಂಶ ಎನ್ನುತ್ತೇವೆ. ನಮ್ಮ ಜಗತ್ತು ಹೆಚ್ಚೆಚ್ಚು ಮಾಹಿತಿ ಕೇಂದ್ರಿತವಾಗಿದೆ. ದೈನಂದಿನ ಜೀವನದ ಪ್ರತಿ ಹಂತದಲ್ಲಿ ಒಂದಲ್ಲ ಒಂದು ರೀತಿಯಲ್ಲಿ ದತ್ತಾಂಶವನ್ನು ಉಪಯೋಗಿಸುತ್ತೇವೆ. ಆದ್ದರಿಂದ ದತ್ತಾಂಶಗಳಿಂದ ಅರ್ಥಪೂರ್ಣ ಮಾಹಿತಿಯನ್ನು ಹೊರತೆಗೆಯುವುದನ್ನು ತಿಳಿಯುವುದು ಅನಿವಾರ್ಯವಾಗಿದೆ.

'STATISTICS' ಪದವು ಲ್ಯಾಟಿನ್ ಪದ stats ಪದದಿಂದ ವ್ಯುತ್ಪತ್ತಿ ಹೊಂದಿದೆ. ಇದು ಕೇವಲ ಮಾಹಿತಿ ಸಂಗ್ರಹಣೆ ಮತ್ತು ಪ್ರಸ್ತುತಿಯಾಗಿಲ್ಲ. ದತ್ತಾಂಶಗಳ ವಿವರಣೆ ಮತ್ತು ನಿರ್ಧಾರಗಳ ಕೈಗೊಳ್ಳುವಿಕೆಯನ್ನು ಹೊಂದಿದೆ. ಸಂಖ್ಯಾಶಾಸ್ತ್ರವು ದತ್ತಾಂಶಗಳ ಸಂಗ್ರಹಣೆ, ಕ್ರಮಬದ್ಧ ಜೋಡಣೆ, ವಿಶ್ಲೇಷಣೆ ಮತ್ತು ವಿವರಣೆಯನ್ನು ಒಳಗೊಂಡಿದೆ.

ವರ್ಗೀಕೃತ ದತ್ತಾಂಶಗಳ ಸರಾಸರಿ

ನಾವು ತಿಳಿದಂತೆ ಪ್ರಾಪ್ತಾಂಕಗಳ ಸರಾಸರಿಯು, ಪ್ರಾಪ್ತಾಂಕಗಳ ಒಟ್ಟು ಮೊತ್ತಕ್ಕೆ ಪ್ರಾಪ್ತಾಂಕಗಳ ಒಟ್ಟು ಸಂಖ್ಯೆಯಿಂದ ಭಾಗಿಸಿದಾಗ ದೊರಕುತ್ತದೆ. f_1 f_2 .... fn ಗಳು ಆವರ್ತವಾಗುತ್ತದೆ.

ಕ್ರಮವಾಗಿ x_1, x_2...... xn ಪ್ರಾಪ್ತಾಂಕಗಳ ಆವೃತ್ತಗಳಾಗಿವೆ. ಅಂದರೆ x_1 ಪ್ರಾಪ್ತಾಂಕವು f1 ಸಲ x2 ವು f_2 ಸಲ ಮತ್ತು ಬೇರೆ ಆವರ್ತವಾಗುತ್ತದೆ.

ಈಗ ಎಲ್ಲಾ ಪ್ರಾಪ್ತಾಂಕಗಳ ಮೊತ್ತ
$= f_1x1 + f_2x2 + ... + fnxn$ ಮತ್ತು ಪ್ರಾಪ್ತಾಂಕಗಳ ಒಟ್ಟು ಸಂಖ್ಯೆ
$= f_1 + f_2 + ... + fn$
ಆದ್ದರಿಂದ ಪ್ರಾಪ್ತಾಂಕ ಸರಾಸರಿಯು

$$\hat{x} = \frac{f_1x_1 + f_2x_2 + \cdots .. + f_n x_n}{f_1 + f_2 \dots \dots . f_n}$$

ಅಂದರೆ

$$\hat{x} = \frac{\sum_{i=1}^{n} f_1x_1}{\sum_{i=1}^{n} f_1}$$

ಎಂದು ಬರೆಯಬಹುದು

ಉದಾಹರಣೆ: ಒಂದು ಶಾಲೆಯ 10ನೇ ತರಗತಿಯ 30 ವಿದ್ಯಾರ್ಥಿಗಳು 100 ಅಂಕಗಳ ಗಣಿತ ಪತ್ರಿಕೆಯಲ್ಲಿ ಪಡೆದ ಅಂಕಗಳನ್ನು ಕೆಳಗಿನ ಕೋಷ್ಟಕದಲ್ಲಿ ನೀಡಿದೆ. ವಿದ್ಯಾರ್ಥಿಗಳು ಪಡೆದ ಅಂಕಗಳ ಸರಾಸರಿಯನ್ನು ಕಂಡುಹಿಡಿಯಿರಿ.

ಪಡೆದ ಅಂಕಗಳು	10	20	36	40	50	56	60	70	72	80	88	92	95
	1	1	3	4	3	2	4	4	1	1	2	3	1

ಪರಿಹಾರ: ಸರಾಸರಿ ಅಂಕಗಳನ್ನು ಕಂಡುಹಿಡಿಯಲು ಪ್ರತಿ x1 ಮತ್ತು ಅದಕ್ಕೆ ಅನುಗುಣವಾಗಿ ಆವೃತ್ತಿ f1 ಗಳ ಗುಣಲಬ್ಧದ ಅಗತ್ಯವಿದೆ.

ಪಡೆದ ಅಂಕಗಳು	ವಿದ್ಯಾರ್ಥಿಗಳ ಸಂಖ್ಯೆ	f_1x_1
10	1	20
20	1	20
36	3	108
40	4	160
50	3	150
56	2	112
60	4	240
70	4	280
72	1	72
80	1	80
88	2	176
92	3	276
95	1	95
ಒಟ್ಟು	$\sum f_1=30$	$\sum f_1x_2=1779$

$$\hat{x} = \frac{\sum f_1x_1}{\sum f_i} = \frac{1779}{30} = 59.3$$

ಆದ್ದರಿಂದ ಪಡೆದ ಸರಾಸರಿ ಅಂಶಗಳು=59.3

ವರ್ಗೀಕೃತ ದತ್ತಾಂಶಗಳ ಬಹುಲಕ

ಬಹುಲಕ ಅಥವಾ ರೂಢಿ ಬೆಲೆಯು ದತ್ತ ಪ್ರಾಪ್ತಾಂಕಗಳಲ್ಲಿ ಅತೀ ಹೆಚ್ಚು ಸಲ ಇರುವ ಮೌಲ್ಯವಾಗಿದೆ. ಬಹುಲಕವು ಗರಿಷ್ಠ ಆವೃತ್ತಿಯನ್ನು ಹೊಂದಿರುವ ಪ್ರಾಪ್ತಾಂಕವಾಗಿದೆ. ಇದಲ್ಲದೇ ನಾವು ವರ್ಗೀಕೃತ ದತ್ತಾಂಶಗಳ ಬಹುಲಕವನ್ನು ಕಂಡು ಹಿಡಿಯುವ ವಿಧಾನವನ್ನು ಚರ್ಚಿಸೋಣ. ಒದಕ್ಕಿಂತ ಹೆಚ್ಚಿನ ಪ್ರಾಪ್ತಾಂಕಗಳು ಒಂದೇ ಸಮನಾದ ಗರಿಷ್ಠ ಆವೃತ್ತಿಯನ್ನು ಹೊಂದಿರಲು ಸಾಧ್ಯವಿದೆ. ಇಂತಹ ಸಂದರ್ಭಗಳಲ್ಲಿ ದತ್ತಾಂಶಗಳನ್ನು ಬಹುಲಕವುಳ್ಳ ದತ್ತಾಂಶಗಳು ಎನ್ನುತ್ತಾರೆ. ವರ್ಗೀಕೃತ ದತ್ತಾಂಶಗಳು ಬಹುಲಕವುಳ್ಳದ್ದಾಗಿದ್ದರೂ ನಾವು ಏಕ ಬಹುಲಕ ಸಮಸ್ಯೆಗಳಿಗೆ ಮಾತ್ರ ಸೀಮಿತಗೊಳ್ಳೋಣ.

ವರ್ಗೀಕೃತ ಆವೃತ್ತಿ ವಿತರಣೆಯಲ್ಲಿ ಆವೃತ್ತಿಗಳನ್ನು ನೋಡಿ ಬಹುಲಕವನ್ನು ನಿರ್ಧರಿಸಲು ಸಾಧ್ಯವಿಲ್ಲ. ಇಲ್ಲಿ ಗರಿಷ್ಠ ಆವೃತ್ತಿಯಿರುವ ವರ್ಗಾಂತರವನ್ನು ಬಹುಲಕವಿರುವ ವರ್ಗಾಂತರ ಎಂದು ಗುರುತಿಸಲು ಮಾತ್ರ ಸಾಧ್ಯ. ಬಹುಲಕವು ಬಹುಲಕವಿರುವ ವರ್ಗಾಂತರದಲ್ಲಿರುವ ಮೌಲ್ಯವಾಗಿದ್ದು, ಅದರ ಸೂತ್ರವನ್ನು ಇಲ್ಲಿ ನೀಡಿದೆ.

$$\text{ಬಹುಲಕ} = l + \left[\frac{f_1 - f_0}{2f_1 - f_0 - f_2}\right] \times h$$

ಇಲ್ಲಿ l = ಬಹುಲಕವಿರುವ ವರ್ಗಾಂತರ ಕೆಳಮಿತಿ
h = ವರ್ಗಾಂತರದ ಗಾತ್ರ
f1 = ಬಹುಲಕವಿರುವ ವರ್ಗಾಂತರದ ಆವೃತ್ತಿ
f0 = ಬಹುಲಕವಿರುವ ವರ್ಗಾಂತರದ ಹಿಂದಿನ ವರ್ಗಾಂತರದ ಆವೃತ್ತಿ
f2 = ಬಹುಲಕವಿರುವ ವರ್ಗಾಂತರದ ಮುಂದಿನ ವರ್ಗಾಂತರದ ಆವೃತ್ತಿ.

(ಮುಂದುವರಿಯಬಹುದು)

ಪ್ರಜಾವಾಣಿ ನೋಡಿಯೊ
ಹತ್ತನೇ ತರಗತಿ ಇಂಗ್ಲಿಷ್ ಮಾಧ್ಯಮದ ಗಣಿತಶಾಸ್ತ್ರ ವಿಭಾಗದ 'ಸ್ಟ್ಯಾಟಿಸ್ಟಿಕ್ಸ್ ಮೀನ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3avaa6N

ಒಂದು ಅದಿಶದಿಂದ ಸದಿಶದ ಗುಣಾಕಾರ

ಗಣಿತ

ದ್ವಿತೀಯ ಪಿಯುಸಿ

$\vec{a}$ ಒಂದು ಸದಿಶವಾಗಿದ್ದು λ ಒಂದು ಅದಿಶವಾಗಿರಲಿ. ಆಗ $\lambda \vec{a}$ ಸದಿಶವನ್ನು ಅದಿಶ λ ದಿಂದ ಸದಿಶ $\vec{a}$ನ ಗುಣಾಕಾರವೆಂದು ಹೇಳುತ್ತೇವೆ. $\lambda \vec{a}$ ಒಂದು ಸದಿಶವಾಗಿದ್ದು $\vec{a}$ ಸದಿಶದೊಂದಿಗೆ ಏಕರೇಖಸ್ಥವಾಗಿದ್ದು $\vec{a}$ ಸದಿಶದ ದಿಕ್ಕಿನಲ್ಲಿ ಇರುತ್ತದೆ. ಇದು λ ದ ಧನಾತ್ಮಕ ಅಥವಾ ಋಣಾತ್ಮಕ ಬೆಲೆಯ ಮೇಲೆ ಅವಲಂಬಿತವಾಗಿರುತ್ತದೆ. ಪರಿಮಾಣ $\lambda \vec{a}$ ಸದಿಶದ $\vec{a}$ ಪರಿಮಾಣದ $|\lambda|$ ರಷ್ಟು ಇರುತ್ತದೆ.

$$|\lambda\vec{a}| = |\lambda| |\vec{a}|$$

$$\lambda = -1 \text{ ಆದಾಗ } \lambda a' = -a'$$

ಸದಿಶವು ಪರಿಮಾಣದಲ್ಲಿ ಸದಿಶ $\vec{a}$ ಪರಿಮಾಣಕ್ಕೆ ಸಮವಾದ $\vec{a}$ ಸದಿಶದ ದಿಕ್ಕಿನಲ್ಲಿ ವಿರುದ್ಧ ದಿಕ್ಕಿನಲ್ಲಿರುತ್ತದೆ.

ಸದಿಶ $-\vec{a}$ ನ್ನು $\vec{a}$ ಸದಿಶದ ಋಣ ಸದಿಶ ಎಂದು ಹೇಳುತ್ತೇವೆ.

$\vec{a} + (-\vec{a}) = (-\vec{a}) + \vec{a} = \vec{0}$ ಹಾಗೂ $\lambda = \frac{1}{|\vec{a}|}$ ಆದರೆ

$\vec{a} \neq 0$ ಮತ್ತು $\vec{a}$ಶೂನ್ಯ

ಸದಿಶವಲ್ಲದಿದ್ದರೆ ಆಗ

$$|\lambda\vec{a}| = \lambda|\vec{a}| = \frac{1}{|\vec{a}|}|\vec{a}| = 1$$

ಆದರಿಂದ $\lambda\vec{a}$, $\vec{a}$ ಸದಿಶದ ದಿಕ್ಕಿನಲ್ಲಿರುವ ಏಕ ಸದಿಶ ಮತ್ತು ಇದನ್ನು $\hat{a} = \frac{\vec{a}}{|\vec{a}|}$ ಎಂದು ಬರೆಯುತ್ತೇವೆ.

ಸದಿಶ ಘಟಕಗಳು

A(1,0.0), B (0,1,0) ಮತ್ತು C(0,0,1) ಕ್ರಮವಾಗಿX,Y ಮತ್ತು Z ಅಕ್ಷರಗಳ ಮೇಲಿರುವ ಬಿಂದುಗಳಾದರೆ ಸದಿಶಗಳಾದ ಮತ್ತು ಗಳ ಪರಿಮಾಣ 1 ಆಗಿದ್ದು ಇವು ಕ್ರಮವಾಗಿ OX,OY ಮತ್ತು OZ ಅಕ್ಷಗಳ ದಿಕ್ಕಿನಲ್ಲಿದ್ದು ಇವುಗಳನ್ನು ಏಕ ಸದಿಶಗಳೆಂದು ಕರೆಯುತ್ತೇವೆ.



ಈ ಏಕ ಸದಿಶಗಳನ್ನು i,j ಮತ್ತು k ಎಂದು ಸೂಚಿಸಲಾಗುತ್ತದೆ. ಈಗ ಸದಿಶ ಬಿಂದುವಿನ ಸ್ಥಾನ ಸದಿಶವಾಗಿರಲಿ. ಆದ್ದರಿಂದ p ಬಿಂದುವಿನ ಸ್ಥಾನ ಸದಿಶ ಕೇಂದ್ರ ಬಿಂದುವಿನೊAದಿಗೆ $\vec{op} = xi + yj + zk$ ಇಲ್ಲಿ xi, yj ಮತ್ತು zk ಯನ್ನು ಸದಿಶದ ಘಟಕಗಳೆಂದು ಕರೆಯುತ್ತಾರೆ.

$\vec{a}$ ಮತ್ತು $\vec{b}$ ಎಂಬುದು ಘಟಕ ಸದಿಶಗಳಾಗಿದ್ದು ಕ್ರಮವಾಗಿ $a_1\hat{i} + a_2\hat{j} + a_3\hat{k}$ ಮತ್ತು $b_1\hat{i} + b_2\hat{j} + b_3\hat{k}$ ಆದರೆ

$$\vec{a} + \vec{b} = (a_1 + b_1)\hat{i} + (a_2 - +b_2)\hat{j} + (a_3 + b_3)\hat{k}$$

$$\vec{a} = \vec{b} = (a_1 - b_1)\hat{i} + (a_2 - b_2)\hat{j} + (a_3 - b_3)\hat{k}$$

$\vec{a} = \vec{b}$ ಆದರೆ $a_1 = b_1$, $a_2 = b_2$ ಮತ್ತು $a_3 = b_3$ ಆಗುತ್ತದೆ

ಉದಾಹರಣೆ: $\vec{a} = 2\hat{i} + 3\hat{j} + \hat{k}$ ಆದರೆ $\vec{a}$ ಸದಿಶದ ದಿಕ್ಕಿನಲ್ಲಿರುವ ಏಕ ಸದಿಶವನ್ನು ಕಂಡು ಹಿಡಿಯಿರಿ.

ಪರಿಹಾರ: ದತ್ತ $\vec{a} = 2i + 3j + k$

$$|\vec{a}| = \sqrt{2^2 + 2^2 + 1^2} = \sqrt{14}$$

ಸದಿಶ $\vec{a}$ ದಿಕ್ಕಿನಲ್ಲಿರುವ ಏಕ ಸದಿಶ $\hat{a} = \frac{\vec{a}}{|\vec{a}|}$

$$= \frac{1}{\sqrt{14}}(2\hat{i} + 3\hat{j} + \hat{k}) \qquad = \frac{2}{\sqrt{14}}\hat{i} + \frac{3}{\sqrt{14}}\hat{j} + \frac{1}{\sqrt{14}}\hat{k}$$

ಎರಡು ಬಿಂದುಗಳನ್ನು ಸೇರಿಸುವ ಸದಿಶ



p1(x1,y1,z1) ಮತ್ತು p2(x2,y2,z2) ಎರಡು ಬಿಂದುಗಳಾದ p1 ಮತ್ತು p2 ಬಿಂದುಗಳನ್ನು ಸೇರಿಸುವ ಸದಿಶ $\vec{p_1p_2}$ ಆಗಿರುತ್ತದೆ. ಸದಿಶಗಳ ನಿಯಮದಂತೆ

$$\vec{p_1p_2} = \vec{op_2} - \vec{op_1}$$

$x_2 - x_1)\hat{i} + (y_2 - y_1)\hat{j} + (z_2 - z_1)k$ ಸದಿಶದ

$p_2| = \sqrt{(x_2 - x_1)^2 + (y_2 - y_1)^2 + (z_2 - z_1)^2}$ ಆಗುವುದು

(ಮುಂದುವರಿಯಬಹುದು)

(ಪಾಠಗಳ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಪ್ರಜಾವಾಣಿ ನೋಡಿಯೊ
ದ್ವಿತೀಯ ಪಿಯುಸಿ ಭೌತಶಾಸ್ತ್ರ ವಿಭಾಗದ 'ವೇವ್ ಆಪ್ಟಿಕ್ಸ್ & ಡಿಫ್ರ್ಯಾಕ್ಷನ್ ಆಫ್ ಲೈಟ್' ಪಾಠವನ್ನು ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://bit.ly/3sFh4MW

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್
ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

ಲೈಂಗಿಕ ರೋಗಗಳು
ಉದ್ರೇಕದ ಸಮಸ್ಯೆ
ಲೈಂಗಿಕ ನಿರಾಸಕ್ತಿ
ನಿದ್ರಾ ಸ್ಖಲನ
ಶೀಘ್ರ ಸ್ಖಲನ
ಲಿಂಗ ಚಿಕ್ಕದಾಗುವುದು
ನರ ದೌರ್ಬಲ್ಯ
ಅವಧಿಗೆ ಮೊದಲೇ ಸ್ಖಲನ
ಆತಂಕ, ದೌರ್ಬಲ್ಯ
ಕಡಿಮೆ ವೀರ್ಯಾಣು
ಮುಷ್ಠಿ ಮೈಥುನದ ಅಡ್ಡಪರಿಣಾಮ
NO SIDE EFFECTS 100% No Side Effects
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ
Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

❦ ಸುಭಾಷಿತ ❦

ನೀವೆಲ್ಲರೂ ಮೊದಲು ನಿಮ್ಮ ಆರೋಗ್ಯದ ಬಗ್ಗೆ ಗಮನ ಹರಿಸಬೇಕು.

–ಸ್ವಾಮಿ ವಿವೇಕಾನಂದ

ಆಡಳಿತದಲ್ಲಿ ರಾಜ್ಯಪಾಲರ ಹಸ್ತಕ್ಷೇಪ ಅನಪೇಕ್ಷಿತ, ಅಸಾಂವಿಧಾನಿಕ

ರಾಜ್ಯದಲ್ಲಿ ಚುನಾಯಿತ ಸರ್ಕಾರವೊಂದು ಅಸ್ತಿತ್ವದಲ್ಲಿ ಇರುವಾಗಲೇ, ಕೋವಿಡ್–19 ಸಾಂಕ್ರಾಮಿಕದ ಪರಿಸ್ಥಿತಿ ಪರಿಶೀಲಿಸಲು ರಾಜ್ಯಪಾಲ ವಜುಭಾಯಿ ವಾಲಾ ಅವರು ಸರ್ವಪಕ್ಷ ಸಭೆ ನಡೆಸಿರುವುದು ಸಂವಿಧಾನದ ಮೂಲ ತತ್ವಗಳ ಉಲ್ಲಂಘನೆ. ದೇಶದ ಒಕ್ಕೂಟ ವ್ಯವಸ್ಥೆಯ ನಿಯಮಗಳಿಗೂ ಇದು ವಿರುದ್ಧ. ಆದರೆ, ಹೀಗೆ ಮಾಡಿದ್ದರ ಹೊಣೆಯನ್ನು ವಾಲಾ ಅವರೊಬ್ಬರ ಮೇಲೆಯೇ ಹೊರಿಸಲಾಗದು. ಇತ್ತೀಚೆಗೆ ನಡೆದ ರಾಜ್ಯಪಾಲರ ಸಮ್ಮೇಳನದಲ್ಲಿ, ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲೇ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಇಂತಹ ಸಭೆ ನಡೆಸುವಂತೆ ರಾಜ್ಯಪಾಲರಿಗೆ ಸೂಚಿಸಿದ್ದರು. ಆದರೆ ಚುನಾಯಿತ ರಾಜ್ಯ ಸರ್ಕಾರದ ಆಡಳಿತದಲ್ಲಿ ರಾಜ್ಯಪಾಲರು ನೇರ ಹಸ್ತಕ್ಷೇಪ ನಡೆಸುವಂತಿಲ್ಲ ಎನ್ನುವುದನ್ನು ಸಂವಿಧಾನದ ಹಲವು ವಿಧಿಗಳು ಸ್ಪಷ್ಟಪಡಿಸಿವೆ. ಸಂವಿಧಾನದ 154ನೇ ವಿಧಿಯು ಸರ್ಕಾರದ ಕಾರ್ಯಾನುಷ್ಠಾನದ ಅಧಿಕಾರವನ್ನು ರಾಜ್ಯಪಾಲರಿಗೆ ನೀಡಿದ್ದರೂ, 'ರಾಜ್ಯ ಸಚಿವ ಸಂಪುಟದ ನೆರವು ಮತ್ತು ಸಲಹೆಯಂತೆ ರಾಜ್ಯಪಾಲರು ಕಾರ್ಯನಿರ್ವಹಿಸಬೇಕು' ಎಂದು 163ನೇ ವಿಧಿಯಲ್ಲಿ ಸ್ಪಷ್ಟಪಡಿಸಲಾಗಿದೆ. ಕೋವಿಡ್–19ರ ಸವಾಲನ್ನು ನಿಭಾಯಿಸುವುದು ರಾಜ್ಯ ಸರ್ಕಾರದ ಹೊಣೆ ಎನ್ನುವುದರಲ್ಲಿ ಎರಡು ಮಾತಿಲ್ಲ. ರಾಜ್ಯಪಾಲರು ಕರೆದ ಸರ್ವಪಕ್ಷ ಸಭೆಯು ಸದುದ್ದೇಶದಿಂದ ಕೂಡಿದ್ದು ಎಂದು ಎಷ್ಟೇ ವಾದಿಸಿದರೂ, ಸಚಿವ ಸಂಪುಟದ ಅಧಿಕಾರದಲ್ಲಿ ಇದು ನೇರ ಹಸ್ತಕ್ಷೇಪ ಎನ್ನದೇ ನಿರ್ವಾಹವಿಲ್ಲ. ಸಚಿವ ಸಂಪುಟದ ಸಲಹೆಗಳಿಗೆ ವ್ಯತಿರಿಕ್ತವಾಗಿ ಅಥವಾ ಹೊರತಾಗಿ ರಾಜ್ಯಪಾಲರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್‌ ಕೂಡಾ ಹಲವು ತೀರ್ಪುಗಳಲ್ಲಿ ಸ್ಪಷ್ಟಪಡಿಸಿದೆ. ಕೋವಿಡ್ ನಿಯಂತ್ರಿಸುವಲ್ಲಿ ರಾಜ್ಯದ ಮುಖ್ಯಮಂತ್ರಿ ಪೂರ್ತಿ ವಿಫಲರಾಗಿದ್ದು, ತನ್ನ ಇತರ ಸಾಂವಿಧಾನಿಕ ಕರ್ತವ್ಯಗಳನ್ನು ನಿರ್ವಹಿಸಲು ಅಸಾಧ್ಯ ಎನ್ನುವ ಪರಿಸ್ಥಿತಿ ಇದ್ದರೆ ಮಾತ್ರ ರಾಜ್ಯಪಾಲರು ಮಧ್ಯಪ್ರವೇಶಿಸಿ ಇಂತಹ ಸಭೆಗಳನ್ನು ನಡೆಸಬಹುದು. ಸಂವಿಧಾನದ 353ನೇ ವಿಧಿಯ ಅನ್ವಯ ತುರ್ತುಪರಿಸ್ಥಿತಿ ಹೇರಿದ್ದರೆ, ರಾಷ್ಟ್ರಪತಿಯ ವಿಶೇಷ ಅನುಮೋದನೆಯಂತೆ ರಾಜ್ಯಪಾಲರು ಸಚಿವ ಸಂಪುಟದ ಸಲಹೆ, ಸೂಚನೆಗಳನ್ನೂ ತಿರಸ್ಕರಿಸಬಹುದು. ಕರ್ನಾಟಕದಲ್ಲಿ ಅಂತಹ ಪರಿಸ್ಥಿತಿ ಇಲ್ಲ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕೋವಿಡ್–19ರಿಂದಾಗಿ ಆಸ್ಪತ್ರೆ ಸೇರಿದ್ದರೂ, ಸಚಿವ ಸಂಪುಟದ ಸದಸ್ಯರ ಜೊತೆಗೆ ಸಂಪರ್ಕ ಇಟ್ಟುಕೊಂಡಿದ್ದು ಆಡಳಿತಾತ್ಮಕ ವಿಷಯಗಳಲ್ಲಿ ಸಲಹೆ–ಸೂಚನೆ ನೀಡುತ್ತಿದ್ದಾರೆ. ಮುಖ್ಯಮಂತ್ರಿ ತಮ್ಮ ಸಾಂವಿಧಾನಿಕ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಪೂರ್ಣ ವಿಫಲರಾಗಿದ್ದಾರೆ ಎಂದು ರಾಜ್ಯಪಾಲರಿಗೆ ಮನವರಿಕೆ ಆಗಿದ್ದರೆ, ಅವರು ಸಂವಿಧಾನದ 356ನೇ ವಿಧಿಯನ್ವಯ ರಾಷ್ಟ್ರಪತಿ ಆಳ್ವಿಕೆಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬಹುದಿತ್ತು. ಇವೆಲ್ಲವನ್ನೂ ಬಿಟ್ಟು ರಾಜ್ಯಪಾಲರು ನೇರವಾಗಿ ತಾವೇ ಅಧ್ಯಕ್ಷತೆ ವಹಿಸಿ ಸರ್ವಪಕ್ಷಗಳ ನಾಯಕರ ಸಭೆ ನಡೆಸಿರುವುದು ಸಂವಿಧಾನದ ವಿಧಿಗಳಿಂದ ಹೊರತಾದ ನಡೆ. ಮುಖ್ಯಮಂತ್ರಿಯವರ ಅಧಿಕಾರದಲ್ಲಿ ರಾಜ್ಯಪಾಲರು ನೇರ ಹಸ್ತಕ್ಷೇಪ ನಡೆಸಿರುವುದು ಅನಪೇಕ್ಷಿತ ಮತ್ತು ಅಸಾಂವಿಧಾನಿಕ.

ಇಂತಹ ಹಸ್ತಕ್ಷೇಪಕ್ಕೆ ವಿರೋಧ ವ್ಯಕ್ತಪಡಿಸದಿದ್ದರೆ, ಮುಂದೊಂದು ದಿನ ರಾಜ್ಯ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ರಾಜ್ಯಪಾಲರ ಅನಗತ್ಯ ಹಸ್ತಕ್ಷೇಪಗಳು ಹೆಚ್ಚಾಗಿ, ಮುಖ್ಯಮಂತ್ರಿ ಹುದ್ದೆಯೇ ಅಪ್ರಸ್ತುತ ಎನ್ನುವ ವಾತಾವರಣ ನಿರ್ಮಾಣವಾಗಬಹುದು

ಸಂವಿಧಾನದ ವಿಧಿಗಳ ಇಂತಹ ಉಲ್ಲಂಘನೆಯನ್ನು ಎಲ್ಲ ರಾಜಕೀಯ ಪಕ್ಷಗಳೂ ಕಟುವಾಗಿ ವಿರೋಧಿಸಬೇಕಿದೆ. ಸಂವಿಧಾನದ ವಿಧಿ, ಸತ್ಸಂಪ್ರದಾಯ ಮತ್ತು ಪೂರ್ವಪರಂಪರೆಗಳನ್ನು ಉಲ್ಲಂಘಿಸುವ ರಾಜ್ಯಪಾಲರ ಇಂತಹ ನಡೆಗಳಿಗೆ ರಾಜಕೀಯ ಪಕ್ಷಗಳು ಇನ್ನು ಮುಂದೆ ಯಾವುದೇ ಕಾರಣಕ್ಕೂ ಅವಕಾಶ ನೀಡಕೂಡದು. 'ರಾಜ್ಯಪಾಲರು ಸರ್ವಪಕ್ಷ ಸಭೆ ಕರೆದಿರುವುದೇ ಸಂವಿಧಾನಬಾಹಿರ. ಆದರೆ ರಾಜ್ಯಪಾಲರಿಗೆ ಗೌರವ ಕೊಡಬೇಕು ಎಂದು ಈ ಸಭೆಯಲ್ಲಿ ಭಾಗವಹಿಸಿದ್ದೇನೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ. ಹಿರಿಯ ಸಚಿವ ಕೆ.ಎಸ್. ಈಶ್ವರಪ್ಪ ಕೂಡಾ ರಾಜ್ಯಪಾಲರ ನಡೆಯ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. 'ರಾಜ್ಯದಲ್ಲಿ ಚುನಾಯಿತ ಸರ್ಕಾರ ಅಸ್ತಿತ್ವದಲ್ಲಿ ಇರುವಾಗ ರಾಜ್ಯಪಾಲರ ಈ ನಡೆ ಹೊಸ ವ್ಯವಸ್ಥೆಗೆ ನಾಂದಿ ಹಾಡಿದೆ' ಎಂದು ಅವರು ಸೂಕ್ಷ್ಮವಾಗಿ ಎಚ್ಚರಿಸಿದ್ದಾರೆ. ರಾಜ್ಯಪಾಲರ ಇಂತಹ ಹಸ್ತಕ್ಷೇಪಕ್ಕೆ ರಾಜಕೀಯ ಪಕ್ಷಗಳು ನೇರ ವಿರೋಧ ವ್ಯಕ್ತಪಡಿಸದಿದ್ದರೆ, ಮುಂದೊಂದು ದಿನ ರಾಜ್ಯ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ರಾಜ್ಯಪಾಲರ ಅನಗತ್ಯ ಹಸ್ತಕ್ಷೇಪಗಳು ಹೆಚ್ಚಾಗಿ, ಮುಖ್ಯಮಂತ್ರಿ ಹುದ್ದೆಯೇ ಅಪ್ರಸ್ತುತ ಎನ್ನುವ ವಾತಾವರಣ ನಿರ್ಮಾಣವಾಗಬಹುದು. ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳನ್ನು ತನ್ನ ಕೈಗೊಂಬೆಯಂತೆ ಪರಿಗಣಿಸುವುದು ಎಳ್ಳಷ್ಟೂ ಸರಿಯಲ್ಲ. ಹಾಗೆ ನೋಡಿದರೆ, ರಾಜ್ಯಪಾಲರ ಹುದ್ದೆಯೇ ಬ್ರಿಟಿಷ್ ಆಳ್ವಿಕೆಯ ಪಳೆಯುಳಿಕೆ. ಹಲವು ರಾಜ್ಯಗಳಲ್ಲಿ ರಾಜ್ಯಪಾಲರು ಕೇಂದ್ರ ಸರ್ಕಾರದ ಏಜೆಂಟರಂತೆ ವರ್ತಿಸಿ ತಮ್ಮ ಹುದ್ದೆಯ ಘನತೆಯನ್ನು ಮಣ್ಣುಪಾಲು ಮಾಡಿರುವ ಉದಾಹರಣೆಗಳೂ ನಮ್ಮ ಮುಂದಿವೆ. ಚುನಾಯಿತ ಸರ್ಕಾರಗಳ ಮೇಲೆ ಸವಾರಿ ನಡೆಸುವ ಮನೋಭಾವವನ್ನು ರಾಜ್ಯಪಾಲ ಹುದ್ದೆಯಲ್ಲಿ ಇರುವವರು ಕೈಬಿಡಬೇಕು. ರಾಜ್ಯಪಾಲರ ಹುದ್ದೆಯ ಅಗತ್ಯದ ಕುರಿತು ಸಂವಿಧಾನ ತಜ್ಞರು ಮರುಪರಿಶೀಲನೆ ನಡೆಸುವುದಕ್ಕೂ ಇದು ಸಕಾಲ.

ದಿನದ ಟ್ವೀಟ್

ಒಂದೇ ಬೆಲೆ ಇರಲಿ

ಪ್ರತೀ ಡೋಸ್ ಕೋವಿಶೀಲ್ಡ್‌ಗೆ ಕೇಂದ್ರ ಸರ್ಕಾರ ₹ 150 ಪಾವತಿಸುತ್ತದೆ. ಆದರೆ ರಾಜ್ಯ ಸರ್ಕಾರಗಳು ಈಗ ಒಂದು ಡೋಸ್‌ಗೆ ₹ 400 ಪಾವತಿಸಬೇಕು. ಇದು ಸಹಕಾರಿ ಒಕ್ಕೂಟ ವ್ಯವಸ್ಥೆಯಲ್ಲ. ಆರ್ಥಿಕ ಸಂಕಷ್ಟದಿಂದ ಈಗಾಗಲೇ ಬಳಲುತ್ತಿರುವ ರಾಜ್ಯ ಸರ್ಕಾರಗಳ ಮೇಲೆ ಮತ್ತೆ ಬರೆ ಎಳೆಯುವುದು ದೌರ್ಜನ್ಯವಾಗುತ್ತದೆ. 'ಒಂದು ದೇಶ, ಒಂದೇ ಬೆಲೆ' ನಿಗದಿಗೆ ನಾವು ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸುತ್ತೇವೆ.

ಜೈರಾಂ ರಮೇಶ್, ರಾಜ್ಯಸಭಾ ಸದಸ್ಯ, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 22-4-1996

• ಶೀಲಾ ಕೌಲ್ ರಾಜೀನಾಮೆ

ಶಿಮ್ಲಾ, ಏ. 21 (ಯುಎನ್‌ಐ)– ವಸತಿ ಹಗರಣದ ಸಂಬಂಧ ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯದ ಹಿನ್ನೆಲೆಯಲ್ಲಿ, ಹಿಮಾಚಲ ಪ್ರದೇಶದ ರಾಜ್ಯಪಾಲೆ ಆಗಿರುವ ಶೀಲಾ ಕೌಲ್ ಅವರು ತಮ್ಮ ಸ್ಥಾನಕ್ಕೆ ಇಂದು ರಾಜೀನಾಮೆ ನೀಡಿದರು.

ರಾಜೀನಾಮೆ ವಿಷಯವನ್ನು ಅವರು ರಾಷ್ಟ್ರಪತಿ ಡಾ. ಶಂಕರ್ ದಯಾಳ್ ಶರ್ಮಾ ಅವರಿಗೆ ಫ್ಯಾಕ್ಸ್ ಮಾಡುವ ಮೂಲಕ, ಕಳೆದ ಐದು ದಿನಗಳಿಂದ ಇದ್ದ ಅಸ್ಥಿರತೆಗೆ ಇಂದು ಇತಿಶ್ರೀ ಹಾಡಿದ್ದಾರೆ.

• ದೆಹಲಿ ಸ್ಫೋಟ: 17 ಜನರ ಸಾವು

ನವದೆಹಲಿ, ಏ. 21 (ಪಿಟಿಐ, ಯುಎನ್‌ಐ)– ಮಧ್ಯ ದೆಹಲಿಯ ಹೋಟೆಲೊಂದರಲ್ಲಿ ನಿನ್ನೆ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ಸತ್ತವರ ಸಂಖ್ಯೆ 17ಕ್ಕೆ ಏರಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟದಲ್ಲಿ ಗಾಯಗೊಂಡ 30 ಜನರನ್ನು ದೆಹಲಿಯ ವಿವಿಧ ಆಸ್ಪತ್ರೆಗಳಿಗೆ ಸೇರಿಸಲಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 22-4-1971

• ಪಕ್ಷಾಂತರ ಪ್ರವೃತ್ತಿ ರಾಜಕೀಯ ಅಧಃಪತನ, ಅನೈತಿಕತೆಗೆ ಹಾದಿ– ಎಸ್ಸೆನ್

ಬೆಂಗಳೂರು, ಏ. 21– ಒಂದು ಪಕ್ಷವನ್ನು ಸೇರಿ, ಅದರಲ್ಲಿ ತಮಗೆ ಭವಿಷ್ಯವಿಲ್ಲ ಎಂದು ಮತ್ತೊಂದಕ್ಕೆ ಹಾರುವುದು ಅನೈತಿಕತೆ ಹಾಗೂ ರಾಜಕೀಯ ಅಧಃಪತನಕ್ಕೆ ಕಾರಣವಾಗುವುದೆಂದು ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್.ನಿಜಲಿಂಗಪ್ಪನವರು ಇಂದು ಪಕ್ಷಾಂತರ ಪ್ರವೃತ್ತಿಯನ್ನು ಉಗ್ರವಾಗಿ ಖಂಡಿಸಿದರು.

ಮೈಸೂರು ರಾಜ್ಯದಲ್ಲಿ ಸಂಸ್ಥಾ ಕಾಂಗ್ರೆಸ್ಸಿನಿಂದ ಪಕ್ಷಾಂತರಗೊಂಡವರಲ್ಲಿ ಕೆಲವರು ವಾಪಸು ಬರಲು ಷರತ್ತು ಹಾಕಿರುವುದು ತಮಗೆ ತಿಳಿದುಬಂದಿತೆಂದು ವರದಿಗಾರರಿಗೆ ತಿಳಿಸಿದರು.

• ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚನೆ

ಬೆಂಗಳೂರು, ಏ. 21–ಹೆಬ್ಬಾಳದ ಕೃಷಿ ವಿಶ್ವವಿದ್ಯಾಲಯವು ಕನ್ನಡದಲ್ಲಿ ಕೃಷಿ ವಿಜ್ಞಾನ ಸಾಹಿತ್ಯ ರಚಿಸಲು ಉದ್ದೇಶಿಸಿದೆ.

ಕೃಷಿ ವಿದ್ಯಾರ್ಥಿಗಳು ಹಾಗೂ ಪ್ರಗತಿಪರ ಕೃಷಿಕರ ಉಪಯೋಗಕ್ಕಾಗಿ ವ್ಯವಸಾಯ, ಮೀನುಗಾರಿಕೆ ಮುಂತಾದ ವಿಷಯಗಳ ಮೇಲೆ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನು ಇಟ್ಟುಕೊಳ್ಳಲಾಗಿದೆ.

ಹುಡುಗನಿಗೆ ಅಂತರ್ಜಾತಿ, ಹುಡುಗಿಗೆ ಮಾತ್ರ ಸ್ವಜಾತಿ ಎಂಬ ಜಾತಿಮೋಹದ ಕಟ್ಟಲೆ

ಕುಲದ ನೆಲೆಯನೇನಾದರು ಬಲ್ಲಿರಾ?

ವಿಶ್ಲೇಷಣೆ

ಡಾ. ಸಬಿತಾ ಬನ್ನಾಡಿ

'ನೀನು ಬೇಕಿದ್ದರೆ ಅವಳೊಂದಿಗೆ ಸಂಬಂಧ ಇಟ್ಟುಕೋ, ಮದುವೆ ಮಾತ್ರ ನಮ್ಮ ಜಾತಿಯವಳನ್ನೇ ಆಗು' ಎಂದು 'ಮೇಲ್ಜಾತಿ'ಗೆ ಸೇರಿದ ಅಜ್ಜ, ಅಂತರ್ಜಾತಿ ಮದುವೆಯಾಗ ಹೊರಟ ಮೊಮ್ಮಗನಿಗೆ ಮೂವತ್ತು ವರ್ಷದ ಹಿಂದೆ ಕೊಟ್ಟಿದ್ದ ಸಲಹೆ ಇನ್ನೂ ನನ್ನ ಕಿವಿಯಲ್ಲಿ ಅನುರಣಿಸುತ್ತಿದೆ. ಕಾಲ ಬದಲಾಗಿದೆ. ಮನಃಸ್ಥಿತಿ ಬದಲಾಗಿದೆಯೇ? ಜಾತಿ ಶ್ರೇಷ್ಠತೆಯ ಅಹಂ ಮತ್ತು ನಂಬಿಕೆಯನ್ನು ಹೇಗೆಲ್ಲಾ ಉಳಿಸಲು ಪ್ರಯತ್ನಿಸಲಾಗುತ್ತಿದೆಯಲ್ಲವೇ? ಮತ್ತೆ ಮತ್ತೆ ಹಿಂದಕ್ಕೆ ಹೊರಳಿಸುವ ಚಿಂತನೆಗಳು ಮುಂದಕ್ಕೆ ಬರತೊಡಗಿದ್ದು, ಕೆಲವು ವರ್ಷಗಳ ಹಿಂದೆ ಪ್ರೈವೇಟ್ ಆಗಿ ವ್ಯಕ್ತವಾಗುತ್ತಿದ್ದ ಅಭಿಪ್ರಾಯಗಳು ಈಗ ಪಬ್ಲಿಕ್ ಆಗಿ ಪ್ರಕಟವಾಗತೊಡಗಿವೆ.

* * *

ಈಚಿನ ದಿನಗಳಲ್ಲಿ ಕ್ರಿಯೆ ಮತ್ತು ಪ್ರತಿಕ್ರಿಯೆಗಳು ಆಧಿಕ್ಯದಲ್ಲಿ ಬಸವಳಿದಿವೆ. ಯಾವುದೋ ಒಂದು ಹೇಳಿಕೆ, ಘಟನೆಗೆ ಹೆಚ್ಚಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಒಂದೇ ಬಾರಿಗೆ ವಿಪರೀತ ಪ್ರತಿಕ್ರಿಯೆಗಳು ಬರುತ್ತವೆ. ಅದರಲ್ಲಿ ಕೆಲವು ಗಂಭೀರವಾದವೂ ಇರುತ್ತವೆ. ಆದರೆ, ಆ ವಿಷಯದ ಬಗ್ಗೆ ಆಳವಾದ ಕ್ರಿಯೆಯೊಂದು ಜಾರಿಗೆ ಬರುವ ಮೊದಲೇ ಇನ್ನಾವುದೋ ವಿಚಾರ ಮುನ್ನೆಲೆಗೆ ಬರುತ್ತದೆ. ಅಲ್ಲಿಗೆ ಹಿಂದಿನ ವಿಷಯ ಸಂಪೂರ್ಣ ಮೂಲೆಗುಂಪಾಗುತ್ತದೆ. ಹೀಗೆ 'ಮುಟ್ಟಿ ಓಡುವ' ಈ ಪರಿ ಎಷ್ಟೋ ಬಾರಿ ಪೂರ್ವಯೋಜಿತವೂ ಆಗಿದ್ದಿರಬಹುದು.

ಮೇಲ್ನೋಟಕ್ಕೆ ಸಾರಾಸಗಟು ಎಂಬಂತೆ ಕಾಣುವ ಕೆಲವು ಹೇಳಿಕೆಗಳು ಒಟ್ಟು ಸಮೂಹದ ಪ್ರತಿಕ್ರಿಯೆಯ ಮೂಲಕ ಮುಂದಿನ ಹೆಜ್ಜೆ ಇಡಲು ಒಂದು ತಯಾರಿಯೋ ಇಲ್ಲವೇ ಹೆಜ್ಜೆಯ ಜಾಡು ಬದಲಿಸಲು ಬೇಕಾದ ಸಿದ್ಧತೆಯೋ ಆಗಿರುವ ಸಂಭವವೇ ಹೆಚ್ಚು. ಸಮಾಜದಲ್ಲಿ ಕ್ರಿಯಾಶೀಲರಾಗಿರುವ ವ್ಯಕ್ತಿಗಳು ಕ್ರಿಯೆಯೆಡೆಗೆ ಗಮನ ಹರಿಸುವುದಕ್ಕಿಂತ, ಪ್ರತಿಕ್ರಿಯೆಯಲ್ಲೇ ಮುಳುಗಿರುವಂತೆ ಮಾಡುವ ಒಂದು ತಂತ್ರವೂ ಇದಾಗಿರಬಹುದು.

ಕೆಲವು ವಾರಗಳ ಹಿಂದೆ, ಮಠಾಧೀಶರೊಬ್ಬರ 'ಬ್ರಾಹ್ಮಣ ಸಮಾಜದ ಹೆಣ್ಣುಮಕ್ಕಳು ಇತರೆ ಜಾತಿಯವರನ್ನು ವಿವಾಹ ಆಗುವುದನ್ನು ತಡೆಯಲು ಮಾತೃಮಂಡಳಿ ರಚಿಸಬೇಕು' ಎಂಬ ಹೇಳಿಕೆ ಸದ್ದು ಮಾಡಿತು. ಬಳಿಕ, ತಾವು ಹಾಗೆ ಹೇಳಿಲ್ಲ ಎಂದು ಅವರು ಸ್ಪಷ್ಟನೆಯನ್ನೂ ಕೊಟ್ಟರು. ಇದಕ್ಕೆ ಹಲವು ಪ್ರತಿಕ್ರಿಯೆಗಳು ಬಂದು ಈಗದು 'ಹಳೆಯ' ವಿಷಯವಾಗಿದೆ. ಭಾರತದ ರಾಷ್ಟ್ರೀಯ ಚಳವಳಿಯ ಸಂದರ್ಭದಲ್ಲೇ ಹುಟ್ಟಿಕೊಂಡ ಸಾಮಾಜಿಕ ಸುಧಾರಣೆಯ ಸಂದರ್ಭದಲ್ಲಿ ಮುನ್ನೆಲೆಗೆ ಬಂದ ಹಲವು ವಿಷಯಗಳಲ್ಲಿ ಜಾತಿ ವಿನಾಶ ಕೂಡಾ ಪ್ರಮುಖ ಕಾಳಜಿಯಾಗಿತ್ತು. ಮೊದ ಮೊದಲು ಜಾತಿಯ ಬಗೆಗೆ ಸಾಂಪ್ರದಾಯಿಕ ನಂಬಿಕೆ ಇದ್ದ ಗಾಂಧಿಯವರು ಕೊನೆ ಕೊನೆಗೆ ಅಂತರ್ಜಾತಿ ಮದುವೆಗಳಿಗೆ ಮಾತ್ರ ಹೋಗುವುದಾಗಿ ಹೇಳುವಷ್ಟು ಬದಲಾದರು. ಅಂಬೇಡ್ಕರ್, ಲೋಹಿಯಾ ಅವರು ಹೇಳಿದ ಜಾತಿವಿನಾಶದ ಬಗೆಗಿನ ಚಿಂತನೆಗಳು ಬಹುಜನರನ್ನು ಪ್ರಭಾವಿಸಿದವು. ಹಿಂದೂ ಎಂಬ ಧರ್ಮವು ಸಂಘಟಿತವಾಗಬೇಕೆಂದರೆ, ಇದರೊಳಗಿನ ಜಾತಿಭೇದಗಳು ಅಳಿದು ಹೋಗಬೇಕು ಎಂಬ ನಿಲುವೂ ವ್ಯಕ್ತವಾದದ್ದಿದೆ.

'ಹಿಂದೂ ನಾವೆಲ್ಲಾ ಒಂದು' ಎಂಬುದು ಹಿಂದೂ ಸಂಘಟನೆಗಳ ಜನಪ್ರಿಯ ತೋರಿಕೆಯ ಸ್ಲೋಗನ್. ಆದರೆ ವಾಸ್ತವದಲ್ಲಿ ಆಧುನಿಕ ಭಾರತದಲ್ಲಿ ಆಗಿದ್ದೇನು? ಜಾತಿಗಳ ಧ್ರುವೀಕರಣವೇ ಮುನ್ನೆಲೆಗೆ ಬಂದಿತು. ನಮ್ಮೆಲ್ಲಾ ಆಧುನಿಕತೆಗಳು ಕೇವಲ ಬಾಹ್ಯದ ವೇಷಭೂಷಣ, ನುಡಿಯ ಒನಪು, ನಡವಳಿಕೆಯ ಒಯ್ಯಾರ, ತಾಂತ್ರಿಕ ಸಲಕರಣೆಗಳ ಬಳಕೆ ಮೊದಲಾದವುಗಳಿಗೆ ಸೀಮಿತವಾದವೇ ಹೊರತು ಚಿಂತನೆ, ವಿಚಾರಗಳ ಆಳವಾಗಲೀ ಔನ್ನತ್ಯವಾಗಲೀ ಆದರ್ಶವಾಗಿ ಮುಂದಕ್ಕೆ ಬರಲಿಲ್ಲ. ಜಾತಿಯ ಜೊತೆಗೇ ಜಾತಿಯೊಳಗಿನ ಆಚರಣೆಗಳಲ್ಲಿ ಗಂಡುಪ್ರಧಾನ ಆಲೋಚನೆಗಳು ಹಾಸುಹೊಕ್ಕಾಗಿ ಮುಂದುವರಿದುಕೊಂಡು ಬಂದವು.

ತಂತ್ರಜ್ಞಾನದ ಬಳಕೆಯ ದುರುಪಯೋಗದ ಪರಿಣಾಮವಾಗಿ ಪಂಜಾಬ್, ಹರಿಯಾಣದಂತಹ ರಾಜ್ಯಗಳಲ್ಲಿ ಸ್ತ್ರೀಭ್ರೂಣ ಹತ್ಯೆಗಳು ಅವ್ಯಾಹತವಾಗಿ ನಡೆದು ಮದುವೆಗೆ ಹುಡುಗಿ ಸಿಗದ ಸ್ಥಿತಿ ಇದೆ. ಇನ್ನೊಂದೆಡೆ ಕೆಲವು ನಿರ್ದಿಷ್ಟ ಜಾತಿಗಳಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆಯಾದದ್ದರಿಂದಾಗಿ, ಆ ಹೆಣ್ಣುಮಕ್ಕಳಿಗೆ ವಿವಾಹದಲ್ಲಿ ಆಯ್ಕೆ ದೊರಕಿತು. ಆ ಸಂದರ್ಭದಲ್ಲಿ ಕೆಲವು ವೃತ್ತಿಗಳನ್ನು ಆಯ್ದುಕೊಂಡ ಹುಡುಗರಿಗೆ ಆರ್ಥಿಕ ಸುಸ್ಥಿತಿ ಇದ್ದಾಗಲೂ ವಧು ಸಿಗುವುದು ಕಷ್ಟವಾಗತೊಡಗಿತು. ಕರ್ನಾಟಕದಲ್ಲಿ ಕೆಲವು ಬ್ರಾಹ್ಮಣ ಉಪಪಂಗಡಗಳು ಇಂತಹ ಸಮಸ್ಯೆ ಎದುರಿಸಿದವು. ಒಂದು ಕಾಲದಲ್ಲಿ ಇವರಲ್ಲಿ ಎಷ್ಟೋ ಬಡ ಕುಟುಂಬದ ಹೆಣ್ಣುಮಕ್ಕಳಿಗೆ ವರದಕ್ಷಿಣೆ ಕೊಡಲಾಗದೆ ಮದುವೆಯೇ ಇಲ್ಲದೆ ಉಳಿದಿದ್ದೂ ಇದೆ. ಇನ್ನು ವಿಧವೆಯರಿಗಂತೂ ಮರು ಮದುವೆಯ ಅವಕಾಶವೇ ಇದ್ದಿರಲಿಲ್ಲ.

ಬದಲಾದ ಕಾಲದಲ್ಲಿ ಎಲ್ಲವೂ ಏರುಪೇರಾಗಿವೆ. ವಿಧವೆ, ವಿಚ್ಛೇದಿತೆಯರಿಗೆ ಈಗ ಮದುವೆ ಸಮಸ್ಯೆ ಇಲ್ಲ. ಆದರೆ ಹುಡುಗರಿಗೆ ಮಾತ್ರ ಹುಡುಗಿ ಸಿಕ್ಕರೆ ಸಾಕು ಎಂಬ ಪರಿಸ್ಥಿತಿ ಉದ್ಭವಿಸಿದೆ. ಇಲ್ಲೇ ಇರುವುದು ಕುತೂಹಲದ ತಿರುವು! ಮೊದಮೊದಲು ಸಸ್ಯಾಹಾರಿಗಳಾದ ಬೇರೆ ಜಾತಿಯ ಬಡಹುಡುಗಿಯರನ್ನು, ಜಾತಿಯೇ ಗೊತ್ತಿಲ್ಲದ ಅನಾಥಾಶ್ರಮದವರನ್ನು ಮದುವೆಯಾಗ ತೊಡಗಿದರು. ಆ ನಂತರದಲ್ಲಿ ಯಾವುದೇ ಜಾತಿಯ ಹುಡುಗಿಯಾದರೂ ಪರವಾಗಿಲ್ಲ ಎಂಬ ರಾಜಿಗೆ ತಯಾರಾದರು. ಕೆಲವೆಡೆ, ಮಾಂಸಾಹಾರಿಗಳಾದರೂ, ಹೆಣ್ಣುಕೊಡಲೊಪ್ಪಿದರೆ ಹುಡುಗಿಯ ತವರಿನವರಿಗೆ ಮನೆ ಕಟ್ಟಿಸಿಕೊಡುವ, ಧನಸಹಾಯ ಮಾಡುವ ಹೆಜ್ಜೆಗಳನ್ನೂ ಇಡಲಾಗಿದೆ.

ಹೀಗೆ ಹೆಣ್ಣುಕೊಟ್ಟು ಉಪಕರಿಸಿದ್ದರೂ, ಈ ಹುಡುಗಿಯರನ್ನು ಶುದ್ಧೀಕರಿಸಿ ತಂದುಕೊಳ್ಳಲಾಗುವುದಂತೆ ಹಾಗೂ ಅವರು ಗಂಡನ ಮನೆಯಿಂದ ಹೊರಗೆ ಮಾತ್ರ ಮಾಂಸಾಹಾರ ಸೇವಿಸಬಹುದಂತೆ. ಮತ್ತಿಲ್ಲಿ ಜಾತಿ ಎಂಬ ಅಹಮ್ಮನ್ನು ಮೀರಲಾರದ ಸಣ್ಣತನವಿದೆ. ಅಂದರೆ, ಇದ್ಯಾವುದೂ ಜಾತಿಯಲ್ಲಿ ನಂಬಿಕೆ ಇಲ್ಲದೇ ಮಾಡಿದ್ದಲ್ಲ. ಇದೆಲ್ಲವೂ ಅನುಕೂಲ ಶಾಸ್ತ್ರ ಅಷ್ಟೇ.

ಇದರ ಹಿಂದೆ ಕೆಲಸ ಮಾಡುವುದು ಬೀಜ ಕ್ಷೇತ್ರ ನ್ಯಾಯ. ಆ ಪ್ರಕಾರ, ಹೆಣ್ಣು ಕ್ಷೇತ್ರವಾಗಿದ್ದು ಅವಳು ಸ್ವೀಕರಿಸುವ ನೆಲೆಯಲ್ಲಿರುವವಳು. ಬಿತ್ತಿ ಬೆಳೆಯುವ ಗಂಡು ವಂಶದ ಮೇಲೆ ಹಕ್ಕು ಸಾಧಿಸುತ್ತಾನೆ. ಅವನೇ ಶ್ರೇಷ್ಠ ಎಂಬ ಗಂಡುಪ್ರಧಾನ ನೆಲೆಯ ಮನಃಸ್ಥಿತಿ ಇಲ್ಲಿ ಕೆಲಸ ಮಾಡುತ್ತದೆ. ಹೀಗೆ ಭಾವಿಸುವುದರ ಮೂಲಕ ಬೀಜ ಮತ್ತು ಕ್ಷೇತ್ರಕ್ಕೆ ಇರುವ ಸಮಾನ ಅಸ್ತಿತ್ವವನ್ನು ನಿರಾಕರಿಸಲಾಗುತ್ತದೆ. ಆದರೆ, 'ಮೇಲ್ಜಾತಿ'ಯ ಮನಃಸ್ಥಿತಿಯಲ್ಲಿ ಇನ್ನೂ ಒಂದು ವಿಪರ್ಯಾಸ ಇದೆ. ಅದೆಂದರೆ, ಇದೇ ನ್ಯಾಯವನ್ನು ಎಲ್ಲಾ ಸಂದರ್ಭದಲ್ಲೂ ಪುರಸ್ಕರಿಸುವುದಿಲ್ಲ. ಕೇವಲ ತನ್ನದಲ್ಲದ ಜಾತಿಯ ಹೆಣ್ಣುಮಕ್ಕಳಿಗೆ ಮಾತ್ರ ಈ ನಿಲುವು.

ಹುಡುಗನು ಅನಿವಾರ್ಯ ಸಂದರ್ಭದಲ್ಲಿ ಯಾವ ಜಾತಿಯ ಹುಡುಗಿಯನ್ನಾದರೂ ಮದುವೆಯಾಗಬಹುದು. ಆತ ಅಗ್ನಿಯಂತೆ. ಅವನ ಸಂಸರ್ಗಕ್ಕೆ ಬಂದ ಹುಡುಗಿ ಆ ಅಗ್ನಿಯಲ್ಲಿ ಬೆಂದು ಶುದ್ಧಳಾಗಿ ಬಿಡುತ್ತಾಳೆ ಎಂದು ನಂಬಿಸಲಾಗಿದೆ. ಅದೇ ಮೇಲ್ಜಾತಿ ಎಂದು ಭಾವಿಸಲಾದ ಜಾತಿಯ ಹುಡುಗಿ ಮಾತ್ರ ಬೇರೆ ಜಾತಿಯ ಹುಡುಗರನ್ನು ಮದುವೆಯಾಗಬಾರದು ಎಂದು ನಿರ್ಬಂಧಿಸಲಾಗುತ್ತದೆ. ಆಗ ಆಕೆ ಕೆಳಗಿನ ಮೆಟ್ಟಿಲಿಗೆ ಇಳಿದಂತೆ ಎಂದೇ ಭಾವಿಸಲಾಗುತ್ತದೆ. ಈ ನಿರ್ಬಂಧವು ಹುಡುಗಿಯರ ಕೊರತೆ ಇದ್ದಾಗ ಮಾತ್ರವಲ್ಲ, ಅವರಿಗೆ ಜಾತಿಯಲ್ಲಿ ಗಂಡು ಸಿಗದಿದ್ದಾಗಲೂ ಇತ್ತು. ಇದರ ಹಿಂದಿರುವುದು ಜಾತಿ ಶ್ರೇಷ್ಠತೆಯ ಮನಃಸ್ಥಿತಿ. ಮಠಾಧೀಶರೊಬ್ಬರ ಹೇಳಿಕೆಯ ಹಿಂದೆ ವಧುಗಳ ಕೊರತೆಯೇ ನಿಜವಾದ ಕಾರಣ ಎಂದಾದರೆ, ಅದಕ್ಕೆ ಅತಿ ಸರಳ ಪರಿಹಾರವಿದೆ. ಅದೆಂದರೆ, ಜಾತಿಗೂ ಮದುವೆಗೂ ಇರುವ ಕೃತಕ ಸಂಬಂಧವನ್ನು ಕಿತ್ತು ಹಾಕುವುದು. ಆಗ ಹುಡುಗನಿಗೆ ಹುಡುಗಿ ಸಿಗದ, ಹುಡುಗಿಗೆ ಹುಡುಗ ಸಿಗದ ಎಲ್ಲರ ಸಮಸ್ಯೆಗೂ ಒಂದು ಹಂತದ ಪರಿಹಾರವಂತೂ ಸಿಕ್ಕೇ ಸಿಗುತ್ತದೆ.

ಗಂಡಿಗೊಂದು, ಹೆಣ್ಣಿಗೊಂದು ನೀತಿ ಮಾಡಿ ಅದನ್ನೇ ಸ್ಥಾಪಿಸುವ ಹಿಂಪಯಣಕ್ಕಿಂತ, ಈ ಮುಂಪಯಣದ ದಿಟ್ಟ ಹೆಜ್ಜೆಯನ್ನು ನಿರೀಕ್ಷಿಸಬಹುದೇ? ನಿರೀಕ್ಷೆ ಅಸಾಧ್ಯ. ಕೇವಲ ಪ್ರತಿಕ್ರಿಯೆ ಅಪ್ರಯೋಜಕ. ಸುಧಾರಣಾವಾದ ಮತ್ತೊಮ್ಮೆ ಮುನ್ನೆಲೆಗೆ ಬಂದು ಲಿಂಗಭೇದ ಹಾಗೂ ಜಾತಿ ಶ್ರೇಣೀಕರಣದ ವಂಚನೆಗಳ ಬಗೆಗೆ ಸದಾ ಜಾಗೃತಿ ಮೂಡಿಸುವುದೊಂದೇ ಉಳಿದಿರುವ ದಾರಿ.

ಚುರುಮುರಿ



ಕೊರೊನಾ ಕಲ್ಯಾಣ

• ಸಿ.ಎನ್.ರಾಜು

'ನಮ್ಮ ಮಗಳ ಮದುವೆ ಫಿಕ್ಸ್ ಆಯ್ತು...' ಎನ್ನುತ್ತಾ ಬಂದಳು ಪದ್ಮಾ.

'ಸಂತೋಷದ ವಿಚಾರ...' ಎಂದು ಅನು ಕೊರೊನಾ ಸ್ಪೆಷಲ್ ಕಾಫಿ ತಂದುಕೊಟ್ಟಳು.

'ಸರ್ಕಾರಿ ಸಂಪ್ರದಾಯದಂತೆ ಮದುವೆ ಶಾಸ್ತ್ರಗಳನ್ನು ಮಾಡ್ತೀವಿ. ಮಾಸ್ಕ್, ಸ್ಯಾನಿಟೈಸರ್, ಪರಸ್ಪರ ಅಂತರ ಪಾಲಿಸ್ತೀವಿ...'

'ಮಂತ್ರ ಹೇಳೋರು, ವಾಲಗ ಊದೋರೂ ಮಾಸ್ಕ್ ಹಾಕಿಕೊಳ್ತಾರಾ?' ಕೇಳಿದ ಗಿರಿ.

'ಹೌದು ಹಾಕಿಕೊಳ್ಳಲೇಬೇಕು'.

'ಇನ್ವಿಟೇಷನ್ ಹಂಚಿದ್ದು ಮುಗೀತಾ?'

'ಕೊರೊನಾ ಕೃಪೆಯಿಂದ ಇನ್ವಿಟೇಷನ್ ಖರ್ಚು ಉಳಿದಿದೆ. ಮದುವೆ ಕರೆಯೋಲೆಗಿಂತ ಸರ್ಕಾರದ ಸುತ್ತೋಲೆ ಮುಖ್ಯ. ಸರ್ಕಾರ ಹೇಳಿದಷ್ಟು ಜನರನ್ನು ಮಾತ್ರ ಮದ್ವೆಗೆ ಇನ್‌ವೈಟ್ ಮಾಡ್ತೀವಿ' ಎಂದಳು ಪದ್ಮಾ.

'ಹೀಗೆ ಮಾಡೋದ್ರಿಂದ ಕರೀದೆ ಇದ್ದವ್ರಿಗೆ ಬೇಜಾರಾಗೋದಿಲ್ವೇ?' ಅನು ಕೇಳಿದಳು.

'ಹೌದೂರೀ, ಮಗಳ ಮದ್ವೆಯನ್ನು ಡಿಸ್ಟಿಂಕ್ಷನ್‌ನಲ್ಲಿ ಮಾಡಬೇಕೂಂತ ನಮಗೂ ಆಸೆ ಇತ್ತು, ಏನು ಮಾಡೋದು, ಕೊರೊನಾ ಕಾಟದಲ್ಲಿ ಮದ್ವೆ ಜಸ್ಟ್ ಪಾಸ್ ಆದ್ರೆ ಸಾಕಾಗಿದೆ...' ಪದ್ಮಾಳಿಗೂ ಬೇಸರ.

'ನಿಮ್ಮದು ದೊಡ್ಡ ಬಳಗ. ಕೆಲವೇ ಜನರನ್ನು ಕರೆದ್ರೆ, ಉಳಿದವರನ್ನ ಹೇಗೆ ನಿಭಾಯಿಸ್ತೀರಿ?'

'ಪ್ಲಾನ್ ಮಾಡಿದ್ದೀವಿ. ಅಡುಗೆಯವರು, ವಾಲಗದವರು, ಪುರೋಹಿತರು, ಹೂವಿನವರು, ಸ್ಟೇಜ್ ಅಲಂಕಾರ ಮಾಡೋರು, ಫೋಟೊ, ವಿಡಿಯೊದವರು, ಜೊತೆಗೆ ವಧು-ವರರ ಹೆತ್ತವರು, ಒಡಹುಟ್ಟಿದವರು, ವಧುವಿಗೆ ಟಚಪ್ ಮಾಡುವ ಆಕೆಯ ಕ್ಲಾಸ್‌ಮೇಟ್‌ಗಳು, ವರನಿಗೆ ಬೆಂಗಾವಲಾಗುವ ಅವನ ಕ್ಲಾಸ್ ದೋಸ್ತಿಗಳು ಇವರಿಗೆಲ್ಲಾ ಮೊದಲ ಪ್ರಿಫರೆನ್ಸ್. ಇನ್ನೂ ಉಳಿದರೆ ಮಾತ್ರ ಬೇರೆಯವರನ್ನು ಕರಿತೀವಿ'.

ಛೇ, ಎಂಥಾ ಗತಿ ಬಂತೂರೀ...' ಅನು ಲೊಚಗುಟ್ಟಿದಳು.

'ಹತ್ತಿರದ ಬಳಗದವರೇ 50 ಜನ ಆಗಿಬಿಟ್ರೆ ನಿಮ್ಮನ್ನ ಕರೆಯೋಕ್ಕೆ ಆಗಲ್ಲಾರೀ... ಮದ್ವೇನ ಫೇಸ್‌ಬುಕ್ ಲೈವ್ ಮಾಡ್ತೀವಿ, ನೋಡಿ ಲೈಕು, ಕಮೆಂಟ್ ಮಾಡಿ...' ಎಂದು ಹೊರಟಳು ಪದ್ಮಾ.

ಸಂಗತ

ಇರುವುದೊಂದೆ ಇಳೆ ಕಾಣಾ...

ಇಂದು ಭೂಮಿ ದಿನ. ಮನೆ ಮಂದಿಯೆಲ್ಲ ಸೇರಿ ಸಡಗರಿಸಬೇಕಾದ ಸಂದರ್ಭ

• ಬಿ.ಎಸ್.ಭಗವಾನ್

ಬಾಡಿಗೆ ಮನೆ ಬಿಡುವಾಗ ಅದರ ಮಾಲೀಕ ಸಣ್ಣಪುಟ್ಟ ರಿಪೇರಿ ಮಾಡಿಸಿ, ಮೊದಲಿದ್ದಂತೆ ಮನೆ ನಾಜೂಕಾಗಿಸಿ ಹೋಗಿ ಅಂತ ತಾಕೀತು ಮಾಡುವುದಿದೆ. ಮುಂದೆ ಬಾಡಿಗೆಗೆ ಬರುವವರಿಗೆ ಬರುತ್ತಲೇ ಮುಜುಗರವಾಗಬಾರದು, ಅವರೂ ತಂಗಿರುವಷ್ಟು ಕಾಲ ಕನಿಷ್ಠತಮ ಅಂದ ಚಂದ, ಅಚ್ಚುಕಟ್ಟುತನ ಆಸ್ವಾದಿಸಬೇಕೆನ್ನುವುದು ಉದ್ದೇಶ. ಹೇಗೂ ಭೂಮಿ ನಮ್ಮ ಬಾಡಿಗೆ ಮನೆ! ಭಾವೀ ಪೀಳಿಗೆಯವರು ನಮ್ಮ ನಂತರದ ಬಾಡಿಗೆದಾರರು. ಜಗತ್ತಿನ 192 ದೇಶಗಳು ಒಗ್ಗೂಡಿ 'ಭೂಮಿ ದಿನ ಜಾಲ'ದ (earth day network) ಅಡಿಯಲ್ಲಿ ಪ್ರತಿವರ್ಷ ಏಪ್ರಿಲ್ 22ರಂದು 'ಜಾಗತಿಕ ಭೂಮಿ ದಿನ' ಹಮ್ಮಿಕೊಳ್ಳುತ್ತವೆ.

'ಭೂಮಿ ದಿನ' ಆಚರಣೆಯ ಕಥೆ ರೋಚಕ. ಇಸವಿ 1962. ಅಮೆರಿಕದ ವಿಸ್ಕಾನ್‌ಸಿನ್ ಪ್ರಾಂತ್ಯದ ಸೆನೆಟರ್ ಆಗಿದ್ದ ಗೆಲಾರ್ಡ್ ನೆಲ್ಸನ್ ರಾಜಕಾರಣಿಗಿಂತಲೂ ಮೂಲತಃ ಸಮರ್ಥ ಪರಿಸರವಾದಿ. ಭೂಗ್ರಹ ಅತೀವ ಮಾಲಿನ್ಯಕ್ಕೊಳಪಡುತ್ತಿದೆ ಎಂಬ ತಥ್ಯವನ್ನು ಅಮೆರಿಕ ಸರ್ಕಾರದ ಗಮನಕ್ಕೆ ತಂದರು. 1969ರಲ್ಲಿ ಸಿಯಾಟಲ್‌ನಲ್ಲಿ ನಡೆದ ಪರಿಸರ ರಕ್ಷಣೆ ಕುರಿತ ಸಮ್ಮೇಳನದಲ್ಲಿ ನೆಲ್ಸನ್ ಮಂಡಿಸಿದ ವಿಚಾರಧಾರೆಗಳು ವಿಶ್ವಮಟ್ಟದ ವಿಜ್ಞಾನಿಗಳನ್ನೂ ಪ್ರಭಾವಿಸಿದವು. ವರ್ಷಕ್ಕೊಂದು ದಿನವಾದರೂ ಗಂಭೀರವಾಗಿ ಭೂಮಿಯ ಹಿರಿಮೆ, ಅದನ್ನು ಜೋಪಾನ ಮಾಡುವ ಬಗ್ಗೆ ಚಿಂತಿಸೋಣ ಎಂದವರು ಸಲಹೆಯಿತ್ತರು. ಹಾಗಾಗಿ ಏಪ್ರಿಲ್ 22 ಭೂಮಿ ದಿನವಾಯಿತು. 1970ರಿಂದಲೂ ನಮ್ಮ ಭೂಮಿಯ ಅನನ್ಯತೆ, ಅದರ ಅಚ್ಚರಿಯ ಜೀವವೈವಿಧ್ಯ ಮೆಚ್ಚುವ ದಿಸೆಯಲ್ಲಿ ಈ ವಿಶಿಷ್ಟ ವಾರ್ಷಿಕ ಹಬ್ಬವನ್ನು ಸಂಭ್ರಮಿಸಲಾಗುತ್ತಿದೆ. ಮನೆ ಮಂದಿಯೆಲ್ಲ ಸೇರಿ ಸಡಗರಿಸಬೇಕಾದ ಸಂದರ್ಭವಿದು.

ಭೂಮಿ ನಮ್ಮ ಏಕೈಕ ಮನೆ. ಮನೆಗಿಂತ ಪ್ರಶಸ್ತ ಸ್ಥಳವಿಲ್ಲ. ಈ ಬಾರಿಯ ಅಭಿಯಾನದ ಧ್ಯೇಯವಾಕ್ಯ 'ನಮ್ಮ ಭೂಮಿ ಮರಳಿಪಡೆಯೋಣ. ನಾವು ಉಸಿರಾಡೋಣ'. ಈ ಸಂದರ್ಭದಲ್ಲಿ, ಅಲ್ಲಲ್ಲಿ ವಾಯುಗುಣ ಮತ್ತು ಪರಿಸರ ನ್ಯಾಯ, ವಾಯುಗುಣ ವೈಪರೀತ್ಯದಿಂದ ಉಲ್ಬಣಗೊಳ್ಳುವ ಮಾಲಿನ್ಯ, ಬಡತನ, ಆರ್ಥಿಕ ಹಿನ್ನಡೆ, ರಾಜಕೀಯ ಅಸ್ಥಿರತೆ, ಖಂಡಾಂತರ ವ್ಯಾಧಿಗಳಂತಹ ತೊಡಕುಗಳ ಕುರಿತು ವ್ಯಾಪಕ ಚರ್ಚೆ, ಸಂವಾದಗಳು ಏರ್ಪಡಲಿವೆ.

ಭೂಮಿ ಹಿಂಪಡೆಯಬೇಕಾದದ್ದು ನೈಸರ್ಗಿಕ ಜಗತ್ತನ್ನು ಸಲಹುವುದಕ್ಕಷ್ಟೇ ಅಲ್ಲ, ನಾವು ಅದರ ನಿವಾಸಿಗಳೆಂಬ ಕಾರಣಕ್ಕೆ. ಮಹಾತ್ಮ ಗಾಂಧಿ 'ಉತ್ತಮ ಮನುಷ್ಯ ಸಕಲ ಚರಾಚರ ವಸ್ತುಗಳಿಗೂ ಗೆಳೆಯನೆ' ಎಂದರು. ಮದರ್ ತೆರೆಸಾ ಉದ್ಗರಿಸುತ್ತಿದ್ದರು: 'ಉಪಯೋಗಿಸಬಹುದಾದ ಪದಾರ್ಥ ತ್ಯಾಜ್ಯವೆಂದು ಬಿಸಾಡಿದಾಗ ಮಾತ್ರ ನನಗೆ ಸಿಟ್ಟು ಬರುತ್ತದೆ'. ಗಮನಿಸಬೇಕಾದ್ದೇನೆಂದರೆ, ಭೂ ಪ್ರದೇಶದ ಜೀವಿಗಳ ಪೈಕಿ ಶೇ 20ರಷ್ಟು ಮಾತ್ರವೇ ಕಾಂಕ್ರೀಟುಮುಕ್ತ. ಅವು ರಸ್ತೆ, ಸೇತುವೆ, ಸಂಕೀರ್ಣ, ಮಾಲ್‌ಗಳ ಗೊಡವೆಯಿಲ್ಲದೆ ಬಿಡುಬೀಸನ್ನು ಆನಂದಿಸುತ್ತಿವೆ.

ವೇದಗಳಲ್ಲಿ 'ದೇವತೆಗಳು' ಕೂಡ ನಿಸರ್ಗ ನಿಯಮಗಳಿಗೆ ಅನುಸಾರ ವರ್ತಿಸಬೇಕೆನ್ನುವ ನಿಷ್ಠುರ ಕಟ್ಟುಪಾಡಿದೆ. ರೋಗಮುಕ್ತ, ಶುದ್ಧ ಮತ್ತು ಶಕ್ತಿಯುತ ಪರ್ಯಾವರಣಕ್ಕೆ ಶ್ರಮಿಸಿದಾಗಲೇ ವ್ಯಕ್ತಿಗೂ ಸಮಾಜಕ್ಕೂ ಶ್ರೇಯಸ್ಸು, ಅದೇ ಯಜ್ಞ. ಅಂದಹಾಗೆ ಕೊರೊನಾ ಖಂಡಾಂತರ ವ್ಯಾಧಿಯು ಭೂಮಿ ಜಾಗತಿಕ ಮಟ್ಟದ ಆತಂಕದಲ್ಲಿದೆ ಎನ್ನುವುದಕ್ಕೆ ಪ್ರಕೃತಿಯೇ ಹೊರಡಿಸಿರುವ ಫತ್ವಾ.

ಒಂದು ಮರ ಅನಾರೋಗ್ಯಪೀಡಿತವಾದರೆ ಗಮನಿಸಬೇಕಾದದ್ದು ಅದರ ಕಾಂಡ ಅಥವಾ ಕೊಂಬೆಗಳನ್ನಲ್ಲ, ಅದರ ಬೇರುಗಳನ್ನು. ಮಹಾಭಾರತದ ಕರ್ತೃ ಮಹರ್ಷಿ ವೇದವ್ಯಾಸರು ಭೂಮಿ ಎಲ್ಲಕ್ಕೂ ದೊಡ್ಡದು ಎನ್ನುತ್ತಾರೆ. ಜನಪದರಿಗೋ ಪ್ರತಿದಿನ ಬೆಳಿಗ್ಗೆ ಎದ್ದೊಡನೆ ಎಳ್ಳು, ಜೀರಿಗೆ, ಕಬ್ಬು ಬೆಳೆಯುವ ಭೂಮಿ ನೆನಪಿಸಿಕೊಳ್ಳುವ ಮಮಕಾರ. 1880ರ ಲಾಗಾಯ್ತಿನಿಂದ ಭೂಮಿಯ ಸರಾಸರಿ ತಾಪಮಾನ 0.8 ಸೆಲ್ಸಿಯಸ್ ಏರಿದೆ. ಇದರ ಪರಿಣಾಮ ಗೊತ್ತೇ ಇದೆ. ಹಿಮಮುಕುಟಗಳು ಸೂರ್ಯನಿಂದ ಬರುವ ಹೆಚ್ಚುವರಿ ವಿಕಿರಣಗಳನ್ನು ಪ್ರತಿಫಲಿಸಿ ಭೂಮಿಯ ತಾಪವನ್ನು ನಿಯಂತ್ರಿಸುತ್ತವೆ. ನಮ್ಮಿಂದ ಕೈಯಾರೆ ಹಿಮಪ್ರದೇಶಗಳು ಕರಗಿ ಸಾಗರದ ಮಟ್ಟ ಹೆಚ್ಚಿ ಚಂಡಮಾರುತ, ಸುನಾಮಿ, ತೀರ ಪ್ರದೇಶಗಳು ಜಲಾವೃತವಾಗಬೇಕೇ?



ಮನುಷ್ಯೇತರ ಪ್ರಾಣಿಗಳಿಂದಂತೂ ಪರಿಸರಕ್ಕೆ ಧಕ್ಕೆಯಾಗಿಲ್ಲ. ಅವು ಎಲ್ಲ ಆಯಾಮಗಳಲ್ಲೂ ಅತಿಯಾಸೆ, ಅತಿಕ್ರಮಣವಿಲ್ಲದೆ ಜೀವಿಸುತ್ತ ತಮ್ಮ ಹೊಣೆ ಮೆರೆದಿವೆ. ಇನ್ನು ಸಸ್ಯಗಳಾದರೋ ಪ್ರಾಣಿಗಳಿಗೂ ಮುನ್ನವೆ ಈ ಗ್ರಹದಲ್ಲಿ ಉಗಮಿಸಿವೆ. ಅಕ್ಷರಶಃ ಮೂಲನಿವಾಸಿಗಳಾದ ಅವು ಮನುಷ್ಯ ಮತ್ತು ಪ್ರಾಣಿಗಳನ್ನು ಪೋಷಿಸುತ್ತ ಬಂದಿವೆ.

ನಾವಿರದ ನಾಳೆಗಳು ನಾವಿಂದು ನಿಭಾಯಿಸುವ ನಮ್ಮ ಜವಾಬ್ದಾರಿಯನ್ನು ಮೆಚ್ಚುವಂತಿರಬೇಕು. ನಮ್ಮ ದಿನನಿತ್ಯದ ಅಗತ್ಯಗಳಿಗೆ ಸಾಧ್ಯವಾದಷ್ಟು ಪರಿಸರಸ್ನೇಹಿ ಘಟಕಗಳುಳ್ಳ ಉತ್ಪನ್ನಗಳ ಬಳಕೆ, ಮರುಬಳಕೆ, ಸೌರಶಕ್ತಿ ಹಾಗೂ ಸ್ನಾಯುಶಕ್ತಿ ಅವಲಂಬನೆಯಂತಹ ದಿಟ್ಟ ಹೆಜ್ಜೆಗಳನ್ನಿಡುವುದೇ ಜಾಣ್ಮೆ. ಇಂಗಾಲಮುಕ್ತ ಭವಿತವ್ಯ ಕೈಗೂಡಲು ಕಟ್ಟಿಗೆ, ಕಲ್ಲಿದ್ದಲು, ಪೆಟ್ರೋಲು, ನೈಸರ್ಗಿಕ ಅನಿಲಗಳ ಮಿತವ್ಯಯದ ಹೊರತಾಗಿ ಪರಿಸರ ರಕ್ಷಣೆ ಅಸಂಭವ. ರಾಸಾಯನಿಕಗಳ ಉಪಯೋಗ ನಿಯಂತ್ರಿಸಿದರೆ ಭೂಮಿಯ ಆರೋಗ್ಯಕ್ಕೆ ಆನೆಬಲವೇ ಹೌದು.

ಒಂದು ತಪ್ಪು ಅದನ್ನು ತಿದ್ದಿಕೊಳ್ಳುವುದಕ್ಕೆ ವಿಮುಖರಾಗದ ತನಕ ಅದು ಗುರುತರ ಲೋಪವಾಗದು. ಇಳೆಗೆ ಮೊದಲಿನ ಕಳೆ ಮೂಡಿಸುವುದು ಹೊಣೆಗೂ ಮೀರಿ ಅಪೂರ್ವ ಅವಕಾಶ.

ವಾಚಕರ ವಾಣಿ

ನಾಯಕರು ಮಾನ್ಯತೆ ಪಡೆಯಲು ಸಕಾಲ

ರಿಸರ್ವ್ ಬ್ಯಾಂಕ್ ಅಧಿಕಾರಿಗಳು ತಮ್ಮ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಹಿಂದೆ ದೇಶವ್ಯಾಪಿ ಒಂದು ದಿನದ ಮುಷ್ಕರ ಹೂಡಿದರು. ಅದರಿಂದ ಯಾರ ಮೇಲೂ ಪರಿಣಾಮ ಬೀರಲಿಲ್ಲ. ಕೆಲವು ದಿನಗಳ ನಂತರ, ಅದೇ ಬ್ಯಾಂಕಿನ ಮೂರನೇ ದರ್ಜೆಯ ನೌಕರರು ಮುಷ್ಕರ ನಡೆಸಿದರು. ಆಗ ಇಡೀ ದೇಶದಲ್ಲಿ ಬ್ಯಾಂಕ್ ವ್ಯವಸ್ಥೆ ಕಲಸುಮೇಲೋಗರವಾಯಿತು. ಈಗ ಪಶ್ಚಿಮ ಬಂಗಾಳದ ಚುನಾವಣೆ ನಿಮಿತ್ತ ಪ್ರಧಾನಿಯನ್ನು ಮೊದಲ್ಗೊಂಡು ಕೇಂದ್ರ ಸರ್ಕಾರದ ಪ್ರಮುಖ ಮಂತ್ರಿಗಳು ಅಲ್ಲೇ ವಾಸ್ತವ್ಯ ಮಾಡಿ ಪ್ರಚಾರ ಭಾಷಣ ಮಾಡಿದರು. ನಮ್ಮ ರಾಜ್ಯದಲ್ಲೂ ಉಪಚುನಾವಣೆಯ ಸಂದರ್ಭದಲ್ಲಿ ಇಡೀ ರಾಜ್ಯ ಸಂಪುಟ ಹಾಗೂ ವಿರೋಧ ಪಕ್ಷದ ಹುರಿಯಾಳುಗಳು ಚುನಾವಣಾ ಕ್ಷೇತ್ರಗಳಲ್ಲಿ ವಾಸ್ತವ್ಯ ಮಾಡಿದ್ದರು. ಇದರಿಂದ ಸರ್ಕಾರದ ದೈನಂದಿನ ಆಡಳಿತಕ್ಕೆ ಅಂತಹ ಬಾಧಕವೇನೂ ಆಗಲಿಲ್ಲ. ಕಾರಣ, ಆಡಳಿತ ನಡೆಸುವವರು ಅಧಿಕಾರಿಗಳು. ಮಂತ್ರಿಗಳು ಅಲಂಕಾರಕ್ಕಾಗಿ ಮಾತ್ರ.

ಈಗ, ಕೊರೊನಾ ಸೋಂಕಿನ ತೀವ್ರ ಹರಡುವಿಕೆಯಿಂದ ತಲ್ಲಣಿಸಿದ ಪ್ರಧಾನಿ ಹಾಗೂ ಕೇಂದ್ರ ಸಚಿವರು, ರಾಜ್ಯ ಸಚಿವರು ಸಭೆಗಳನ್ನು ನಡೆಸಿ, ಆಡಳಿತ ಚುರುಕಾಗುವುದರ ಬಗ್ಗೆ ವ್ಯಾಖ್ಯಾನ ಮಾಡುತ್ತಿದ್ದಾರೆ. ಇದೆಲ್ಲಕ್ಕಿಂತ ಹೆಚ್ಚಾಗಿ ಜನರಿಗೆ, ಇಡೀ ದೇಶಕ್ಕೆ ಬಿಸಿ ಮುಟ್ಟುತ್ತಿರುವುದು ಕಾರ್ಮಿಕರ ಅಭಾವದಿಂದ ಮತ್ತು ಆಡಳಿತದ ದುರ್ವ್ಯವಸ್ಥೆಯಿಂದ. ಇದರ ಸಾರಾಂಶವೆಂದರೆ, ದೇಶದ ಪ್ರಗತಿಗೆ, ಸಮಾಜಕ್ಕೆ, ಜನರ ಬದುಕಿಗೆ ಬೆನ್ನೆಲುಬು ಕಾರ್ಮಿಕರು ಹಾಗೂ ನೌಕರರೆಂಬುದು ಸಾಬೀತಾಗಿದೆ. ಕೊರೊನಾ ಸೋಂಕಿನ ಈ ಸಂದರ್ಭದಲ್ಲಿ ಜನಪ್ರತಿನಿಧಿಗಳು ಚುನಾವಣಾ ಭಾಷಣ ಮಾಡುವುದನ್ನು ಬಿಟ್ಟು ಜನರ ಕಷ್ಟಗಳಿಗೆ ಸ್ಪಂದಿಸುವುದಾದರೆ, ಆಡಳಿತ ವ್ಯವಸ್ಥೆ ಚುರುಕಾಗಿ ಜನರಿಗೆ ನೆಮ್ಮದಿ ಸಿಗುತ್ತದೆ. ಮುಂದಿನ ಚುನಾವಣೆ ಸಂದರ್ಭಕ್ಕೆ ಅವರು ಈಗಲೇ ಅಡಿಪಾಯ ಹಾಕಿಕೊಂಡಂತೆಯೂ ಆಗುತ್ತದೆ.

ಕೆ.ಎನ್.ಭಗವಾನ್, ಬೆಂಗಳೂರು

ಕೊರೊನಾ ಸುದ್ದಿ ಕೇಳಿ ಕೇಳಿ...

ದೂರದರ್ಶನದವರು ತಮ್ಮೆಲ್ಲಾ ಮನರಂಜನಾ ಕಾರ್ಯಕ್ರಮಗಳನ್ನು ನಿಲ್ಲಿಸಿ ಕೊರೊನಾ ಕುರಿತ ಪ್ರಶ್ನೆಗಳಿಗೆ ಉತ್ತರ ಹುಡುಕುವ ಪ್ರಯತ್ನ ಮಾಡಬೇಕು ಎಂದು ನಾಗೇಶ ಹೆಗಡೆ ಅಭಿಪ್ರಾಯಪಟ್ಟಿದ್ದಾರೆ (ವಾ.ವಾ., ಏ. 21). ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಬರೀ ಕೊರೊನಾಗೆ ಸಂಬಂಧಿಸಿದ ಸುದ್ದಿ (ಸುಳ್ಳು - ನಿಜ) ಕೇಳಿ ಕೇಳಿ ಮನಸ್ಸಿಗೆ ಬೇಸರ ಬಂದಿದೆ. ಅವರು ಹೇಳುವಂತೆ ಬರೀ ಕೊರೊನಾ ಕುರಿತು ಚರ್ಚೆ ಮಾಡಿದರೆ, ಜನರ ಭಯ ಇನ್ನೂ ಹೆಚ್ಚಾಗಲಿದೆ.

ಸರ್ಕಾರ, ದೃಶ್ಯ ಮತ್ತು ಶ್ರವಣ ಮಾಧ್ಯಮಗಳು ಜನಜಾಗೃತಿ ಮೂಡಿಸಲು ಈಗಾಗಲೇ ಪ್ರಯತ್ನಿಸುತ್ತಿವೆ. ಮಾಸ್ಕಿನ ಮಹತ್ವದ ಬಗ್ಗೆ ಸಾರಿ ಸಾರಿ ಹೇಳಿದರೂ ಬಹಳಷ್ಟು ಜನ ಅಸಡ್ಡೆಯಿಂದ ವರ್ತಿಸುತ್ತಿದ್ದಾರೆ. ಇನ್ನು ಈ ರೀತಿಯ ಪ್ರಶ್ನೆ- ಉತ್ತರ ಕಾರ್ಯಕ್ರಮಕ್ಕೆ ಬೆಲೆಯೆಲ್ಲಿ? ನಿಜವಾಗಿ ಎಚ್ಚರ ವಹಿಸಲು ಬಯಸುವ ಜನ ಒಮ್ಮೆ ಹೇಳಿದರೆ ಅದನ್ನು ಅಳವಡಿಸಿಕೊಳ್ಳುತ್ತಾರೆ. ಅಸಡ್ಡೆ ವಹಿಸುವ ಜನಕ್ಕೆ ದಿನವಿಡೀ ಎಷ್ಟು ಹೇಳಿದರೂ ಏನು ಪ್ರಯೋಜನ?

ಹೆಗಡೆ ಅವರು ಹೇಳಿದಂತೆ, ಸಹಾಯವಾಣಿ ತೆಗೆದು ಅಲ್ಲಿ ಸೂಕ್ತವಾದ ಮಾಹಿತಿ - ಸಹಾಯ ಒದಗಿಸಬೇಕಾಗಿರುವುದು ಸರ್ಕಾರದ ಕೆಲಸ. ಸಹಾಯವಾಣಿ ಕುರಿತು ಜಾಗೃತಿ ಮೂಡಿಸುವ ಕೆಲಸವನ್ನು ವಾಹಿನಿಗಳು ಮಾಡಬಹುದು. ಶ್ರೀಯುತರು ತಮ್ಮ ಪ್ರಾಸ ಹೊಂದಿಸುವ ಭರದಲ್ಲಿ 'ಥಟ್ ಅಂತ ಹೇಳಿ' ಕಾರ್ಯಕ್ರಮವನ್ನು ಎಳೆದು ತಂದಿರುವುದು ನಿಜಕ್ಕೂ ಬೇಸರ ತರಿಸಿದೆ. ಇದು ಯಾವುದೇ ಸಾಮಾನ್ಯ ಮನರಂಜನಾ ಕಾರ್ಯಕ್ರಮವಲ್ಲ. ಜವಾಬ್ದಾರಿಯುತ, ವಿಶಿಷ್ಟ ಮಾಹಿತಿ ನೀಡುವ ಕಾರ್ಯಕ್ರಮವಾಗಿದೆ.

ಶ್ರೇಯಸ್, ತುಮಕೂರು

ರಾಜಿ-ಸಂಧಾನದಂತೆ ದೃಢತೆಯೂ ಅಗತ್ಯ

ಚರ್ಚೆ, ಕೊಡು–ಕೊಳ್ಳುವಿಕೆಯು ಪ್ರಜಾಪ್ರಭುತ್ವದ ಜೀವಾಳ. ಆದರೆ ಕೆಲವೊಮ್ಮೆಯಾದರೂ ಸರ್ಕಾರವು ವಿವಾದಗ್ರಸ್ತ ವಿಷಯಗಳಲ್ಲಿ ದೃಢವಾಗಿ ಇರಬೇಕಾಗುತ್ತದೆ ಎಂಬುದನ್ನು ಕರ್ನಾಟಕ ಒಮ್ಮೆ ತೋರಿಸಿಕೊಟ್ಟಿದೆ. 1996-97ರಲ್ಲಿ ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳ ಉಪನ್ಯಾಸಕರ ಒಂದು ವರ್ಗವು ಪರೀಕ್ಷಾ ಕರ್ತವ್ಯಕ್ಕೆ ಹಾಜರಾಗುವುದನ್ನು ಬಹಿಷ್ಕರಿಸಿತು. ತಮ್ಮ ಸಂಭಾವನೆ ಹೆಚ್ಚಿಸಬೇಕೆಂಬುದು ಅವರ ಆಗ್ರಹವಾಗಿತ್ತು. ಆಗ ಬಿ.ಸೋಮಶೇಖರ್ ಅವರು ರಾಜ್ಯದ ಉನ್ನತ ಶಿಕ್ಷಣ ಸಚಿವರಾಗಿದ್ದರು. ದೃಢ ನಿರ್ಧಾರ, ಬಿಗಿತನಕ್ಕೆ ಹೆಸರಾದವರು. ಮೊದಲು ಉಪನ್ಯಾಸಕರು ಪರೀಕ್ಷಾ ಕರ್ತವ್ಯಕ್ಕೆ ಹಾಜರಾಗಲಿ, ತದನಂತರ ಮಾತುಕತೆ ಎಂದ ಅವರು, ಅಲ್ಲಿಯವರೆಗೆ ಪ್ರತಿಭಟನಕಾರರನ್ನು ಭೇಟಿಯಾಗಲೂ ನಿರಾಕರಿಸಿದರು. ಪರೀಕ್ಷೆಗಳು ನಡೆಯುತ್ತವೆಯೋ ಇಲ್ಲವೋ ಎಂಬ ಆತಂಕಕ್ಕೆ ವಿದ್ಯಾರ್ಥಿಗಳು ಹಾಗೂ ಪಾಲಕರು ಒಳಗಾಗಿದ್ದರು. ಆದರೆ ಅವರ ಭವಿಷ್ಯ ಸುರಕ್ಷಿತ ಎಂದು ಸಚಿವರು ಆಶ್ವಾಸನೆ ಕೊಟ್ಟರು. ಸೋಮಶೇಖರ್ ಅವರನ್ನು ಮಂತ್ರಿಮಂಡಲದಿಂದ ವಜಾ ಮಾಡಬೇಕು ಎಂಬುದು ಮುಷ್ಕರನಿರತರ ಪಟ್ಟಾಗಿತ್ತು. ಆದರೆ ಪರಿಸ್ಥಿತಿಯನ್ನು ಮನದಟ್ಟು ಮಾಡಿಕೊಂಡಿದ್ದ ಅಂದಿನ ಮುಖ್ಯಮಂತ್ರಿ ಜೆ.ಎಚ್.ಪಟೇಲ್, ಪರಿಸ್ಥಿತಿಯನ್ನು ನಿಭಾಯಿಸಲು ಸಚಿವರಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದರು.

ಬೆಂಗಳೂರು ವಿಶ್ವವಿದ್ಯಾಲಯ ಹೊರತುಪಡಿಸಿ ರಾಜ್ಯದ ಉಳಿದ ಎಲ್ಲ ವಿಶ್ವವಿದ್ಯಾಲಯಗಳಲ್ಲೂ ಸರ್ಕಾರವು ಜಿಲ್ಲಾಧಿಕಾರಿ ಆದಿಯಾಗಿ ತನ್ನ ಸಿಬ್ಬಂದಿಯ ಸಹಕಾರದಿಂದ ಪರೀಕ್ಷೆಗಳನ್ನು ಯಶಸ್ವಿಯಾಗಿ ಕೈಗೊಂಡಿತು. ತದನಂತರ ಮುಷ್ಕರನಿರತರು ಮುಖ್ಯಮಂತ್ರಿಯನ್ನು ಕಂಡು, ಬಹಿಷ್ಕಾರದ ನಿರ್ಧಾರವನ್ನು ತಾವಾಗಿಯೇ ವಾಪಸ್ ಪಡೆದರು. ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ನಡೆಸಿಕೊಟ್ಟರು. ಹೀಗೆ ಒಳ್ಳೆಯ ಕೆಲಸದಲ್ಲಿ ಸರ್ಕಾರದ ದಿಟ್ಟ ಕ್ರಮ ಮೇಲುಗೈ ಪಡೆದಿತ್ತು.

1996-97ರವರೆಗೂ ಪರೀಕ್ಷೆಗಳಿಗೆ ಮುಂಚೆ ಕೆಲ ಬೇಡಿಕೆಗಳನ್ನು ಸರ್ಕಾರದ ಮುಂದಿಡುವುದು, ಮಾತುಕತೆ ನಡೆದು ಬೇಡಿಕೆಗಳಲ್ಲಿ ಕೆಲವನ್ನು ಎರಡೂ ಕಡೆಯವರು ಒಪ್ಪಿಕೊಳ್ಳುವುದು, ಆನಂತರ ಪರೀಕ್ಷೆಗಳು ನಡೆಯುವುದು ಪರಿಪಾಟವಾಗಿತ್ತು. ಮೊದಲ ಬಾರಿಗೆ 1996-97ರಲ್ಲಿ ಪರೀಕ್ಷೆಗಳು ಅನಿರ್ಬಂಧವಾಗಿ ನಡೆದವು. ಆದರೆ ಇಂದು ಇಕ್ಕಟ್ಟಿನ ವಿಷಯಗಳಿಗೆ ಶಾಶ್ವತ, ಪರಿಣಾಮಕಾರಿ ಪರಿಹಾರ ಕಂಡುಹಿಡಿಯುವ ಪ್ರಯತ್ನ ಹೆಚ್ಚಾಗಿ ನಡೆಯುತ್ತಿಲ್ಲ. ತತ್‌ಕ್ಷಣಕ್ಕೆ ಸಮಾಧಾನ ಸಿಕ್ಕರೆ ಆಯಿತು ಎಂಬಂಥ ಸ್ಥಿತಿ ಇದೆ. ಇದು ಬದಲಾಗಬೇಕು. ಶಾಶ್ವತ ಪರಿಹಾರ ಕಂಡುಕೊಳ್ಳುವ ದಿಸೆಯಲ್ಲಿ ಪ್ರಯತ್ನಗಳು ನಡೆಯಬೇಕು.

ಸಿ.ಟಿ.ಜೋಷಿ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭೀಮಾ ಕೋರೆಗಾಂವ್ ಪ್ರಕರಣದಲ್ಲಿ 16 ಹೋರಾಟಗಾರರ ಸೆರೆ

ಸಾಕ್ಷ್ಯ ಸೃಷ್ಟಿ ಸಮರ್ಥಿಸುವ ಇನ್ನಷ್ಟು ಸಾಕ್ಷ್ಯ

• ಶ್ರೀಗಿರೀಶ್ ಜಾಲಿಹಾಳ್

ಮಹಾರಾಷ್ಟ್ರದಲ್ಲಿ 2018ರ ಜನವರಿಯಲ್ಲಿ ಭೀಮಾ ಕೋರೆಗಾಂವ್ 200ನೇ ವರ್ಷಾಚರಣೆ ವೇಳೆ ನಡೆದ ಹಿಂಸಾಚಾರ ಪ್ರಕರಣದಲ್ಲಿ ಬಂಧನದಲ್ಲಿರುವ ರೋನಾ ವಿಲ್ಸನ್ ಅವರ ಲ್ಯಾಪ್‌ಟಾಪ್‌ನಲ್ಲಿ 22 ಕಡತಗಳನ್ನು ಹ್ಯಾಕಿಂಗ್ ಮೂಲಕ ಸೇರಿಸಲಾಗಿದೆ ಎಂದು ಅಮೆರಿಕದ ಡಿಜಿಟಲ್ ವಿಧಿವಿಜ್ಞಾನ ಪ್ರಯೋಗಾಲಯವೊಂದು ತನ್ನ ಹೊಸ ವರದಿಯಲ್ಲಿ ಹೇಳಿದೆ. ಹಿಂಸಾಚಾರ ನಡೆದ ಕೆಲವು ದಿನಗಳ ನಂತರ ವಿಲ್ಸನ್ ಅವರ ಲ್ಯಾಪ್‌ಟಾಪ್‌ನಲ್ಲಿ ಈ ಕಡತಗಳನ್ನು ಸೇರಿಸಲಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಪ್ರಕರಣದಲ್ಲಿ ಈ ಕಡತಗಳೇ ಪ್ರಮುಖ ಸಾಕ್ಷ್ಯಗಳು ಎಂದು ಪುಣೆ ಪೊಲೀಸರು 2018ರ ನವೆಂಬರ್ 15ರಿಂದ ಹೇಳುತ್ತಿದ್ದಾರೆ. ನಂತರ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಸಹ ಇವನ್ನು ಪ್ರಮುಖ ಸಾಕ್ಷ್ಯಗಳು ಎಂದು ಪರಿಗಣಿಸಿದೆ. ಈ ಸಾಕ್ಷ್ಯಗಳ ಆಧಾರದಲ್ಲೇ ರೋನಾ ವಿಲ್ಸನ್ ಸೇರಿದಂತೆ 16 ಮಂದಿಯನ್ನು ಬಂಧಿಸಲಾಗಿತ್ತು. ಭಾರತ ಸರ್ಕಾರದ ವಿರುದ್ಧ ಸಂಚು ರೂಪಿಸಿದ ಆರೋಪದಲ್ಲಿ ಇವರನ್ನು ಜೈಲಿಗೆ ಹಾಕಲಾಗಿದೆ.

'ವಿಲ್ಸನ್ ಅವರ ಲ್ಯಾಪ್‌ಟಾಪ್ ಅನ್ನು ಭೌತಿಕವಾಗಿ ನಿರ್ವಹಣೆ ಮಾಡಿದವರಲ್ಲಿ ಯಾರೂ ಈ ಕಡತಗಳನ್ನು ಅದರಲ್ಲಿ ಸೇರಿಸಿಲ್ಲ. ಬದಲಿಗೆ ಕೆಲವು ಕುತಂತ್ರಾಂಶಗಳನ್ನು ಬಳಸಿ, ಹ್ಯಾಕರ್ ಮೂಲಕ ಈ ಕಡತಗಳನ್ನು ಲ್ಯಾಪ್‌ಟಾಪ್‌ನಲ್ಲಿ ಸೇರಿಸಲಾಗಿದೆ' ಎಂದು ಆರ್ಸೆನಲ್ ಕನ್ಸಲ್ಟಿಂಗ್ ತನ್ನ ವರದಿಯಲ್ಲಿ ಹೇಳಿದೆ. ವಿಲ್ಸನ್ ಅವರ ವಕೀಲರ ಮನವಿಯ ನಂತರ, ವಿಲ್ಸನ್ ಅವರ ಲ್ಯಾಪ್‌ಟಾಪ್‌ನ ಎಲೆಕ್ಟ್ರಾನಿಕ್ ಪ್ರತಿಯನ್ನು ವಕೀಲರಿಗೆ ಹಸ್ತಾಂತರಿಸುವಂತೆ 2019ರ ನವೆಂಬರ್‌ನಲ್ಲಿ ನ್ಯಾಯಾಲಯವು ಎನ್‌ಐಎಗೆ ನಿರ್ದೇಶನ ನೀಡಿತ್ತು. ಆ ಎಲೆಕ್ಟ್ರಾನಿಕ್ ಪ್ರತಿಯನ್ನು ಪರಿಶೀಲಿಸಿ, ಆರ್ಸೆನಲ್ ಕನ್ಸಲ್ಟಿಂಗ್ ಈ ವರದಿಯನ್ನು ಸಿದ್ಧಪಡಿಸಿದೆ.

ಇದಕ್ಕೆ ಸಂಬಂಧಿಸಿದಂತೆ 2021ರ ಫೆಬ್ರುವರಿಯಲ್ಲಿ ಆರ್ಸೆನಲ್ ಮೊದಲ ವರದಿ ನೀಡಿತ್ತು. ಈಗ ಅದಕ್ಕೆ ಪೂರಕವಾಗಿ ಎರಡನೇ ವರದಿ ಸಿದ್ಧಪಡಿಸಿದೆ. ಈ ಎರಡನೇ ವರದಿ ಇನ್ನಷ್ಟೇ ಬಹಿರಂಗವಾಗಬೇಕಿದೆ. ಆದರೆ 'ಆರ್ಟಿಕಲ್ 14' ಪೋರ್ಟಲ್‌ನ ತಂಡವು ಈ ವರದಿಯನ್ನು ಪರಿಶೀಲಿಸಿದೆ. 'ಈ ಲ್ಯಾಪ್‌ಟಾಪ್ ಮೇಲೆ ನಿರಂತರವಾಗಿ ಗೂಢಚರ್ಯೆ ನಡೆಸಲಾಗಿದೆ. ಕುತಂತ್ರಾಂಶ ಬಳಸಿ ಹ್ಯಾಕ್ ಮಾಡಲಾಗಿದೆ. ಎನ್‌ಐಎಯ ದೋಷಾರೋಪ ಪಟ್ಟಿಯಲ್ಲಿ ಹೆಸರಿಸಿರುವ 10 ಕಡತಗಳನ್ನು, ಹ್ಯಾಕ್ ಮಾಡುವ ಮೂಲಕ ಈ ಲ್ಯಾಪ್‌ಟಾಪ್‌ಗೆ ಸೇರಿಸಲಾಗಿದೆ. ಈ ಕಡತಗಳನ್ನು ವಿಲ್ಸನ್ ಅವರ ಲ್ಯಾಪ್‌ಟಾಪ್‌ನಿಂದ ನಿರ್ವಹಿಸಲಾಗಿದೆ ಎಂಬುದಕ್ಕೆ ಯಾವುದೇ ಸಾಕ್ಷ್ಯ ಲಭ್ಯವಾಗಿಲ್ಲ. ಆದರೆ, ಇಂತಹ 24 ಕಡತಗಳಲ್ಲಿ 22 ಕಡತಗಳನ್ನು ಹ್ಯಾಕರ್ ನಿರ್ವಹಿಸಿದ್ದಾನೆ' ಎಂದು ವರದಿಯಲ್ಲಿ ವಿವರಿಸಲಾಗಿದೆ.

ಈ ಎಲೆಕ್ಟ್ರಾನಿಕ್ ಸಾಕ್ಷ್ಯಗಳ ಬಗ್ಗೆ ಆರ್ಸೆನಲ್ ವರದಿ ಮತ್ತು ಸರ್ಕಾರದ ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಲ್ಲಿನ ಅಂಶಗಳನ್ನು ಆಧರಿಸಿದ ಪ್ರಶ್ನೆಗಳನ್ನು ಎನ್‌ಐಎಯ ಪೊಲೀಸ್ ವರಿಷ್ಠಾಧಿಕಾರಿ ಮತ್ತು ವಕ್ತಾರರಾದ ಜಯಾ ರಾಯ್ ಅವರಿಗೆ ಇ-ಮೇಲ್ ಮಾಡಲಾಗಿತ್ತು. 'ಖಾಸಗಿ ಪ್ರಯೋಗಾಲಯಗಳ ವರದಿಗಳನ್ನು ನಾವು ಪರಿಗಣಿಸುವುದಿಲ್ಲ. ಸರ್ಕಾರದಿಂದ ಮಾನ್ಯತೆ ಪಡೆದಿರುವ ಪ್ರಾದೇಶಿಕ ವಿಧಿ ವಿಜ್ಞಾನ ಪ್ರಯೋಗಾಲಯ (ಆರ್‌ಎಫ್‌ಎಸ್‌ಎಲ್) ಮತ್ತು ಕೇಂದ್ರೀಯ ವಿಧಿ ವಿಜ್ಞಾನ ಪ್ರಯೋಗಾಲಯದಲ್ಲಿ (ಸಿಎಫ್‌ಎಸ್‌ಎಲ್) ಮಾತ್ರವೇ ನಾವು ಪರಿಶೀಲನೆ ನಡೆಸುತ್ತೇವೆ' ಎಂದು ಅವರು ಉತ್ತರಿಸಿದ್ದಾರೆ.

ಈ 16 ಜನರ ವಿರುದ್ಧದ ಪ್ರಕರಣವು ತಾರ್ಕಿಕ ಅಂತ್ಯ ಕಾಣಲು ಹಲವು ವರ್ಷಗಳು ಬೇಕಾಗುವ ಸಾಧ್ಯತೆ ಇದೆ. ಹೀಗಾಗಿಯೇ ಬಂಧಿತರ ವಕೀಲರು, ಬಂಧಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಸುವುದಕ್ಕೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಆರ್ಸೆನಲ್ ನೀಡಿರುವ ಎರಡನೇ ವರದಿಯನ್ನು ಇದಕ್ಕೆ ಬಳಸಿಕೊಳ್ಳಲು ರೋನಾ ವಿಲ್ಸನ್ ಅವರ ವಕೀಲರು ಸಿದ್ಧತೆ ನಡೆಸಿದ್ದಾರೆ.

(ಶ್ರೀಗಿರೀಶ್ ಜಾಲಿಹಾಳ್ ಅವರು ದಿ ರಿಪೋರ್ಟರ್ಸ್ ಕಲೆಕ್ಟಿವ್‌ನ (www.reporters-collective.in) ಸದಸ್ಯ. ಈ ವರದಿಯ ಇಂಗ್ಲಿಷ್ ಅವತರಣಿಕೆಯು Article 14, www.article-14.comನಲ್ಲಿ ಪ್ರಕಟ ಆಗಿದೆ)

ಸಾಮಾಜಿಕ ಕಾರ್ಯಕರ್ತರ ಬಂಧನವನ್ನು ವಿರೋಧಿಸಿ, ಹಲವು ಸಂಘಟನೆಗಳ ಕಾರ್ಯಕರ್ತರು 2018ರ ಆಗಸ್ಟ್‌ನಲ್ಲಿ ದೆಹಲಿಯಲ್ಲಿ ಪ್ರತಿಭಟನೆ ನಡೆಸಿದ್ದರು

ಹ್ಯಾಕರ್‌ನ ಕೈಚಳಕ

ರೋನಾ ವಿಲ್ಸನ್ ಅವರ ಲ್ಯಾಪ್‌ಟಾಪ್‌ನಲ್ಲಿ ಹ್ಯಾಕರ್ ಹಲವು ಬಾರಿ ಕಡತಗಳ ಹೆಸರನ್ನು (ಫೈಲ್‌ನೇಮ್) ಬದಲಿಸಿರುವ ನಿದರ್ಶನಗಳನ್ನು ಮತ್ತು ಒಮ್ಮೆ ತಪ್ಪು ಎಸಗಿರುವುದನ್ನು ಆರ್ಸೆನಲ್ ಗುರುತಿಸಿದೆ.

'mohila meeting jan.pdf' ಎಂಬ ಕಡತವನ್ನು ಸೇರಿಸಿದ ಸಂಪೂರ್ಣ ಪ್ರಕ್ರಿಯೆಯನ್ನು ಪತ್ತೆ ಮಾಡಲಾಗಿದೆ. ಹ್ಯಾಕರ್‌ನ ಎಲ್ಲಾ ಕ್ರಿಯೆಗಳ ಬಗ್ಗೆ ಬಲವಾದ ಸಾಕ್ಷ್ಯಗಳು ಲಭ್ಯವಾಗಿವೆ. ಆದರೆ ಮೊಹಿಲಾ ಮೀಟಿಂಗ್‌ಗೆ ಸಂಬಂಧಿಸಿದಂತೆ ಕಲೆಹಾಕಲಾಗಿರುವ ಪ್ರಕ್ರಿಯೆಯ ವಿವಿಧ ಹಂತಗಳು, ಈ ವರದಿಯಲ್ಲಿ ಅತ್ಯಂತ ಮಹತ್ವದ ಭಾಗವಾಗಿವೆ' ಎಂದು ಆರ್ಸೆನಲ್ ಕನ್ಸಲ್ಟಿಂಗ್‌ನ ಅಧ್ಯಕ್ಷ ಮಾರ್ಕ್ ಸ್ಪೆನ್ಸರ್ ಹೇಳಿದ್ದಾರೆ. 2018ರ ಜನವರಿ 2ರಂದು ನಡೆಸಲು ಉದ್ದೇಶಿಸಲಾಗಿದ್ದ ಮಹಿಳಾ ಸಭೆಗೆ (ಮೊಹಿಲಾ ಮೀಟಿಂಗ್) ಸಂಬಂಧಿಸಿದ ಕಡತ ಇದು. ಈ ಕಡತದಲ್ಲಿ ಸಂಘಟಕರಾದ ಸುಧಾ ಭಾರದ್ವಾಜ್, ಶೋಮಾ ಸೆನ್ ಮತ್ತಿತರರ ಹೆಸರನ್ನು ಪಟ್ಟಿ ಮಾಡಲಾಗಿದೆ.

ಸ್ಪೆನ್ಸರ್ ಅವರು ಹೇಳುತ್ತಿರುವ ಹ್ಯಾಕರ್‌ನ ಪ್ರಕ್ರಿಯಾ ಹಂತವು, ವಿಲ್ಸನ್ ಅವರ ಲ್ಯಾಪ್‌ಟಾಪ್ ಅನ್ನು ಹೇಗೆ ಮತ್ತು ಯಾವಾಗ ಹ್ಯಾಕ್ ಮಾಡಲಾಯಿತು ಹಾಗೂ ಕಡತಗಳನ್ನು ಹೇಗೆ ಸೇರಿಸಲಾಯಿತು ಎಂಬುದನ್ನು ವಿವರಿಸುತ್ತದೆ. ಇಂತಹ ಸಾಧನಗಳನ್ನು ಹ್ಯಾಕ್ ಮಾಡಲು ಅನುಕೂಲ ಮಾಡಿಕೊಡುವ 'NetWire' ಎಂಬ ಕುತಂತ್ರಾಂಶವನ್ನು ಬಳಸಿಕೊಂಡು 22 ಕಡತಗಳನ್ನು ವಿಲ್ಸನ್ ಅವರ ಲ್ಯಾಪ್‌ಟಾಪ್‌ಗೆ ಸೇರಿಸಲಾಗಿದೆ ಎಂದು ವರದಿಯಲ್ಲಿ ವಿವರಿಸಲಾಗಿದೆ.

ಹ್ಯಾಕರ್ ದೂರದಲ್ಲಿ ಕೂತುಕೊಂಡೇ ಈ ಲ್ಯಾಪ್‌ಟಾಪ್‌ನಲ್ಲಿನ ಚಟುವಟಿಕೆಗಳನ್ನು ನೋಡಿದ್ದಾನೆ. ಕಡತಗಳನ್ನು ಬದಲಿಸಿದ್ದಾನೆ, ಸೇರಿಸಿದ್ದಾನೆ ಮತ್ತು ಅಳಿಸಿಹಾಕಿದ್ದಾನೆ. ಟ್ರೋಜನ್ ಹಾರ್ಸ್ (Trojan horse) ಸ್ವರೂಪದ ವೈರಸ್ (ಕುತಂತ್ರಾಂಶ) ಬಳಸಿಕೊಂಡು ವಿಲ್ಸನ್ ಅವರ ಲ್ಯಾಪ್‌ಟಾಪ್‌ಗೆ ಹಲವು ಕಡತಗಳನ್ನು ಕಳುಹಿಸಲಾಗಿದೆ ಎಂಬುದನ್ನು ಎರಡನೇ ವರದಿಯಲ್ಲಿ ವಿವರಿಸಲಾಗಿದೆ.

ಭೀಮಾ-ಕೋರೆಗಾಂವ್ ಹಿಂಸಾಚಾರ ನಡೆದ 11 ದಿನದ ನಂತರ, 2018ರ ಜನವರಿ 11ರ ಸಂಜೆ 5.04ಕ್ಕೆ ವಿಲ್ಸನ್ ಅವರ ಲ್ಯಾಪ್‌ಟಾಪ್‌ನಲ್ಲಿ 'ನೆಟ್‌ವೈರ್' ಚಾಲೂ ಆಗಿದೆ ಎಂಬುದು 'mohila meeting jan.pdf' ಕಡತ ಸೇರ್ಪಡೆಯ ಪ್ರಕ್ರಿಯಾ ಹಂತದಲ್ಲಿ ದಾಖಲಾಗಿದೆ. ಸಂಜೆ 5.10ರಿಂದ 5.12ರ ಮಧ್ಯೆ ಹ್ಯಾಕರ್ ಮೂರು ಕಡತಗಳನ್ನು ಲ್ಯಾಪ್‌ಟಾಪ್‌ಗೆ ಸೇರಿಸಿದ್ದಾನೆ. ಲ್ಯಾಪ್‌ಟಾಪ್‌ಗೆ ತಾತ್ಕಾಲಿಕವಾಗಿ ಸೇರಿಸಲಾಗಿದ್ದ UnRAR ಕಡತದ ಮೂಲಕ ಈ ಮೂರು ಕಡತಗಳನ್ನು, ಅಗೋಚರ ಫೋಲ್ಡರ್‌ಗೆ ಕಳುಹಿಸಿದ್ದಾನೆ. UnRAR ಕಡತದ ಹೆಸರನ್ನು 'Adobe.exe' ಎಂದು ಬದಲಿಸಿದ್ದಾನೆ ಎಂದು ವರದಿಯಲ್ಲಿ ವಿವರಿಸಲಾಗಿದೆ.



One process tree which contains events from January 11, 2018, between 5:04 PM and 5:12 PM, is particularly important in regard to the additional files of interest (see Exhibit B for more details including timestamps and process descriptors):

Description	PID	PPID	File Path	Command Line
Core NetWire Process Tree	[illegible]	0	C:\COREL DRAW\HPFFRONT.EXE	
Command Prompt Launch	[illegible]	3220	C:\Windows\system32\cmd.exe	
Attempt to Unpack CC_5th_Res_2017_for SC-SAC-S[illegible].rar	[illegible]	4872	D:\Rbackup\CC5_Res\Adobe.exe	X CC_5TH_RES_2017_FOR SC-SAC-SZCS.RAR
Unpack CC_5th_Res_2017_for SC-SAC-S[illegible]Cs.rar	7192	4872	D:\Rbackup\CC5_Res\Adobe.exe	X "CC_5TH_RES_2017_FOR SC-SAC-SZCS.RAR"
Unpack CC_Circular-1-3-2017_T.E.H_Con[illegible].rar	6872	4872	D:\Rbackup\CC5_Res\Adobe.exe	X "CC_CIRCULAR-1-3-2017_T
File Delivery	6872	N/A	d:\rbackup\cc5_res\cc circular-1-3-2017_eng.pdf	
File Delivery	6872	N/A	d:\rbackup\cc5_res\cc circular-1-3-2017_eng_book.pdf	
File Delivery	6872	N/A	d:\rbackup\cc5_res\cc circular-1-3-2017_eng_view.pdf	
Unpack mohila meeting jan.rar	2328	4872	D:\Rbackup\CC5_Res\Adobe.exe	X "MOHILA MEETING JAN.RAR"
File Delivery	2328	N/A	d:\rbackup\cc5_res\mohila meeting jan.pdf	

Table 4 (Note: PID = Process ID, PPID = Parent Process ID)

'ರೋನಾ ವಿಲ್ಸನ್ ಅವರ ಲ್ಯಾಪ್‌ಟಾಪ್‌ನಲ್ಲಿ ವಿಂಡೋಸ್ ಹೈಬರ್‌ನೇಟ್ ಅನ್ನು ಚಾಲೂ ಮಾಡಲು ಹ್ಯಾಕರ್, ನೆಟ್‌ವೈರ್ ಮೂಲಕ ನೀಡಿದ ಕಮಾಂಡ್ ದಾಖಲಾಗಿದೆ. 2018ರ ಜನವರಿ 14ರಂದು ವಿಂಡೋಸ್ ಹೈಬರ್‌ನೇಟ್ ಚಾಲೂ ಮಾಡಲಾಗಿದೆ' ಎಂದು ಮಾರ್ಕ್ ಸ್ಪೆನ್ಸರ್ ತಿಳಿಸಿದ್ದಾರೆ.

'ವಿಲ್ಸನ್ ಮತ್ತು ಇತರರನ್ನು ಸಿಲುಕಿಸುವ ಉದ್ದೇಶದಿಂದ ಈ ಕಡತಗಳನ್ನು ಲ್ಯಾಪ್‌ಟಾಪ್ ಅಲ್ಲದೇ, ಎಕ್ಸ್‌ಟರ್ನಲ್ ಹಾರ್ಡ್‌ಡಿಸ್ಕ್ ಮತ್ತು ಪೆನ್‌ಡ್ರೈವ್‌ಗಳಿಗೂ ಸೇರಿಸಲಾಗಿತ್ತು. ಲ್ಯಾಪ್‌ಟಾಪ್‌ಗೆ ಕನೆಕ್ಟ್ ಮಾಡಿದಾಗ ಹಾರ್ಡ್‌ಡಿಸ್ಕ್ ಮತ್ತು ಪೆನ್‌ಡ್ರೈವ್‌ಗೆ ಸ್ವಯಂಚಾಲಿತವಾಗಿ ಈ ಕಡತಗಳು ರವಾನೆ ಆಗುವ ರೀತಿ ಹ್ಯಾಕರ್ ವ್ಯವಸ್ಥೆ ಮಾಡಿದ್ದ' ಎಂದು ಸ್ಪೆನ್ಸರ್ ಹೇಳಿದ್ದಾರೆ.



Sr. no	ACP SWARGATE OUTWORD NO AND DATE	FSL OUTWORD NO AND DATE	Case No
1	2591/2018 Date:- 20/04/2018	45/18 Date:- 23/04/2018	168/18

We analyzed the clone copies and on the basis of it questionnaire is given as per the enclosure in order to obtain the final analysis report. If and when required we will provide the supplementary questionnaire.

Yours faithfully
(Dr.ShivajiPawar)
Asst. Comm.of Police.

16 ಆರೋಪಿಗಳು ಹಾಗೂ ವಿದ್ಯುನ್ಮಾನ ಪುರಾವೆ

ಮೇಲ್ಜಾತಿಯ ಹಿಂದೂಗಳಿಂದ ಕೂಡಿದ್ದ ಪೇಶ್ವೆಯ ಸೈನ್ಯ ಹಾಗೂ ಬಹುತೇಕ ದಲಿತರಿಂದ ಕೂಡಿದ್ದ ಬ್ರಿಟಿಷ್ ಸೇನೆಯ ನಡುವೆ ನಡೆದ ಯುದ್ಧದಲ್ಲಿ ದಲಿತರು ಜಯ ಸಾಧಿಸಿದ್ದರು. ಇದರ ದ್ವಿಶತಮಾನೋತ್ಸವ ಆಚರಣೆಯು ಪುಣೆ ಸಮೀಪದ ಭೀಮಾ–ಕೋರೆಗಾಂವ್ ಎಂಬಲ್ಲಿ 2018ರ ಜನವರಿ 1ರಂದು ಆಯೋಜನೆಗೊಂಡಿತ್ತು. ಆದರೆ, ಅದು ಹಿಂಸಾಚಾರಕ್ಕೆ ತಿರುಗಿತ್ತು. ದಲಿತರು ಮತ್ತು ಬಲಪಂಥೀಯ ಹಿಂದೂಗಳು ಕಾದಾಟ ನಡೆಸಿದ್ದರು. ಇದಕ್ಕೆ ಪೂರ್ವಭಾವಿಯಾಗಿ 2017ರ ಡಿಸೆಂಬರ್ 31ರಂದು ಒಂದು ಸಭೆ ನಡೆದಿತ್ತು. ಈ ಸಭೆ ಆಯೋಜನೆಗೂ ಎಲ್ಗಾರ್ ಪರಿಷತ್‌ಗೂ ನಂಟು ಇದೆ ಎಂಬ ಆರೋಪದ ಮೇಲೆ 16 ಮಂದಿ ವಿರುದ್ಧ ಪ್ರಕರಣ ದಾಖಲಾಗಿತ್ತು.

ಹಿಂಸಾಚಾರ ಪ್ರಕರಣದ ತನಿಖೆ ನಡೆಸಿದ ಪುಣೆ ಪೊಲೀಸರು, ಇದರಲ್ಲಿ ಮಾವೋವಾದಿಗಳ ಸಂಚು ಇದೆ ಎಂದು ಹೇಳಿದರು. ಆಗ ಪ್ರಚಲಿತಕ್ಕೆ ಬಂದಿದ್ದ 'ನಗರ ನಕ್ಸಲ'ರತ್ತ ಬೊಟ್ಟು ಮಾಡಿದರು. ನಗರದ ಚಿಂತಕರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ಅಪಹಾಸ್ಯ ಮಾಡಲು ಬಲಪಂಥೀಯರು 'ನಗರ ನಕ್ಸಲ್' ಪದವನ್ನು ಚಾಲ್ತಿಗೆ ತಂದಿದ್ದರು.

ದ್ವಿಶತಮಾನೋತ್ಸವದ ಹಿಂದಿನ ದಿನ ನಡೆದ ಸಭೆಗೆ ಸಂಬಂಧಿಸಿದಂತೆ ಹಲವು ಸಾಮಾಜಿಕ ಕಾರ್ಯಕರ್ತರು ಹಾಗೂ ಸಂಘಟನೆಗಳಿಗೆ ಸೇರಿದ ಸ್ಥಳದಲ್ಲಿ ಶೋಧ ನಡೆಸಿದ ಪೊಲೀಸರು, ಪುರಾವೆಯಾಗಿ ಲ್ಯಾಪ್‌ಟಾಪ್, ಹಾರ್ಡ್‌ಡಿಸ್ಕ್ ಮತ್ತು ಇತರೆ ಉಪಕರಣಗಳನ್ನು ವಶಕ್ಕೆ ಪಡೆದಿದ್ದರು. ಭೀಮಾ–ಕೋರೆಗಾಂವ್ ಕಾರ್ಯಕ್ರಮ ಆಯೋಜಕರಲ್ಲಿ ಪ್ರಮುಖರಾದ ಸುಧೀರ್ ಧವಳೆ ಅವರ ಜೊತೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ರೋನಾ ವಿಲ್ಸನ್ ಹಾಗೂ ವಕೀಲ ಸುರೇಂದ್ರ ಗಡಲಿಂಗ್ ಅವರಿಗೆ ಸಂಬಂಧಿಸಿದ ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ ಎಂದು ದೋಷಾರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ರೋನಾ ಅವರಿಗೆ ಸೇರಿದ ಕಂಪ್ಯೂಟರ್‌ನಲ್ಲಿ ಸಿಕ್ಕ ಫೈಲ್‌ಗಳನ್ನು ರೋನಾ ವಿಲ್ಸನ್, ವಕೀಲೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಸುಧಾ ಭಾರದ್ವಾಜ್ ಹಾಗೂ ಕವಿ ವರವರ ರಾವ್ ವಿರುದ್ಧದ ಸಾಕ್ಷ್ಯಗಳಾಗಿ ಪರಿಗಣಿಸಿ ಸಲ್ಲಿಸಲಾಗಿದೆ.

ಮಹಾರಾಷ್ಟ್ರ ರಾಜ್ಯ ಪೊಲೀಸರಿಂದ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ವಹಿಸಲಾಯಿತು. ಈ ವೇಳೆ ಮಹಾರಾಷ್ಟ್ರದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಹೋಗಿ, ಉದ್ಧವ್ ಠಾಕ್ರೆ ನೇತೃತ್ವದ ಮಹಾವಿಕಾಸ ಅಘಾಡಿ ಸರ್ಕಾರ ಅಧಿಕಾರಕ್ಕೆ ಬಂದಿತು. ಪ್ರಕರಣದ ತನಿಖೆ ಕೈಗೆತ್ತಿಕೊಂಡ ಎನ್‌ಐಎ ಹೆಚ್ಚುವರಿ ದೋಷಾರೋಪ ಪಟ್ಟಿ ಸಲ್ಲಿಸಿತು.

ಕ್ರೈಸ್ತ ಪಾದ್ರಿ ಸ್ಟ್ಯಾನ್ ಸ್ವಾಮಿ, ದೆಹಲಿ ವಿಶ್ವವಿದ್ಯಾಲಯದ ಭಾಷಾಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಹನಿಬಾಬು ತರಾಯಿಲ್, ಗೋವಾದ ಮ್ಯಾನೇಜ್‌ಮೆಂಟ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಆನಂದ್ ತೇಲ್ತುಂಬ್ಡೆ, ಪತ್ರಕರ್ತ ಗೌತಮ್ ನವಲಖಾ ಅವರನ್ನು ಹೆಚ್ಚುವರಿ ಚಾರ್ಜ್‌ಶೀಟ್‌ನಲ್ಲಿ ಎನ್‌ಐಎ ಹೆಸರಿಸಿತು.

ನಿಷೇಧಿತ ಮಾವೋವಾದಿ ಗುಂಪಿನೊಂದಿಗೆ ಸೇರಿ ಭಾರತ ಸರ್ಕಾರದ ವಿರುದ್ಧ ಸಂಚು ಹೂಡಿದ ಆರೋಪ ಇವರ ಮೇಲಿದೆ. ಕಾನೂನು ಬಾಹಿರ ಚಟುವಟಿಕೆ (ತಡೆ) ಕಾಯ್ದೆ (ಯುಎಪಿಎ) 1967ರ ಅಡಿಯಲ್ಲಿ ಈ ಆರೋಪಿಗಳ ವಿರುದ್ಧ ಪ್ರಕರಣ ದಾಖಲಾಗಿದೆ.

ವರದಿ ನಿರಾಕರಿಸಿದ್ದ ಎನ್‌ಐಎ

ಆರ್ಸೆನಲ್ ವರದಿಯ ಆಧಾರದಲ್ಲಿ, ಆನಂದ ತೇಲ್ತುಂಬ್ಡೆ ಪರ ವಕೀಲರು ವಿಶೇಷ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಜಾಮೀನು ಅರ್ಜಿಗೆ ಪ್ರತಿಕ್ರಿಯೆ ನೀಡಿದ್ದ ಎನ್‌ಐಎ, 'ಅದು 'ಪ್ರಮಾಣೀಕೃತವಲ್ಲದ' ತನಿಖೆಯಾಗಿರುವುದರಿಂದ ಅದರ ವರದಿಗಳನ್ನು ಅವಲಂಬಿಸಲು ಸಾಧ್ಯವಿಲ್ಲ' ಎಂದಿತ್ತು. ವರದಿಯನ್ನು ಎನ್‌ಐಎ ತಿರಸ್ಕರಿಸಿತ್ತು.

'ಆರೋಪಪಟ್ಟಿಯ ಜತೆಗೆ ನ್ಯಾಯಾಲಯಕ್ಕೆ ಸಲ್ಲಿಸಲಾಗಿರುವ ವಿಧಿವಿಜ್ಞಾನ ವರದಿಗಳು ಭಾರತೀಯ ನ್ಯಾಯಾಲಯಗಳು ಅಂಗೀಕರಿಸಿರುವ, ಅಧಿಕೃತವಾಗಿ ಮಾನ್ಯತೆ ಪಡೆದ ಪ್ರಯೋಗಾಲಯದಿಂದ ಪಡೆದವುಗಳು. ಈ ಪ್ರಕರಣದಲ್ಲಿ, ಪುಣೆಯ ಪ್ರಾದೇಶಿಕ ವಿಧಿವಿಜ್ಞಾನ ಪ್ರಯೋಗಾಲಯದಿಂದ (ಆರ್‌ಎಫ್‌ಎಸ್‌ಎಲ್) ವರದಿಗಳನ್ನು ಪಡೆಯಲಾಗಿದೆ. ಅವರ ವರದಿಯ ಪ್ರಕಾರ ಅಂಥ ಯಾವುದೇ ಕುತಂತ್ರಾಂಶ ಕಂಡುಬಂದಿಲ್ಲ' ಎಂದು ಎನ್‌ಐಎ ವಕ್ತಾರ ರಾಯ್ ಹೇಳಿದ್ದಾರೆ.

ವಾದಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ನಾವು ಪರಿಶೀಲಿಸಿದ್ದೇವೆ. 'ಆರೋಪಿಯ ಎಲೆಕ್ಟ್ರಾನಿಕ್ ಉಪಕರಣಗಳನ್ನು ತಿರುಚಲಾಗಿದಯೇ' ಎಂದು 2018ರ ಅಕ್ಟೋಬರ್ 18ರಂದು ತನಿಖಾಧಿಕಾರಿಯು ಸರ್ಕಾರಿ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಮನವಿ ಮಾಡಿಕೊಂಡಿದ್ದರು. ಆದರೆ, ಸರ್ಕಾರಿ ಪ್ರಯೋಗಾಲಯವು ಈ ವಿಚಾರದಲ್ಲಿ ಮೌನವಾಗಿತ್ತು ಎಂಬುದನ್ನು ದಾಖಲೆಗಳು ತೋರಿಸುತ್ತವೆ. ಆರೋಪಪಟ್ಟಿಯಲ್ಲಿ, 'ಕೆಲವು ಎಫ್‌ಎಸ್‌ಎಲ್ (ವಿಧಿವಿಜ್ಞಾನ ಪ್ರಯೋಗಾಲಯ) ವರದಿಗಳು ಇನ್ನಷ್ಟೇ ಲಭಿಸಬೇಕಾಗಿವೆ' ಎಂದಿದೆ.

ಈ ವಿಚಾರವಾಗಿ ಪ್ರತಿಕ್ರಿಯೆ ನೀಡುವಂತೆ ವಕ್ತಾರೆ ಜಯಾ ರಾಯ್ ಅವರನ್ನು 'ಆರ್ಟಿಕಲ್ 14' ಕೇಳಿದಾಗ, 'ಎನ್‌ಐಎ ಈಗಾಗಲೇ ಆರೋಪಪಟ್ಟಿ ಸಲ್ಲಿಸಿಯಾಗಿದೆ. ನ್ಯಾಯಾಲಯದಲ್ಲಿರುವ ಪ್ರಕರಣದ ಬಗ್ಗೆ ಯಾವುದೇ ವಿಚಾರದಲ್ಲಿ ನಾನು ಹೇಳಿಕೆ ನೀಡುವುದಿಲ್ಲ' ಎಂದರು. 'ದಾಖಲೆಗಳನ್ನು ತಿರುಚಿದ ವಿಚಾರಕ್ಕೆ ಸಂಬಂಧಿಸಿದಂತೆ ಆರ್‌ಎಫ್‌ಎಸ್‌ಎಲ್ ಏಕೆ ಪ್ರತಿಕ್ರಿಯೆ ನೀಡಲಿಲ್ಲ' ಎಂಬ ನಿರ್ದಿಷ್ಟ ಪ್ರಶ್ನೆಯನ್ನು ಆರ್ಟಿಕಲ್ 14 ಕೇಳಿತ್ತು. ಅದಕ್ಕೂ ರಾಯ್ ಪ್ರತಿಕ್ರಿಯೆ ನೀಡಲಿಲ್ಲ.

'ಬೇರೆ ಸಾಕ್ಷ್ಯಗಳೂ ಇವೆ'

ಆರ್ಥಿಕ ಪ್ರಸ್ತಾವನೆಗಳನ್ನು ತೆರೆಯುವ ದಿನಾಂಕ	10ನೇ ಏಪ್ರಿಲ್ 2021, 14.00 ಗಂಟೆಗೆ

ನಿಗದಿತ ವೇಳಾಪಟ್ಟಿಯ ದಿನಾಂಕಗಳನ್ನು ಮುಂದೂಡಿದ ಬಗ್ಗೆ (ಏನಾದರೂ ಇದ್ದಲ್ಲಿ), ನಂತರದ ಅಧಿಸೂಚನೆಗಳ, ಬದಲಾವಣೆ, ತಿದ್ದುಪಡಿ ಮತ್ತು ಪ್ರಸ್ತಾವನೆಗಳ ಆಯ್ಕೆ/ತಿರಸ್ಕರಿಸುವುದು ಮುಂತಾದವುಗಳ ಬಗ್ಗೆ ಕೇವಲ ಇ–ಸಂಗ್ರಹಣೆ ವೇದಿಕೆಯ ವಿಳಾಸ https://www.eproc.karnataka.gov.in ರ ಮೂಲಕ ಮಾತ್ರ ತಿಳಿಸಲಾಗುವುದು ಹಾಗೂ ಈ ಬಗ್ಗೆ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ ಈ ಟೆಂಡರ್‌ಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಯಾವುದೇ ಒಂದು ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣಗಳನ್ನು ನೀಡದೇ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ಹೊಂದಿರುತ್ತದೆ.
ಅಧಿಸೂಚನೆ ಸಂಬಂಧಿತ ಸ್ಪಷ್ಟೀಕರಣಕ್ಕಾಗಿ ಶ್ರೀ ಹೆಚ್.ಪಿ ಜನಾರ್ದನ್, ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಟಿ.ಐ.ಎಲ್., ಖನಿಜ ಭವನ, ಬೆಂಗಳೂರು ದೂರವಾಣಿ ಸಂಖ್ಯೆ: 080–22352727 ಇವರನ್ನು ಸಂಪರ್ಕಿಸಬಹುದು.
ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು
ಟೆಂಡರ್‌ಆಹ್ವಾನ ಪ್ರಾಧಿಕಾರಿ
ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ
DIPR/DDU/YC/233/2020-21
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕಾರ್ಯಪಾಲಕ ಅಭಿಯಂತರವರ ಕಛೇರಿ,
ಲೋ.ಇ, ವಿಶೇಷ ವಿಭಾಗ, ಶಿವಮೊಗ್ಗ.
ಫೋನ್‌ನಂ.:08182–222942 ಇ–ಮೇಲ್: spdivision@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)–2ನೆ ಕರೆ
ಐ.ಎಫ್.ಟಿ. ಸಂಖ್ಯೆ: 03/2021–22 ದಿ: 19.04.2021

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ/ಡಬ್ಲ್ಯೂ–4 ನಿಯಮದನ್ವಯ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ 3ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರಿಗೆ 5054–ಎಸ್.ಸಿ.ಪಿ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುಮೋದನೆಗೊಂಡಿರುವ ಭದ್ರಾವತಿ ತಾಲ್ಲೂಕು ಕಸಬಾ ವ್ಯಾಪ್ತಿಯ ಎಂ.ಎಂ. ರಸ್ತೆ ಜಯಶ್ರೀ ಸರ್ಕಲ್‌ನಿಂದ ಜನ್ನಾಪುರ ಎ.ಕೆ. ಕಾಲೋನಿ ಮಲ್ಲೇಶ್ವರ ಸಮುದಾಯ ಭವನದ ವರೆಗೆ ಕಾಂಕ್ರೀಟ್ ರಸ್ತೆ ಮತ್ತು ಬಾಕ್ಸ್ ಚರಂಡಿ ನಿರ್ಮಾಣ (ಇಡೆಂಟ್ ನಂ. 131623) ಕಾಮಗಾರಿಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಈ ಕೆಳಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಳಿಗೆ ಟೆಂಡರ್ ಗಿಟ್ಟ ಮೊತ್ತ ರೂ. 184.60 ಲಕ್ಷ ಹಾಗೂ ಇ.ಎಂ.ಡಿ. ಮೊತ್ತ ರೂ. 2.770 ಲಕ್ಷ ಸದರಿ ಕಾಮಗಾರಿಯ ಟೆಂಡರ್ ಅವಧಿ 06 ತಿಂಗಳು ಮಳೆಗಾಲ ಸೇರಿ, ಸದರಿ ಕಾಮಗಾರಿಗೆ ಈ ಕೆಳಸಹಿ ಮಾಡಿರುವವರು ಟೆಂಡರ್ ಆಹ್ವಾನಿಸಿರುತ್ತಾರೆ.
ಅರ್ಹ ಗುತ್ತಿಗೆದಾರರು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್ ದಸ್ತಾವೇಜಿನ ಸೆಕ್ಷನ್–2 ರ (ಟೆಂಡರ್‌ದಾರರಿಗೆ ತಿಳುವಳಿಕೆ) ಕ್ಲಾಸ್ – 3 ರನ್ವಯ ಅರ್ಹತೆ ವಿವರಗಳನ್ನು ಗಮನಿಸತಕ್ಕದ್ದು, ವಿದ್ಯುನ್ಮಾನ ಜಾಲದಲ್ಲಿ ದಿ: 19–04–2021 ರಿಂದ 04–05–2021 ರ 17.00 ಗಂಟೆವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್‌ನ್ನು ದಿನಾಂಕ: 04–05–2021 ರ ಸಂಜೆ 5:00 ಗಂಟೆಯೊಳಗೆ ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರಿಸತಕ್ಕದ್ದು, ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ದಿನಾಂಕ: 05–05–2021 ರಂದು ತೆರೆಯಲಾಗುವುದು ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 06–05–2021 ರ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳು ಬೇಕಾದಲ್ಲಿ ಈ ಕಛೇರಿಯನ್ನು ಕಛೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ ಪಡೆಯುಬಹುದಾಗಿದೆ. ವೆಬ್‌ಸೈಟ್‌ನಲ್ಲಿರುವ ಟೆಂಡರ್ ವಿವರಗಳೇ ಅಂತಿಮವಾಗಿರುತ್ತವೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ–115/04/ಎಂಸಿಎ/21–22

ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆ: 6ನೇ ಹಂತದ ಮತದಾನ ಇಂದು

ಟಿಎಂಸಿ ಮುಂದಿದೆ ಬಿಜೆಪಿಯ ಭಾರಿ ಸವಾಲು

• ಶೋಮು ದಾಸ್

ಜನತಂತ್ರದ ಹಬ್ಬ 2021

ಕೋಲ್ಕತ್ತ: ಪಶ್ಚಿಮ ಬಂಗಾಳದ ನಾಲ್ಕು ಜಿಲ್ಲೆಗಳ 43 ವಿಧಾನಸಭಾ ಕ್ಷೇತ್ರಗಳಲ್ಲಿ ಗುರುವಾರ ಮತದಾನ ನಡೆಯಲಿದೆ. ತೃಣಮೂಲ ಕಾಂಗ್ರೆಸ್‌ಗೆ (ಟಿಎಂಸಿ) ಬಿಜೆಪಿಯಿಂದ ಭಾರಿ ಸವಾಲು ಎದುರಾಗಬಹುದಾದ ಕ್ಷೇತ್ರಗಳು ಇವು. ಕಳೆದ ಲೋಕಸಭಾ ಚುನಾವಣೆಯ ಹೊತ್ತಿಗೆ ಈ ಪ್ರದೇಶದಲ್ಲಿ ಬಿಜೆಪಿಯ ಮತ ಪ್ರಮಾಣ ನಾಲ್ಕು ಪಟ್ಟು ಹೆಚ್ಚಳವಾಗಿದೆ.

2016ರ ವಿಧಾನಸಭಾ ಚುನಾವಣೆಯಲ್ಲಿ ಈ 43 ಕ್ಷೇತ್ರಗಳಲ್ಲಿ ಒಂದರಲ್ಲಿಯೂ ಬಿಜೆಪಿ ಗೆದ್ದಿಲ್ಲ. ಪಕ್ಷಕ್ಕೆ ಸಿಕ್ಕ ಮತ ಪ್ರಮಾಣ ಶೇ 10.74ರಷ್ಟು. 2019ರ ಲೋಕಸಭಾ ಚುನಾವಣೆಯಲ್ಲಿ ಇಲ್ಲಿ ಬಿಜೆಪಿಯ ಮತಪ್ರಮಾಣ ಶೇ 40.85ರಷ್ಟಕ್ಕೆ ಏರಿದೆ. ಉತ್ತರ 24 ಪರಗಣ, ಉತ್ತರ ದಿನಜ್‌ಪುರ, ನಾದಿಯಾ ಮತ್ತು ಪೂರ್ವ ವರ್ಧಮಾನ್ ಜಿಲ್ಲೆಗಳ ಜನರು ಆರನೇ ಹಂತದಲ್ಲಿ ಮತದಾನ ಮಾಡಲಿದ್ದಾರೆ. ಇಲ್ಲಿ ಒಂದು ಕೋಟಿಗೂ ಹೆಚ್ಚು ಮತದಾರರಿದ್ದು 306 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ 43 ಕ್ಷೇತ್ರಗಳ ಪೈಕಿ 32ರಲ್ಲಿ ಟಿಎಂಸಿ ಗೆಲುವು ಸಾಧಿಸಿತ್ತು. ಶೇ 44.89ರಷ್ಟು ಮತವು ಈ ಪಕ್ಷಕ್ಕೆ ಲಭಿಸಿತ್ತು. ಆದರೆ, ಕಳೆದ ಲೋಕಸಭಾ ಚುನಾವಣೆಯ ಹೊತ್ತಿಗೆ ಟಿಎಂಸಿಯ ಮತ ಪ್ರಮಾಣವು ಶೇ 42.58ರಷ್ಟಕ್ಕೆ ಕುಸಿದಿದೆ. ಲೋಕಸಭಾ ಚುನಾವಣೆಯಲ್ಲಿ ಇಲ್ಲಿನ 24 ಕ್ಷೇತ್ರಗಳಲ್ಲಿ ಟಿಎಂಸಿಗೆ ಮುನ್ನಡೆ ಸಿಕ್ಕರೆ, 19 ಕ್ಷೇತ್ರಗಳಲ್ಲಿ ಬಿಜೆಪಿ ಮುಂದೆ ಇತ್ತು. ವಿಧಾನಸಭಾ ಚುನಾವಣೆಯಲ್ಲಿ ಎಡರಂಗ ನಾಲ್ಕು ಕ್ಷೇತ್ರಗಳಲ್ಲಿ ಮತ್ತು ಕಾಂಗ್ರೆಸ್ ಏಳು ಕ್ಷೇತ್ರಗಳಲ್ಲಿ ಗೆದ್ದಿದ್ದವು. ಆದರೆ, ಲೋಕಸಭಾ ಚುನಾವಣೆಯಲ್ಲಿ ಯಾವುದೇ ಕ್ಷೇತ್ರದಲ್ಲಿಯೂ ಈ ಪಕ್ಷಗಳಿಗೆ ಮುನ್ನಡೆ ಸಿಕ್ಕಿಲ್ಲ. 2016ರ ವಿಧಾನಸಭಾ ಚುನಾವಣೆಯಲ್ಲಿ ಎಡರಂಗ ಮತ್ತು ಕಾಂಗ್ರೆಸ್ ನಡುವೆ ಮೈತ್ರಿ ಇತ್ತು. ಲೋಕಸಭಾ ಚುನಾವಣೆಯಲ್ಲಿ ಈ ಪಕ್ಷಗಳು ಪ್ರತ್ಯೇಕವಾಗಿ ಸ್ಪರ್ಧಿಸಿದ್ದವು.

ಟಿಎಂಸಿ ಸಂಸದೆ ಶತಾಬ್ದಿ ರಾಯ್ ಅವರು ಮಾಲ್ಡಾ ಜಿಲ್ಲೆಯ ಕ್ಷೇತ್ರವೊಂದರಲ್ಲಿ ಪಕ್ಷದ ಅಭ್ಯರ್ಥಿ ಪರವಾಗಿ ಬುಧವಾರ ಮತ ಯಾಚಿಸಿದರು ಪಿಟಿಐ ಚಿತ್ರ

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಉತ್ತರ 24 ಪರಗಣ ಜಿಲ್ಲೆಯ 17 ಕ್ಷೇತ್ರಗಳ ಪೈಕಿ ಟಿಎಂಸಿ 13ರಲ್ಲಿ, ಕಾಂಗ್ರೆಸ್ ಮೂರರಲ್ಲಿ ಮತ್ತು ಸಿಪಿಎಂ ಒಂದರಲ್ಲಿ ಗೆದ್ದಿದ್ದವು. ಆದರೆ, 2019ರ ಲೋಕಸಭಾ ಚುನಾವಣೆಯಲ್ಲಿ ಚಿತ್ರಣ ಬದಲಾಗಿದೆ. 10 ಕ್ಷೇತ್ರಗಳಲ್ಲಿ ಬಿಜೆಪಿ ಮುನ್ನಡೆ ಪಡೆದರೆ, ಟಿಎಂಸಿಗೆ ಏಳು ಕ್ಷೇತ್ರಗಳಲ್ಲಿ ಮಾತ್ರ ಹೆಚ್ಚು ಮತಗಳು ಸಿಕ್ಕಿವೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಉತ್ತರ ದಿನಜ್‌ಪುರ ಜಿಲ್ಲೆಯಲ್ಲಿನ ಒಂಬತ್ತು ಕ್ಷೇತ್ರಗಳಲ್ಲಿ ಟಿಎಂಸಿಗೆ 4, ಸಿಪಿಎಂಗೆ ಒಂದು, ಕಾಂಗ್ರೆಸ್‌ಗೆ ಮೂರು ಮತ್ತು ಫಾರ್ವರ್ಡ್ ಬ್ಲಾಕ್ ಒಂದು ಕ್ಷೇತ್ರಗಳಲ್ಲಿ ಗೆದ್ದಿದ್ದವು. ಕಳೆದ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿಗೆ ಐದು ಮತ್ತು ಬಿಜೆಪಿಗೆ ನಾಲ್ಕು ಕ್ಷೇತ್ರಗಳಲ್ಲಿ ಮುನ್ನಡೆ ಸಿಕ್ಕಿದೆ.

ಕಳೆದ ವಿಧಾನಸಭಾ ಹಣಾಹಣಿಯಲ್ಲಿ ಪೂರ್ವ ವರ್ಧಮಾನ ಜಿಲ್ಲೆಯ ಎಂಟು ಕ್ಷೇತ್ರಗಳ ಪೈಕಿ ಏಳರಲ್ಲಿ ಟಿಎಂಸಿ ಗೆದ್ದಿತ್ತು. ಒಂದು ಸಿಪಿಎಂ ಪಾಲಾಗಿತ್ತು. ಕಳೆದ ಲೋಕಸಭಾ ಚುನಾವಣೆಯಲ್ಲಿ ಆರರಲ್ಲಿ ಟಿಎಂಸಿ ಮತ್ತು ಎರಡರಲ್ಲಿ ಬಿಜೆಪಿಗೆ ಮುನ್ನಡೆ ಸಿಕ್ಕಿದೆ.

ನಾದಿಯಾ ಜಿಲ್ಲೆಯ ಒಂಬತ್ತು ಕ್ಷೇತ್ರಗಳಲ್ಲಿ ಟಿಎಂಸಿ ಕಳೆದ ಬಾರಿ ಎಂಟರಲ್ಲಿ ಗೆದ್ದಿತ್ತು. ಕಳೆದ ಲೋಕಸಭಾ ಚುನಾವಣೆಯಲ್ಲಿಯೂ ಟಿಎಂಸಿಗೆ ಆರರಲ್ಲಿ ಮುನ್ನಡೆ ದೊರೆತಿದೆ. ಎರಡು ಕ್ಷೇತ್ರಗಳಲ್ಲಿ ಬಿಜೆಪಿ ಮುನ್ನಡೆ ಸಾಧಿಸಿದೆ.

ಮತುಆ ಸಮುದಾಯ ನಿರ್ಣಾಯಕ

ಉತ್ತರ 24 ಪರಗಣ ಜಿಲ್ಲೆಯ ಹಲವು ಕ್ಷೇತ್ರಗಳಲ್ಲಿ ಮತುಆ ಸಮುದಾಯದ ಮತದಾರರೇ ನಿರ್ಣಾಯಕ. ಪೂರ್ವ ಪಾಕಿಸ್ತಾನ ಅಥವಾ ಈಗಿನ ಬಾಂಗ್ಲಾದೇಶದಿಂದ ವಲಸೆ ಬಂದು ಪಶ್ಚಿಮ ಬಂಗಾಳದಲ್ಲಿ ನೆಲೆಯಾದ ಮತುಆ ಮತ್ತು ದಲಿತ ಹಿಂದೂ ಸಮುದಾಯದ ಮತದಾರರ ಸಂಖ್ಯೆ ಸುಮಾರು ಮೂರು ಕೋಟಿಯಷ್ಟಿದೆ. ಯಾವುದೇ ಪಕ್ಷವೂ ನಿರ್ಲಕ್ಷಿಸಲಾಗದ ಮತಬ್ಯಾಂಕ್ ಇದು. ಪೌರತ್ವ ತಿದ್ದುಪಡಿ ಕಾಯ್ದೆ ಮುಂದಿಟ್ಟು ಈ ವರ್ಗವನ್ನು ಸೆಳೆಯುವ ಯತ್ನವನ್ನು ಬಿಜೆಪಿ ಮಾಡಿದೆ. ಸರ್ಕಾರಿ ಸೌಲಭ್ಯಗಳನ್ನು ಘೋಷಿಸುವ ಮೂಲಕ ಟಿಎಂಸಿಯೂ ಈ ಸಮುದಾಯಗಳ ಮನವೊಲಿಕೆಗೆ ಮುಂದಾಗಿದೆ.

3 ಹಂತಗಳ ಮತದಾನ ವಿಲೀನ ಅಸಾಧ್ಯ: ಆಯೋಗ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಯಲ್ಲಿ ಬಾಕಿ ಉಳಿದಿರುವ ಮೂರು ಹಂತಗಳ ಮತದಾನವನ್ನು ಒಂದೇ ದಿನ ನಡೆಸಬೇಕು ಎಂಬ ಟಿಎಂಸಿ ಬೇಡಿಕೆ ಜಾರಿ ಸಾಧ್ಯವಿಲ್ಲ ಎಂದು ಚುನಾವಣಾ ಆಯೋಗವು ಬುಧವಾರ ಹೇಳಿದೆ.

ಆಯೋಗವು ಟಿಎಂಸಿಗೆ ಪತ್ರ ಬರೆದು, ಕೋವಿಡ್‌ನಿಂದ ಮತದಾರರನ್ನು ರಕ್ಷಿಸುವುದಕ್ಕಾಗಿ ಕೈಗೊಂಡ ಕ್ರಮಗಳನ್ನು ವಿವರಿಸಿದೆ. ಚುನಾವಣೆಗೆ ಸಂಬಂಧಿಸಿದ ಕಾನೂನುಗಳನ್ನೂ ಪತ್ರದಲ್ಲಿ ಉಲ್ಲೇಖಿಸಲಾಗಿದೆ. ಮತದಾನದ ವೇಳಾಪಟ್ಟಿಯಲ್ಲಿ ಯಾವುದೇ ಬದಲಾವಣೆ ಸಾಧ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದೆ.

ಗುರುವಾರ ಆರನೇ ಹಂತದ ಮತದಾನ ನಡೆಯಲಿದ್ದು, 26 ಮತ್ತು 29ರಂದು ಏಳು ಮತ್ತು ಎಂಟನೇ ಹಂತದ ಮತದಾನ ನಡೆಯಲಿದೆ.

....ಹಿಂದಿನ ಪುಟದಿಂದ

ಗ್ರಾಮ : ಪಲ್ಲೇರಾಯನಹಳ್ಳಿ — ತಾಲ್ಲೂಕು : ಕುಣಿಗಲ್
ಹೋಬಳಿ : ಅಮೃತೂರು — ಜಿಲ್ಲೆ : ತುಮಕೂರು

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸರ್ವೆ ನಂಬರ್	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಐನು ಎ–ಗುಂಟೆ	ಖರಾಬು ಎ–ಗುಂಟೆ	ಒಟ್ಟು ಎ–ಗುಂಟೆ
155	ಕೆ.ಬೋರೇಗೌಡ ಬಿನ್ ದೊಡ್ಡಕಾಡೇಗೌಡ	23/3ಎ	0.08.04	–	0.08.04
156	ರಾಜೇಂದ್ರಪ್ರಸಾದ್ ಬಿನ್ ಪಟೇಲ್ ಮಾಳಿಗೆಗೌಡ	23/1ಜಿ	0.02.08	–	0.02.08
157	ಬೋರೇಗೌಡ ಉ.ಬೋರಯ್ಯ ಬಿನ್ ಲೇ.ಚಿಕ್ಕೇಗೌಡ, ಕೆ.ಬಿ.ಸಿದ್ದರಾಮು ಬಿನ್ ಬೋರೇಗೌಡ ಉ.ಬೋರಯ್ಯ	24/1	0.02.08	–	0.02.08
158	ಬೋರೇಗೌಡ ಉ.ಬೋರಯ್ಯ ಬಿನ್ ಲೇ.ಚಿಕ್ಕೇಗೌಡ, ಕೆ.ಬಿ.ಸಿದ್ದರಾಮು ಬಿನ್ ಬೋರೇಗೌಡ ಉ.ಬೋರಯ್ಯ	24/2	0.0.¼	–	0.0.¼
159	ಲಕ್ಷ್ಮಮ್ಮ ಕೋಂ ಲೇ.ವೆಂಕಟೇಶ್, ಶೋಭ ಕೋಂ ಲೇ.ಶಿವರಾಮು ಉ.ವೆಂಕಟಯ್ಯ, ಗೌರಮ್ಮ ಕೋಂ ಲೇ.ಮುನಿಯಪ್ಪ ಉ.ಸ್ವಾಮಿ	27/1	0.01.08	–	0.01.08
160	ಲಕ್ಷ್ಮಮ್ಮ ಎನ್ ಕೋಂ ಲೇ.ಪುಟ್ಟಸ್ವಾಮಿ, ವಿಜಯಲಕ್ಷ್ಮೀ ಎಂ.ಡಿ. ಕೋಂ ಲೇ.ಪುಟ್ಟರಾಮಯ್ಯ, ಜಗದೀಶ್ ಸಿ ಬಿನ್ ಲೇ.ಬೋರಯ್ಯ, ಶುಭ ಪಿ ಕೋಂ ಜಗದೀಶ್ ಸಿ	28	0.03.00	–	0.03.00
161	ವಿಜಯಮ್ಮ ಕೋಂ ಎ.ಮಹದೇವ	31/3	0.01.½	–	0.01.½
		ಒಟ್ಟು	**1.14.12**	–	**1.14.12**

ಗ್ರಾಮ : ಉಂಗ್ರ — ತಾಲ್ಲೂಕು : ಕುಣಿಗಲ್
ಹೋಬಳಿ : ಅಮೃತೂರು — ಜಿಲ್ಲೆ : ತುಮಕೂರು

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸರ್ವೆ ನಂಬರ್	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಐನು ಎ–ಗುಂಟೆ	ಖರಾಬು ಎ–ಗುಂಟೆ	ಒಟ್ಟು ಎ–ಗುಂಟೆ
162	ಜಿ.ವಿ. ವಿಜಯೇಂದ್ರಪ್ರಸಾದ್ ಬಿನ್ ಗೋವಿಂದಪ್ಪ	23/2	0.02.00	–	0.02.00
163	ಜಿ.ವಿಜಯೇಂದ್ರಪ್ರಸಾದ್ ಬಿನ್ ಸಿ.ವಿ.ಗೋವಿಂದಪ್ಪ	23/3ಬಿ2	0.06.04	–	0.06.04
164	ಜಿ.ವಿಜಯೇಂದ್ರಪ್ಪಗೌಡ ಬಿನ್ ವಿ.ಗೋವಿಂದಯ್ಯ	23/4	0.06.08	–	0.06.08
165	ಭದ್ರಮ್ಮ ಉ.ಸರೋಜಮ್ಮ ಕೋಂ ಸಿ.ವಿ.ಗೋವಿಂದಯ್ಯ, ವೆಂಕಟೇಶ ಬಿನ್ ತಿರುಮಲಯ್ಯ ಉ.ಸಣ್ಣಯ್ಯ, ರಾಮಯ್ಯ ಬಿನ್ ತಿರುಮಲಯ್ಯ ಉ.ಸಣ್ಣಯ್ಯ, ರಮೇಶ ಬಿನ್ ತಿರುಮಲಯ್ಯ ಉ.ಸಣ್ಣಯ್ಯ, ಸಿ.ಹೇಮಾವತಿ ಕೋಂ ಲೇ.ಎಸ್.ಎನ್.ಚಂದ್ರಕುಮಾರ್ ಅಗಸರ ಚೆಲುವಯ್ಯ ಸಣ್ಣಯ್ಯ ಉ.ತಿರುಮಲಯ್ಯ, ನಾರಾಯಣಶೆಟ್ಟಿ, ಪುಟ್ಟೇಗೌಡ ಬಿನ್ ತಿಮ್ಮೇಗೌಡ	25	0.14.04	–	0.14.04
166	ಕೆ.ಬೋರೇಗೌಡ ಬಿನ್ ದೊಡ್ಡಕಾಡೇಗೌಡ	54	0.03.08	–	0.03.08
167	ಹೆಚ್.ಲಿಂಗಯ್ಯ ಬಿನ್ ಹುಚ್ಚೇಗೌಡ, ರಾಜಣ್ಣ ಬಿನ್ ಹುಚ್ಚೇಗೌಡ, ಹೆಚ್.ಶಂಕರಲಿಂಗಯ್ಯ ಬಿನ್ ಹುಚ್ಚೇಗೌಡ, ವಜ್ರಯ್ಯ ಬಿನ್ ಹೊನ್ನೇಗೌಡ	100/1	0.01.08	–	0.01.08
168	ವಜ್ರಯ್ಯ ಬಿನ್ ಹೊನ್ನೇಗೌಡ	100/2	0.01.08	–	0.01.08
169	ಸಿ.ಎಂ.ಚನ್ನಯ್ಯ ಬಿನ್ ಮರಿಗೌಡ, ಚನ್ನಯ್ಯ, ಅಣ್ಣಯ್ಯರೆಡ್ಡಿ ಬಿನ್ ಗೋವಿಂದರೆಡ್ಡಿ, ಚನ್ನಯ್ಯ ಬಿನ್ ಮರಿಗೌಡನ ಹುಚ್ಚೇಗೌಡ, ನಿಂಗಮ್ಮ ಕೊಂ ಲೇ.ನಾರಾಯಣ	101/1	0.02.12	–	0.02.12
170	ಮಾಳಿಗೇಗೌಡ, ಸಣ್ಣನಿಂಗಮ್ಮ, ಎಂ.ಸಿ.ಮಾಳಿಗೇಗೌಡ ಬಿನ್ ಲೇ.ಹೊನ್ನೇಗೌಡ, ಎಂ.ಸಿ.ರಾಜೇಂದ್ರಪ್ರಸಾದ್, ಜಯಲಕ್ಷ್ಮಮ್ಮ, ಎಂ.ಸಿ.ಚನ್ನೇಗೌಡ ಬಿನ್ ಚಿಕ್ಕಚನ್ನಯ್ಯ, ಎಂ.ಸಿ.ಬಂಗಾರಪ್ಪ ಬಿನ್ ಲೇ.ಚಿಕ್ಕಚನ್ನಯ್ಯ	101/2	0.03.04	–	0.03.04
171	ಸಿ.ಕಾಳಯ್ಯ ಬಿನ್ ಸಣ್ಣಯ್ಯ, ಸಿ.ವೆಂಕಟೇಶ್, ಮಂಗಳಮ್ಮ ಕೋಂ ಲೇ.ಕಾಳಹುಚ್ಚಯ್ಯ, ಚನ್ನಯ್ಯ, ಹುಚ್ಚೇಗೌಡ, ಕಾಳೇಗೌಡ, ವರದಶೆಟ್ಟಿ, ಹೆಚ್.ಕಾಲೇಗೌಡ ಬಿನ್ ಹುಚ್ಚಯ್ಯ, ಕಾಳಹುಚ್ಚಯ್ಯ ಬಿನ್ ಹುಚ್ಚಯ್ಯ	102/1	0.02.08	–	0.02.08
172	ಸರೋಜಮ್ಮ ಕೋಂ ಲೇ.ನಿಂಗಪ್ಪ, ಲಕ್ಷ್ಮಮ್ಮ ಕೋಂ ಲೇ.ನಿಂಗಪ್ಪ	103/2ಎ	0.04.04	–	0.04.04
173	ಸಿ.ಎಂ.ಚನ್ನಮಲ್ಲೇಗೌಡ, ರಾಮಣ್ಣ ಬಿನ್ ನರಸೇಗೌಡ, ಶಾಂತಮ್ಮ ಬಿನ್ ಲಿಂಗಮ್ಮನ ಸಾಕು ಮಗಳು, ವಿ.ಜಯರಾಮಯ್ಯ ಬಿನ್ ವೆಂಕಟರಾಮಯ್ಯ, ಕೆಂಪಮ್ಮ ಕೋಂ ಪುಟ್ಟಸ್ವಾಮಿ	104/1	0.03.04	–	0.03.04
174	ರಾಮಯ್ಯ ಬಿನ್ ಕೆಂಪಯ್ಯ, ಮೂಗೂರಯ್ಯ, ದಾಳಯ್ಯ.	105/2	0.01.00	–	0.01.00
175	ಪ.ಚನ್ನೇಗೌಡ ಬಿನ್ ಚನ್ನೇಗೌಡ, ಕಾಳಹುಚ್ಚಯ್ಯ ಬಿನ್ ಕುಳ್ಳೇಗೌಡ, ಗೋವಿಂದಯ್ಯ ಬಿನ್ ಕುಳ್ಳೇಗೌಡ	107/1	0.01.00 0.01.00	– –	0.01.00 0.01.00
176	ಶಿವನಂಜಮ್ಮ ಕೋಂ ಲೇ.ಚಿಕ್ಕಕಾಳಯ್ಯ	107/2	0.01.00	–	0.01.00
177	ಚಿಕ್ಕಮಾಯಮ್ಮ ಕೊಂ ಲೇ.ತಿಮ್ಮಯ್ಯ	108/1	0.0.½	–	0.0.½
178	ಸಂಜೀವಶೆಟ್ಟಿ ಬಿನ್ ವುಂಗ್ರದ	108/2ಎ2	0.0.½	–	0.0.½
	ಚಿಕ್ಕಹೊನ್ನ ಶೆಟ್ರು				
179	ಸಣ್ಣಮರಿಯಪ್ಪ ಬಿನ್ ಲೇ.ಭದ್ರೇಗೌಡ, ಸಣ್ಣಮರಿಯಪ್ಪ ಬಿನ್ ಲೇ.ಭದ್ರೇಗೌಡ, ಸಣ್ಣಮರಿಯಪ್ಪ ಬಿನ್ ಲೇ.ಭದ್ರೇಗೌಡ, ಗೌರಮ್ಮ, ತಿಮ್ಮಮ್ಮ ಕೋಂ ಲೇ. ಈರೇಗೌಡ, ಭದ್ರಯ್ಯ ಬಿನ್ ಭದ್ರಯ್ಯ, ನಂಜೇಗೌಡ ಬಿನ್ ಲಕ್ಕೇಗೌಡ	109	0.02.08	–	0.02.08
180	ನಂಜಯ್ಯ ಬಿನ್ ಲಕ್ಕೇಗೌಡ, ಬಿಳಿಗಿರಿಚನ್ನಯ್ಯ ವಗೈರೆ, ಪುಟ್ಟೇಗೌಡ, ರಾಮಯ್ಯ, ಚನ್ನಯ್ಯನ ಚಿಕ್ಕಕಾಳಯ್ಯ, ಎಂ.ಚನ್ನೇಗೌಡ, ಕಾಳಹುಚ್ಚಯ್ಯ, ಕೃಷ್ಣಪ್ಪ, ಲಿಂಗಯ್ಯ, ಕೆ.ಲಿಂಗಯ್ಯ ಬಿನ್ ಚಿಕ್ಕೇಗೌಡ, ಸಿ.ಕಾಳೇಗೌಡ ಬಿನ್ ಚನ್ನಯ್ಯ, ಕೆ.ಲಿಂಗಯ್ಯ ಬಿನ್ ಚಿಕ್ಕೇಗೌಡ, ಎಂ.ಚನ್ನೇಗೌಡ ಬಿನ್ ಮಾಯಪ್ಪಗೌಡ, ಶ್ರೀಕಂಠಶೆಟ್ಟಿ ಬಿನ್ ಕೆಂಪಶೆಟ್ಟಿ, ಬಿ.ರಾಜೇಶ್ವರಿ ಕೋಂ ಎನ್,ನರಸಿಂಹಮೂರ್ತಿ, ಎಂ.ಸುರೇಶ ಬಿನ್ ಮಾಯಪ್ಪಗೌಡ	110	0.03.08	–	0.03.08
181	ಗಂಗಯ್ಯ ಬಿನ್ ಚನ್ನೇಗೌಡ, ನಾರಾಯಣ್, ಮಾದೇಗೌಡ, ಅಣ್ಣಯ್ಯರೆಡ್ಡಿ ಬಿನ್ ಮುನಿಯರೆಡ್ಡಿ, ಚಿಕ್ಕಚನ್ನಯ್ಯ ಬಿನ್ ಮರಿಗೌಡ, ಚನ್ನೇಗೌಡ, ರಾಮಯ್ಯ ಬಿನ್ ಮರೀಗೌಡ, ಚನ್ನೇಗೌಡ, ಬಿ.ಚನ್ನಯ್ಯ ಬಿನ್ ಬುಡ್ಡೇಗೌಡ	111/1	0.02.08	–	0.02.08
182	ಕಾಳಯ್ಯ ಬಿನ್ ಹುಚ್ಚೇಗೌಡ, ರಾಮಯ್ಯ ಬಿನ್ ಮಾಯಪ್ಪ, ಅಕ್ಕಮ್ಮ ಕೋಂ ಚನ್ನಯ್ಯ, ತಿಮ್ಮಮ್ಮ ಕೋಂ ಗಂಗಯ್ಯ, ಅಕ್ಕಮ್ಮ ಕೋಂ ಚನ್ನಯ್ಯ, ಶಿವಮ್ಮ ಕೋಂ ಕಾಳೇಗೌಡ, ಶಿವಮ್ಮ ಕೋಂ ಕಾಳೇಗೌಡ, ಚಿಕ್ಕಚನ್ನಯ್ಯ ಬಿನ್ ಲೇ.ಮರಿಗೌಡನ ಚನ್ನೇಗೌಡ, ಬಿ.ರಾಜೇಶ್ವರಿ ಕೋಂ ಎನ್.ನರಸಿಂಹಮೂರ್ತಿ, ಬಿ.ವೀರನಾರಾಯಣ ಬಿನ್ ಲೇ.ಬಿ.ಚನ್ನಯ್ಯ, ರಾಜ ಬಿನ್ ಸಂಜೀವಯ್ಯ	111/2	0.01.08	–	0.01.08
183	ನರಸಮ್ಮ ಕೋಂ ಬಿ.ಈರಯ್ಯ, ಚನ್ನೇಗೌಡ ಬಿನ್ ಬಿ.ಈರಯ್ಯ, ಸಾವಿತ್ರಮ್ಮ ಕೋಂ ಚನ್ನೇಗೌಡ	112/6	0.01.08	–	0.01.08
184	ಪ.ಮಳಿಗೇಗೌಡ್ನ, ಚನ್ನೇಗೌಡ ಬಿನ್, ಚಿಕ್ಕಚನ್ನಯ್ಯ, ರುಕ್ಮಿಣಿಯಮ್ಮ ಕೋಂ ನಾರಾಯಣಪ್ಪ, ಸಣ್ಣನಿಂಗಮ್ಮ ಕೊಂ ಲೇ.ಮಾಳೀಗೇಗೌಡ, ಎಂ.ಸಿ.ಚನ್ನೇಗೌಡ ಬಿನ್ ಚಿಕ್ಕಚೆನ್ನಯ್ಯ, ತಮ್ಮಯ್ಯ ಬಿನ್ ಪ.ಮಾಳಿಗೇಗೌಡ, ಎಂ.ಸಿ.ಬಂಗಾರಪ್ಪ ಬಿನ್ ಲೇ.ಚಿಕ್ಕಚೆನ್ನಯ್ಯ	115/2	0.01.00	–	0.01.00
185	ಚಂದ್ರಮ್ಮ ಕೊಂ ಚಿಕ್ಕಣ್ಣ @ ಚಿಕ್ಕೇಗೌಡ	124/1ಎ2	0.09.08	0.04.00	0.05.08
186	ಕೆ.ಜಗದೀಶ ಬಿನ್ ಕೆಂಪಶೆಟ್ಟಿ, ನಿಂಗಮ್ಮ ಕೋಂ ಕಾಳಯ್ಯ, ಕೆಂಪಯ್ಯ ಕೋಂ ಕಾಳಪ್ಪ, ಹೇಮಾವತಿ ಸಿ ಕೊಂ ಲೇ.ಎಸ್.ಎಲ್.ಚಂದ್ರಕುಮಾರ್, ದೊಡ್ಡಮ್ಮ ಕೋಂ ಲೇ.ಹುಚ್ಚಯ್ಯ, ಸರೋಜಮ್ಮ ಕೋಂ ರಾಮಯ್ಯ	125/1	0.01.08	0.0.¼	0.01.¼
187	ಸ್ಕೂಲ್ ನಿವೇಶನಕ್ಕಾಗಿ ಸರ್ಕಾರಕ್ಕೆ ಬಿಡಿಒ ರವರ ಮುಖಾಂತರ	126/2	0.0.½	–	0.0.½
		ಒಟ್ಟು	**1.36.¼**	–	**1.36.¼**

ಗ್ರಾಮ : ಯಡವಾಣೆ — ತಾಲ್ಲೂಕು : ಕುಣಿಗಲ್
ಹೋಬಳಿ : ಅಮೃತೂರು — ಜಿಲ್ಲೆ : ತುಮಕೂರು

ಕ್ರಮ ಸಂಖ್ಯೆ	ಖಾತೆದಾರರ ಹೆಸರು ಪಹಣಿಯಂತೆ ಶ್ರೀಯುತರು/ಶ್ರೀಮತಿ	ಸರ್ವೆ ನಂಬರ್	ಭೂಸ್ವಾಧೀನಕ್ಕೆ ಒಳಪಡುವ ವಿಸ್ತೀರ್ಣ ಐನು ಎ–ಗುಂಟೆ	ಖರಾಬು ಎ–ಗುಂಟೆ	ಒಟ್ಟು ಎ–ಗುಂಟೆ
188	ಈರಮ್ಮ ಕೋಂ ಮಂಚೇಗೌಡ	51/43	0.0.½	–	0.0.½
189	ನಂಜೇಗೌಡ ಬಿನ್ ಚನ್ನೇಗೌಡನ ಹುಚ್ಚೇಗೌಡ, ಮಂಚೇಗೌಡ	51/14	0.01.08	–	0.01.08
190	ಕಾಡಮ್ಮ ಬಿನ್ ನಂಜಯ್ಯ, ನಂಜುಂಡಯ್ಯ	51/18	0.02.08	–	0.02.08
191	ವೈ.ಆರ್.ಜಯರಾಮ ಬಿನ್ ಲೇ.ದೊಡ್ಡರಾಮಯ್ಯ, ವಿ.ಡಿ.ಪದ್ಮ ಕೋಂ ವೈ.ಆರ್.ಜಯರಾಮ, ಡಿ.ಕುಳ್ಳೇಗೌಡ ಬಿನ್ ಲೇ.ದೊಡ್ಡರಾಮಯ್ಯ, ಡಿ.ಸೌಮ್ಯ ಕೋಂ ಡಿ.ಕುಳ್ಳೇಗೌಡ	51/19	0.01.08	–	0.01.08
192	ಶಿವಪ್ರಕಾಶ್ ಬಿನ್ ಲೇ.ಎ.ಎನ್ ಕಾಳಯ್ಯ	51/20	0.01.08	–	0.01.08
193	ವೈ.ಆರ್.ಜಯರಾಮ ಬಿನ್ ಲೇ.ದೊಡ್ಡರಾಮಯ್ಯ, ವಿ.ಡಿ.ಪದ್ಮ ಕೋಂ ವೈ.ಆರ್.ಜಯರಾಮ, ಡಿ.ಕುಳ್ಳೇಗೌಡ ಬಿನ್ ಲೇ.ದೊಡ್ಡರಾಮಯ್ಯ, ಡಿ.ಸೌಮ್ಯ ಕೋಂ ಡಿ.ಕುಳ್ಳೇಗೌಡ	51/21	0.01.04	–	0.01.04
194	ವೈ.ಆರ್.ಜಯರಾಮ ಬಿನ್ ಲೇ.ದೊಡ್ಡರಾಮಯ್ಯ, ವಿ.ಡಿ.ಪದ್ಮ ಕೋಂ ವೈ.ಆರ್.ಜಯರಾಮ, ಡಿ.ಕುಳ್ಳೇಗೌಡ ಬಿನ್ ಲೇ.ದೊಡ್ಡರಾಮಯ್ಯ, ಡಿ.ಸೌಮ್ಯ ಕೋಂ ಡಿ.ಕುಳ್ಳೇಗೌಡ	51/22	0.01.00	–	0.01.00
195	ವೈ.ಸಿ.ಶ್ರೀಕಂಠಯ್ಯ ಬಿನ್ ಮಂಚೇಗೌಡ	51/25	0.0.½ 0.0.½	– –	0.0.½ 0.0.½
196	ವೈ.ಸಿ.ಶಿವರಾಮಯ್ಯ ಬಿನ್ ಚಿಕ್ಕಚನ್ನಯ್ಯ	55/1	1.01.½	–	1.01.½
197	ನಂಜುಂಡಯ್ಯ ಬಿನ್ ಕರೀಗೌಡ, ಪುಟ್ಟತಾಯಮ್ಮ ಕೋಂ ನಂಜುಂಡಯ್ಯ, ವೈ.ಸಿ.ಶಿವರಾಮಯ್ಯ ಬಿನ್ ಲೇ.ಚಿಕ್ಕಚನ್ನಯ್ಯ, ನಂಜಮ್ಮ ಕೋಂ ಲೇ.ಚನ್ನಯ್ಯ	55/2	0.0.½	–	0.0.½
198	ತೋಟಿ ಇನಾಂತಿ, ಬೋರಯ್ಯ ಬಿನ್ ಸಣ್ಣಗವಿಯಯ್ಯ, ವೈ.ಬಿ.ಬೋರಯ್ಯ ಬಿನ್ ಬೋರಾಮೇಸ್ತ್ರಿ, ವೈ.ಬಿ.ಗಂಗಾಧರಯ್ಯ ಬಿನ್ ಬೋರಾಮೇಸ್ತ್ರಿ, ವೈ.ಬಿ.ಬೋರಯ್ಯ ಬಿನ್ ಬೋರಾಮೇಸ್ತ್ರಿ, ಶಿವಣ್ಣ ಬಿನ್ ಬೋರಾಮೇಸ್ತ್ರಿ, ಸಣ್ಣನಿಂಗಯ್ಯ ಬಿನ್ ಬೋರಯ್ಯ, ಶೀರಯ್ಯ ಬಿನ್ ದೊಡ್ಡಗವಿಯಯ್ಯ, ವೈ.ಬಿ.ರಾಮಯ್ಯ ಬಿನ್ ಗೋಟಯ್ಯ ಉ. ಬೋರಯ್ಯ, ಎಂ.ರಾಜು ಬಿನ್ ಚಿಕ್ಕಬ್ಯಾಟಯ್ಯ ಉ.ಮಾಲಯ್ಯ,ರಾಮಯ್ಯ ಬಿನ್ ಲೇ.ತಿಮ್ಮಯ್ಯ, ಹುಚ್ಚಮ್ಮ ಕೋಂ ರಾಮಯ್ಯ, ರತ್ನಮ್ಮ ಕೋಂ ಲೇ.ಎಂ. ತಿಮ್ಮರಾಜು, ನವೀನ ಟಿ. ಬಿನ್ ಲೇ.ಎಂ. ತಿಮ್ಮರಾಜು, ಭಾರತಿ ಬಿನ್ ಲೇ.ಎ.ಎಂ. ವೆಂಕಟರಾಮಯ್ಯ, ಶರತ್ ಕುಮಾರ್ ವಿ. ಬಿನ್ ಲೇ.ಎ.ಎನ್. ವೆಂಕಟರಾಮಯ್ಯ, ಎ.ಎಂ.ಕೃಷ್ಣಪ್ಪ ಬಿನ್ ಮಂಜಯ್ಯ, ವೈ.ಎಸ್.ಲಿಂಗಯ್ಯ ಬಿನ್ ಸಣ್ಣಗವಿಯಯ್ಯ	78	1.23.00	–	1.23.00
199	ನಂಜಯ್ಯ ಉ.ನಂಜೇಗೌಡ ಬಿನ್ ಮಾಗೇಗೌಡ	108/1	0.0.¾	–	0.0.¾
200	ನಂಜಯ್ಯ ಉ.ನಂಜೇಗೌಡ ಬಿನ್ ಮಾಗೇಗೌಡ	108/6	0.02.04	–	0.02.04
201	ಶಿವನಂಜಯ್ಯ ಬಿನ್ ಮೂಗೂರಯ್ಯ, ಜವರಾಯಿ ಬಿನ್ ಮೂಗೂರಯ್ಯ, ವೈ.ಡಿ.ಮಹಾಲಿಂಗಯ್ಯ ಬಿನ್ ದಾಳೇಗೌಡ, ಚೆನ್ನಮ್ಮ ಕೋಂ ವೈ.ಡಿ.ಮಹಾಲಿಂಗಯ್ಯ, ವೈ.ಡಿ.ರಾಮಕೃಷ್ಣಯ್ಯ, ಜವರಾಯಿ ಬಿನ್ ಮೂಗೂರಯ್ಯ, ಲಿಂಗಯ್ಯ ಬಿನ್ ಮೂಗೂರಯ್ಯ, ನಿಂಗಮ್ಮ ಕೋಂ ಲೇ.ವೈ.ಡಿ.ಶಿವಣ್ಣ, ತಿಬ್ಬ ಬಿನ್ ದಾಳಿ, ಚಂದ್ರಮ್ಮ ಕೋಂ ಲೇ.ಶಿವಣ್ಣ.	241/4	0.0.¼	–	0.0.¼
202	ವೈ.ಡಿ.ಪುಟ್ಟಸ್ವಾಮಯ್ಯ	241/6	0.0.¼	–	0.0.¼
203	ವೈ.ಎಸ್.ನಂಜಯ್ಯ ಬಿನ್ ನಂಜಯ್ಯ	241/5	0.08.08	–	0.08.08
204	ಮರಿನಂಜಮ್ಮ ಕೋಂ ಬಚ್ಚೇಗೈಗೌಡ, ವೈ.ಬಿ.ರಾಮಯ್ಯ ಬಿನ್ ಗೋಟಯ್ಯ ಉ.ಬೋರಯ್ಯ, ವೈ.ಬಿ.ಬೋರಯ್ಯ ಬಿನ್ ಬೋರಾಮೇಸ್ತ್ರಿ, ವೈ.ಬಿ.ಗಂಗಾಧರಯ್ಯ ಬಿನ್ ಬೋರಾಮೇಸ್ತ್ರಿ, ವೈ.ಬಿ.ಭೈರಯ್ಯ ಬಿನ್ ಬೋರಾಮೇಸ್ತ್ರಿ, ವೈ.ಬಿ.ಶಿವಣ್ಣ ಬಿನ್ ಬೋರಾಮೇಸ್ತ್ರಿ, ಎ.ಎಂ.ಕೃಷ್ಣ ಬಿನ್ ಮುದ್ದಯ್ಯ, ಶೀರಯ್ಯ ಬಿನ್ ದೊಡ್ಡಗವಿಯಯ್ಯ, ಎ.ಎಂ.ವೆಂಕಟರಾಮಯ್ಯ ಬಿನ್ ಉಜ್ಜಯ್ಯ, ಎಂ.ರಾಜು ಬಿನ್ ಚಿಕ್ಕಬ್ಯಾಟಯ್ಯ, ರತ್ನಮ್ಮ ಕೋಂ ಲೇ.ಎಂ.ತಿಮ್ಮರಾಜು, ನವೀನ ಟಿ. ಬಿನ್ ಲೇ.ಎಂ.ತಿಮ್ಮರಾಜು, ರಾಮಯ್ಯ ಬಿನ್ ಲೇ.ತಿಮ್ಮಯ್ಯ, ಹುಚ್ಚಮ್ಮ ಕೋಂ ರಾಮಯ್ಯ, ತೋಟಿ ಇನಾಂ, ತಿಮ್ಮಯ್ಯ ಬಿನ್ ಕರಿಯ, ಬ್ಯಾಟಯ್ಯ ಬಿನ್ ತಿಮ್ಮಯ್ಯ, ಮಜ್ಜಯ್ಯ ಬಿನ್ ತಿಮ್ಮಯ್ಯ, ತಿಮ್ಮಯ್ಯ ಬಿನ್ ತಿಮ್ಮಯ್ಯ, ಚಿಕ್ಕಬ್ಯಾಟಯ್ಯ ಬಿನ್ ಮಾಳಯ್ಯ, ಲಿಂಗಯ್ಯ ಬಿನ್ ಬೋರಯ್ಯ, ಬೋರಯ್ಯ ಉ.ಬುಳ್ಳಯ್ಯ, ಚಿಕ್ಕಗವಿಯ ಉ.ಗುಯ್ಯಯ್ಯ ಬಿನ್ ದೊಡ್ಡಗವಿಯಯ್ಯ, ಗಂಗಾಧರಯ್ಯ ಬಿನ್ ಬೋರಾಮೇಸ್ತ್ರಿ, ಲಿಂಗಯ್ಯ ಉ.ಬೋರಯ್ಯ, ಟಿ.ಶ್ರೀನಿವಾಸ ಬಿನ್ ಲೇ.ತಿಮ್ಮಯ್ಯ, ರಾಜೇಶ್ವರಿ ಕೋಂ ಟಿ.ಶ್ರೀನಿವಾಸ, ಗೋವಿಂದರಾಜು ಬಿನ್ ಲೇ.ತಿಮ್ಮಯ್ಯ, ಸುಶೀಲ ಕೋಂ ಗೋವಿಂದರಾಜು	242	0.6.¾	**0.0.¼**	0.6.½
205	ವೈ.ಸಿ.ಶಿವರಾಮಯ್ಯ ಬಿನ್ ಲೇ.ಚಿಕ್ಕಚನ್ನಯ್ಯ	244/9	0.01.04	–	0.01.04
206	ವೈ.ಎಂ.ಜಯರಾಮಯ್ಯ ಬಿನ್ ಬೆಟ್ಟಲಿಂಗಯ್ಯ ಉ.ಮಳ್ಳಪ್ಪ	244/10ಬಿ	0.04.08	–	0.04.08
207	ಮಂಚಯ್ಯ ಬಿನ್ ಚಿಕ್ಕನಂಜ	244/14	0.02.00	–	0.02.00
208	ಕಟ್ಟೆ	77	0.11.08	**0.11.08**	–
		ಒಟ್ಟು	**3.33.08**	**0.11.12**	**3.21.12**

ಸಹಿ/–
(ಆರ್.ಲೋಕ್‌ನಾಥ್, ಕೆ.ಎ.ಎಸ್ (ಹಿ.ಶ್ರೇ)
ವಿಶೇಷ ಜಿಲ್ಲಾಧಿಕಾರಿ(ಭೂಸ್ವಾ),
ಯೋ.ಅ.ಘ., ಕ.ರಾ.ಹೆ.ಅ.ಯೋ., ಕೆ.ಆರ್.ವೃತ್ತ, ಬೆಂಗಳೂರು.

ವಾಸಾಸಂಇ/ಬೆಂ.ನ/216/ಎಂಎಎ ಕಮ್ಯೂನಿಕೇಷನ್ಸ್/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹೈದರಾಬಾದ್‌ಗೆ ಮೊದಲ ಜಯ

ಐಪಿಎಲ್: ಖಲೀಲ್ ಅಹಮದ್, ಜಾನಿ ಬೆಸ್ಟೊ ಮಿಂಚು: ರಾಹುಲ್ ಬಳಗದ ಬ್ಯಾಟಿಂಗ್ ವೈಫಲ್ಯ

ಚೆನ್ನೈ (ಪಿಟಿಐ): ಎಡಗೈ ಮಧ್ಯಮವೇಗಿ ಖಲೀಲ್ ಅಹಮದ್ ಚುರುಕಿನ ದಾಳಿ ಮತ್ತು ಜಾನಿ ಬೆಸ್ಟೊ ಅರ್ಧಶತಕದ ಬಲದಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಈ ಬಾರಿಯ ಐಪಿಎಲ್‌ನಲ್ಲಿ ಮೊದಲ ಜಯ ಸಾಧಿಸಿತು.

ಚೆಪಾಕ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಡೇವಿಡ್ ವಾರ್ನರ್ ನಾಯಕತ್ವದ ಹೈದರಾಬಾದ್ ತಂಡವು 9 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ಎದುರು ಜಯಿಸಿತು. ಟೂರ್ನಿಯ ಮೊದಲ ಮೂರು ಪಂದ್ಯಗಳಲ್ಲಿ ಸನ್‌ರೈಸರ್ಸ್ ಸೋತಿತ್ತು.

ಖಲೀಲ್ ಅಹಮದ್ (21ಕ್ಕೆ3) ಮತ್ತು ಅಭಿಷೇಕ್ ಶರ್ಮಾ (24ಕ್ಕೆ2) ಮತ್ತು ತಲಾ ಒಂದು ವಿಕೆಟ್ ಗಳಿಸಿದ ಭುವನೇಶ್ವರ್ ಕುಮಾರ್, ಸಿದ್ಧಾರ್ಥ್ ಕೌಲ್ ಹಾಗೂ ರಶೀದ್ ಖಾನ್ ಬ್ಯಾಟ್ಸ್‌ಮನ್‌ಗಳ ಆಟಕ್ಕೆ ತಡೆ ಯೊಡ್ಡಿದರು. ಇದರಿಂದಾಗಿ ಪಂಜಾಬ್ ತಂಡವು 19.4 ಓವರ್‌ಗಳಲ್ಲಿ 120 ರನ್ ಗಳಿಸಿತು. ಅದಕ್ಕುತ್ತರವಾಗಿ ಸನ್‌ರೈಸರ್ಸ್ ತಂಡವು 18.4 ಓವರ್‌ಗಳಲ್ಲಿ 1 ವಿಕೆಟ್‌ಗೆ 121 ರನ್ ಗಳಿಸಿತು. ಆರಂಭಿಕ ಬ್ಯಾಟ್ಸ್‌ಮನ್ ಜಾನಿ ಬೆಸ್ಟೊ (ಅಜೇಯ 63; 56ಎ) 112.50ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು.

ಡೇವಿಡ್ ವಾರ್ನರ್ (37 ರನ್) ಮತ್ತು ಜಾನಿ ಮೊದಲ ವಿಕೆಟ್ ಜೊತೆಯಾಟದಲ್ಲಿ 73 ಸೇರಿಸಿದರು. 11ನೇ ಓವರ್‌ನಲ್ಲಿ ಡೇವಿಡ್ ಔಟಾದಾಗ ಕ್ರೀಸ್‌ಗೆ ಬಂದ ಕೇನ್ ವಿಲಿಯಮ್ಸನ್ ಅವರು ಜಾನಿ ಜೊತೆಗೂಡಿ ತಂಡವನ್ನು ಗೆಲುವಿನ ದಡ ಸೇರಿಸಿದರು.

ಖಲೀಲ್ ಮಿಂಚು: ಟಾಸ್ ಗೆದ್ದ ಪಂಜಾಬ್ ತಂಡದ ನಾಯಕ ಕೆ.ಎಲ್. ರಾಹುಲ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಇನಿಂಗ್ಸ್ ಆರಂಭಿಸಿದ ರಾಹುಲ್ ಮತ್ತು ಮಯಂಕ್ ಅಗರವಾಲ್ ಎಚ್ಚರಿಕೆಯಿಂದ ಬ್ಯಾಟಿಂಗ್ ಮಾಡಿದರು. ಆದರೂ ನಾಲ್ಕನೇ ಓವರ್‌ನಲ್ಲಿ ಭುವನೇಶ್ವರ್ ಕುಮಾರ್ ಎಸೆತದಲ್ಲಿ ರಾಹುಲ್ ನಿರ್ಗಮಿಸಿದರು.

ಮಯಂಕ್ (22 ರನ್) ಮತ್ತು ಕ್ರಿಸ್ ಗೇಲ್ (15) ಇನಿಂಗ್ಸ್‌ಗೆ ಬಲ ತುಂಬುವ ಪ್ರಯತ್ನ ಮಾಡಿದರು. ಆದರೆ ಏಳನೇ ಓವರ್‌ನಲ್ಲಿ ಮಯಂಕ್ ವಿಕೆಟ್ ಗಳಿಸಿದ ಖಲೀಲ್ ಜೊತೆಯಾಟ ಮುರಿದರು. ನಂತರದ ಎಸೆತದಲ್ಲಿ ನಿಕೊಲಸ್ ಪೂರನ್ ರನೌಟ್ ಆದರು. ವಾರ್ನರ್ ಚುರುಕಿನ ಫೀಲ್ಡಿಂಗ್ ಮತ್ತು ಥ್ರೋದಿಂದಾಗಿ ಪೂರನ್ ಖಾತೆ ತೆರೆಯದೇ ಮರಳಿದರು.

ಇನ್ನೊಂದು ತುದಿಯಿಂದ ಅಭಿಷೇಕ್ ಶರ್ಮಾ ಕೂಡ ಉತ್ತಮ ದಾಳಿ ಸಂಘಟಿಸಿದರು. ಅವರು ದೀಪಕ್ ಹೂಡಾ, ಮೊಯಿಸೆಸ್ ಹೆನ್ರಿಕ್ಸ್ ವಿಕೆಟ್ ಗಳಿಸಿದರು. ಕೊನೆಯ ಹಂತದ ಓವರ್‌ಗಳಲ್ಲಿ ಬೀಸಾಟ ಆರಂಭಿಸಿದ್ದ ಶಾರೂಕ್ ಖಾನ್ (22 ರನ್) ಆಟಕ್ಕೆ ಖಲೀಲ್ ತಡೆಯೊಡ್ಡಿದರು. ಫ್ಯಾಬಿಯನ್ ಅಲೆನ್‌ಗೂ ಖಲೀಲ್ ಡಗೌಟ್ ದಾರಿ ತೋರಿದರು. ನಂತರ ಕ್ರೀಸ್‌ಗೆ ಬಂದ ಬ್ಯಾಟ್ಸ್‌ಮನ್‌ಗಳು ಹೆಚ್ಚು ಹೊತ್ತು ನಿಲ್ಲಲಿಲ್ಲ.



ಖಲೀಲ್ ಅಹಮದ್ ಮತ್ತು ಡೇವಿಡ್ ವಾರ್ನರ್ –ಪಿಟಿಐ ಚಿತ್ರ

ಕೊಹ್ಲಿ ದಾಖಲೆ ಮುರಿದ ರಾಹುಲ್

ಚೆನ್ನೈ: ಟ್ವೆಂಟಿ–20 ಕ್ರಿಕೆಟ್‌ನಲ್ಲಿ ಅತಿ ವೇಗವಾಗಿ ಐದು ಸಾವಿರ ರನ್ ಗಳಿಸಿದ ಭಾರತದ ಆಟಗಾರನೆಂಬ ದಾಖಲೆ ಕೆ.ಎಲ್. ರಾಹುಲ್ ಪಾಲಾಗಿದೆ. ವಿರಾಟ್ ಕೊಹ್ಲಿ ಅವರನ್ನು ರಾಹುಲ್ ಹಿಂದಿಕ್ಕಿದ್ದಾರೆ. ರಾಹುಲ್ 143 ಇನ್ನಿಂಗ್ಸ್‌ಗಳಲ್ಲಿ ಈ ಮೈಲುಗಲ್ಲು ತಲುಪಿದ್ದಾರೆ. ಕೊಹ್ಲಿ ಈ ಸಾಧನೆಗೆ 167 ಇನ್ನಿಂಗ್ಸ್ ತೆಗೆದುಕೊಂಡಿದ್ದರು.

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 120 (19.4 ಓವರ್‌ಗಳಲ್ಲಿ)

ರಾಹುಲ್ ಸಿ ಜಾಧವ್ ಬಿ ಭುವನೇಶ್ವರ್ 04 (6ಎ)
ಮಯಂಕ್ ಸಿ ರಶೀದ್ ಬಿ ಖಲೀಲ್ 22 (25 ಎ, 4X2)
ಗೇಲ್ ಎಲ್‌ಬಿಡಬ್ಲ್ಯು ಬಿ ರಶೀದ್ 15 (17ಎ, 4X2)
ಪೂರನ್ ರನೌಟ್ (ವಾರ್ನರ್) 00
ಹೂಡಾ ಎಲ್‌ಬಿಡಬ್ಲ್ಯು ಬಿ ಅಭಿಷೇಕ್ 13 (11ಎ, 4X2)
ಹೆನ್ರಿಕ್ಸ್ ಸ್ಟಂಪ್ಡ್ ಬೆಸ್ಟೊ ಬಿ ಅಭಿಷೇಕ್ 14 (17ಎ)
ಶಾರೂಕ್ ಸಿ ಅಭಿಷೇಕ್ ಬಿ ಖಲೀಲ್ 22 (17ಎ, 6X2)
ಫ್ಯಾಬಿಯನ್ ಸಿ ವಾರ್ನರ್ ಬಿ ಖಲೀಲ್ 06 (11ಎ)
ಅಶ್ವಿನ್ ಸಿ ಬೆಸ್ಟೊ ಬಿ ಕೌಲ್ 09 (10ಎ, 4X1)
ಶಮಿ ರನೌಟ್ (ಶಂಕರ್/ಬೆಸ್ಟೊ) 03 (3ಎ)
ಅರ್ಷದೀಪ್ ಔಟಾಗದೆ 01 (2ಎ)
ಇತರೆ ((ಬೈ 9, ನೋಬಾಲ್ 1, ವೈಡ್ 1) 11
ವಿಕೆಟ್ ಪತನ: 1–15 (ಕೆ.ಎಲ್. ರಾಹುಲ್, 3.1), 2–39 (ಮಯಂಕ್ ಅಗರವಾಲ್, 6.6), 3–39 (ನಿಕೋಲಸ್ ಪೂರನ್, 7.1), 4–47 (ಕ್ರಿಸ್ ಗೇಲ್, 8.4), 5–63 (ದೀಪಕ್ ಹೂಡಾ 11.3), 6–82 (ಮೊಯಿಸೆಸ್ ಹೆನ್ರಿಕ್ಸ್, 13.4), 7–101 (ಫ್ಯಾಬಿಯನ್ ಅಲೆನ್, 16.4), 8–110 (ಶಾರೂಕ್ ಖಾನ್, 18.1), 9–114 (ಮುರುಗನ್ ಅಶ್ವಿನ್, 19.1), 10–120 (ಮೊಹಮ್ಮದ್ ಶಮಿ, 19.4)
ಬೌಲಿಂಗ್: ಅಭಿಷೇಕ್ ಶರ್ಮಾ 4–0–24–2, ಭುವನೇಶ್ವರ್ ಕುಮಾರ್ 3–0–16–1, ಖಲೀಲ್ ಅಹಮ್ಮದ್ 4–0–21–3, ಸಿದ್ಧಾರ್ಥ್ ಕೌಲ್ 3.4–0–27–1, ವಿಜಯ ಶಂಕರ್ 1–0–6–0, ರಶೀದ್ ಖಾನ್ 4–0–17–1

ಸನ್‌ರೈಸರ್ಸ್ ಹೈದರಾಬಾದ್ 1ಕ್ಕೆ 121 (18.4 ಓವರ್‌ಗಳಲ್ಲಿ)

ವಾರ್ನರ್ ಸಿ ಮಯಂಕ್ ಬಿ ಫ್ಯಾಬಿಯನ್ 37 (37ಎ, 4X3, 6X1)
ಬೆಸ್ಟೊ ಔಟಾಗದೆ 63 (56ಎ, 4X3, 6X3)
ವಿಲಿಯಮ್ಸನ್ ಔಟಾಗದೆ 16 (19ಎ)
ಇತರೆ (ಲೆಗ್‌ಬೈ 1, ವೈಡ್ 4) 5
ವಿಕೆಟ್ ಪತನ: 1–73 (ಡೇವಿಡ್ ವಾರ್ನರ್, 10.1)
ಬೌಲಿಂಗ್: ಮೊಹಮ್ಮದ್ ಶಮಿ 2–0–16–0, ಫ್ಯಾಬಿಯನ್ ಅಲೆನ್ 4–1–22–1, ಅರ್ಷದೀಪ್ ಸಿಂಗ್ 3.4–0–31–0, ಮೊಯಿಸೆಸ್ ಹೆನ್ರಿಕ್ಸ್ 1–0–7–0, ಮುರುಗನ್ ಅಶ್ವಿನ್ 4–0–22–0, ದೀಪಕ್ ಹೂಡಾ 4–0–22–0

ಸನ್‌ರೈಸರ್ಸ್ ಹೈದರಾಬಾದ್‌ಗೆ 9 ವಿಕೆಟ್‌ಗಳ ಜಯ

ವಿಶ್ವಕಪ್ ಮೊದಲ ಹಂತದ ಆರ್ಚರಿ ಟೂರ್ನಿ

ಭಾರತ ತಂಡಗಳು ಕ್ವಾರ್ಟರ್‌ಗೆ

ಗ್ವಾಟೆಮಾಲಾ ಸಿಟಿ (ಪಿಟಿಐ): ಸುಮಾರು ಎರಡು ವರ್ಷಗಳ ನಂತರ ವಿಶ್ವಕಪ್ ಟೂರ್ನಿಯಲ್ಲಿ ಕಣಕ್ಕಿಳಿದ ಭಾರತದ ರಿಕರ್ವ್ ಆರ್ಚರಿ ಪಟುಗಳು ಅದ್ಭುತ ಸಾಮರ್ಥ್ಯ ತೋರಿದರು. ಇಲ್ಲಿ ಆರಂಭವಾದ ವಿಶ್ವಕಪ್ ಮೊದಲ ಹಂತದ ಟೂರ್ನಿಯಲ್ಲಿ ಪುರುಷ, ಮಹಿಳಾ ಹಾಗೂ ಮಿಶ್ರ ವಿಭಾಗದ ತಂಡಗಳು ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟವು.

ಅರ್ಹತಾ ಸುತ್ತಿನಲ್ಲಿ ದೀಪಿಕಾ ಕುಮಾರಿ ಹಾಗೂ ಅಂಕಿತಾ ಭಕತ್ ಅವರನ್ನೊಳಗೊಂಡ ಮಹಿಳಾ ತಂಡವು ಅಗ್ರಸ್ಥಾನವನ್ನೂ ಗಳಿಸಿತು. ಅತನು ದಾಸ್ ಅರ್ಹತಾ ಸುತ್ತಿನಲ್ಲಿ ಎರಡನೇ ಸ್ಥಾನವನ್ನು ಗಳಿಸಿ, ಪುರುಷರ ತಂಡವು ನೇರವಾಗಿ ಎಂಟರಘಟ್ಟ ತಲುಪುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಮಿಶ್ರ ತಂಡ ವಿಭಾಗದಲ್ಲಿ ಅತನು ಹಾಗೂ ದೀಪಿಕಾ ದಂಪತಿ ಕಣಕ್ಕಿಳಿದಿದ್ದಾರೆ.

2019ರ ಜುಲೈನಲ್ಲಿ ಬರ್ಲಿನ್‌ನಲ್ಲಿ ನಡೆದ ವಿಶ್ವಕಪ್ ನಾಲ್ಕನೇ ಹಂತದ ಟೂರ್ನಿಯಲ್ಲಿ ಭಾರತದ ಬಿಲ್ಗಾರರು ಕೊನೆಯ ಬಾರಿ ಕಣಕ್ಕಿಳಿದಿದ್ದರು.

ಅತನು ಹಾಗೂ ದೀಪಿಕಾ ಜೊತೆಗೂಡಿ ಹಲವು ಅಂತರರಾಷ್ಟ್ರೀಯ ಪದಕಗಳನ್ನು ಮುಡಿಗೇರಿಸಿಕೊಂಡಿದ್ದು, ಕ್ವಾರ್ಟರ್‌ಫೈನಲ್‌ನಲ್ಲಿ ಫ್ರಾನ್ಸ್ ತಂಡವನ್ನು ಎದುರಿಸಲಿದ್ದಾರೆ. ಮಹಿಳಾ ತಂಡವು ಎಂಟರಘಟ್ಟದಲ್ಲಿ ಆತಿಥೇಯ ಗ್ವಾಟೆಮಾಲಾ ಎದುರು ಸೆಣಸಲಿದ್ದು, ಪುರುಷರ ತಂಡಕ್ಕೆ, ಸ್ಪೇನ್ ಮತ್ತು ಗ್ವಾಟೆಮಾಲಾ ತಂಡಗಳ ನಡುವಣ ಪಂದ್ಯದ ವಿಜೇತರು ಎದುರಾಗಲಿದ್ದಾರೆ.

ಈಗಾಗಲೇ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿರುವ ಭಾರತದ ಪುರುಷರ ತಂಡವು ಈ ಟೂರ್ನಿಯಲ್ಲಿ ಶ್ರೇಷ್ಠ ಸಾಮರ್ಥ್ಯ ತೋರುವ ಛಲದಲ್ಲಿದೆ.

ಮಹಿಳಾ ತಂಡ ವಿಭಾಗದಲ್ಲಿ ದೀಪಿಕಾ (673 ಪಾಯಿಂಟ್ಸ್) ಹಾಗೂ ಅಂಕಿತಾ (671) ಅವರು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿದರೆ, ಕೋಮಲಿಕಾ ಬಾರಿ (659) 12ನೇ ಸ್ಥಾನ ಗಳಿಸಿದರು. ಈ ವಿಭಾಗದ ಅರ್ಹತಾ ಸುತ್ತಿನಲ್ಲಿ ಮೆಕ್ಸಿಕೊ ತಂಡ ಎರಡನೇ ಸ್ಥಾನ ಗಳಿಸಿತು.

ಪುರುಷರ ತಂಡದ ಅರ್ಹತಾ ಸುತ್ತಿನಲ್ಲಿ ಅತನು (680 ಪಾಯಿಂಟ್ಸ್) ಅವರು ಅಮೆರಿಕದ ಬ್ರಾಡಿ ಎಲಿಸನ್ ಅವರಿಗಿಂತ 14 ಪಾಯಿಂಟ್ಸ್ ಹಿಂದೆ ಬಿದ್ದು ಎರಡನೇ ಸ್ಥಾನ ಗಳಿಸಿದರು. ಪ್ರವೀಣ್ ಜಾಧವ್ (15ನೇ ಸ್ಥಾನ), ಬಿ.ಧೀರಜ್ (20ನೇ ಸ್ಥಾನ) ಹಾಗೂ ತರುಣದೀಪ್ ರಾಯ್ (22ನೇ ಸ್ಥಾನ) ತಂಡದಲ್ಲಿದ್ದ ಇನ್ನುಳಿದ ಬಿಲ್ಗಾರರು.

ಅಭಿಷೇಕ್ ವರ್ಮಾ ಹಾಗೂ ಜ್ಯೋತಿ ಸುರೇಖಾ ಅವರಿದ್ದ ಕಾಂಪೌಂಡ್ ತಂಡವು ಟೂರ್ನಿಯಿಂದ ಹಿಂದೆ ಸರಿದಿದೆ. ತಂಡದ ಕೋಚ್ ಗೌರವ್ ಶರ್ಮಾ ಅವರಿಗೆ ಕೋವಿಡ್ ಖಚಿತಪಟ್ಟಿದ್ದರಿಂದ ರಾಷ್ಟ್ರೀಯ ಫೆಡರೇಷನ್ ಈ ತಂಡವನ್ನು ಹಿಂದೆ ಸರಿಸುವ ನಿರ್ಧಾರ ತಳೆದಿದೆ.

ದೀಪಿಕಾ ಕುಮಾರಿ–ಪಿಟಿಐ ಚಿತ್ರ

ಕಿರಣ್ ಮೋರೆ ಗುಣಮುಖ

ಮುಂಬೈ (ಪಿಟಿಐ): ಕೋವಿಡ್–19 ಸೋಂಕಿತರಾಗಿದ್ದ, ಭಾರತ ಕ್ರಿಕೆಟ್ ತಂಡದ ಮಾಜಿ ವಿಕೆಟ್ ಕೀಪರ್ ಕಿರಣ್ ಮೋರೆ ಚೇತರಿಸಿಕೊಂಡಿದ್ದಾರೆ. ಅವರು ತಂಡದ ಬಯೋಬಬಲ್ ಸೇರಿಕೊಳ್ಳಲಿದ್ದಾರೆ ಎಂದು ಮುಂಬೈ ಇಂಡಿಯನ್ಸ್ ಫ್ರಾಂಚೈಸ್ ಬುಧವಾರ ಹೇಳಿದೆ.

ಮೋರೆ ಅವರು ಮುಂಬೈ ಇಂಡಿಯನ್ಸ್ ತಂಡಕ್ಕೆ ವಿಕೆಟ್ ಕೀಪಿಂಗ್ ಸಲಹೆಗಾರರಾಗಿದ್ದಾರೆ. 58 ವರ್ಷದ ಮೋರೆ ಅವರಿಗೆ ಏಪ್ರಿಲ್ ಆರರಂದು ಸೋಂಕು ದೃಢ ಪಟ್ಟಿತ್ತು. ‘ಕಿರಣ್ ಮೋರೆ ಗುಣಮುಖರಾಗಿದ್ದಾರೆ. ವೈದ್ಯಕೀಯ ನಿಗಾದಲ್ಲಿ ಪ್ರತ್ಯೇಕ ವಾಸವನ್ನೂ ಪೂರ್ಣಗೊಳಿಸಿದ್ದಾರೆ’ ಎಂದು ಫ್ರಾಂಚೈಸ್ ಟ್ವೀಟ್ ಮಾಡಿದೆ.

ಭಾರತದ ಎಂಟು ಯುವ ಬಾಕ್ಸರ್‌ಗಳು ಫೈನಲ್‌ಗೆ

ನವದೆಹಲಿ (ಪಿಟಿಐ): ಭಾರತದ ಏಳು ಮಹಿಳೆಯರು ಸೇರಿದಂತೆ ಒಟ್ಟು ಎಂಟು ಮಂದಿ ಬಾಕ್ಸರ್‌ಗಳು ಪೋಲೆಂಡ್‌ನ ಕಿಯೆಲ್ಸೆಯಲ್ಲಿ ನಡೆಯುತ್ತಿರುವ ವಿಶ್ವ ಯೂತ್ ಚಾಂಪಿಯನ್‌ಷಿಪ್‌ನ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಗೀತಿಕಾ (ಮಹಿಳೆಯರ 48 ಕೆಜಿ ವಿಭಾಗ), ಬೇಬಿರೋಜಿಸನಾ ಚಾನು (51 ಕೆಜಿ), ವಿಂಕಾ (60 ಕೆಜಿ), ಅರುಂಧತಿ ಚೌಧರಿ (69 ಕೆಜಿ), ಪೂನಂ (57 ಕೆಜಿ), ಸನಮಚಾ ಚಾನು (75 ಕೆಜಿ) ಹಾಗೂ ಅಲ್ಫಿಯಾ (81+ ಕೆಜಿ) ಫೈನಲ್ ತಲುಪಿದ ಮಹಿಳಾ ಬಾಕ್ಸರ್‌ಗಳು.

ಪುರುಷರ ವಿಭಾಗದಲ್ಲಿ ಸಚಿನ್ (56 ಕೆಜಿ) ಮಾತ್ರ ಚಿನ್ನದ ಪದಕದ ಸುತ್ತಿಗೆ ತಲುಪಿದರು.

ಸೆಮಿಫೈನಲ್ ಬೌಟ್‌ಗಳಲ್ಲಿ ಗೀತಿಕಾ 5–0ಯಿಂದ ಇಟಲಿಯ ಎರಿಕಾ ಪ್ರಿಸಿಯಂಡಾರೊ ಎದುರು ಜಯಿಸಿದರು. ವಿಂಕಾ 4–1ರಿಂದ ಜೆಕ್ ಗಣರಾಜ್ಯದ ವೆರೋನಿಕಾ ಗಾಜ್ದೊವಾ ಎದುರು ಗೆದ್ದರು. ಅರುಂಧತಿ 5–0ಯಿಂದ ಉಜ್ಬೇಕಿಸ್ತಾನದ ಖದಿಚಾಬೊನು ಅಬ್ದುಲ್ಲಾಯೆವ್ ವಿರುದ್ಧ ಜಯಿಸಿದರೆ, ಬೇಬಿರೋಜಿಸನಾ ಇಷ್ಟೇ ಅಂತರದಿಂದ ಇಟಲಿಯ ಎಲೆನ್ ಆಯರಿ ಅವರನ್ನು ಮಣಿಸಿದರು.

ಎಂಟು ಮಂದಿ ಫೈನಲಿಸ್ಟ್‌ಗಳ ಜೊತೆಗೆ ಮೂವರು ಈಗಾಗಲೇ ಕಂಚಿನ ಪದಕಗಳನ್ನು ಕೊರಳಿಗೇರಿಸಿಕೊಂಡಿದ್ದಾರೆ.

ಈಜು ತರಬೇತಿಗೆ ಅವಕಾಶ

ಬೆಂಗಳೂರು: ತರಬೇತಿಗಾಗಿ ಈಜುಕೊಳಗಳನ್ನು ಮುಕ್ತವಾಗಿಸಲು ಸರ್ಕಾರ ಅವಕಾಶ ನೀಡಿದೆ. ರಾಜ್ಯ ಸರ್ಕಾರದ ಹೊಸ ಕೋವಿಡ್ ಮಾರ್ಗಸೂಚಿಗಳಲ್ಲಿ ಇದಕ್ಕೆ ಅನುಮತಿ ನೀಡಲಾಗಿದೆ.

ಈ ಹಿಂದಿನ ನಿಯಮಗಳನ್ವಯ ಎಲ್ಲ ಪ್ರಕಾರದ ಈಜು ಚಟುವಟಿಕೆ ಸ್ಥಗಿತಗೊಳಿಸಲಾಗಿತ್ತು. ಹೀಗಾಗಿ ಕೊಳಗಳನ್ನು ತೆರೆಯುವಂತೆ ಈಜುಪಟುಗಳು ಹಾಗೂ ಅವರ ಪೋಷಕರು ಸರ್ಕಾರಕ್ಕೆ ಮನವಿ ಮಾಡಿದ್ದರು.

‘ಕರ್ನಾಟಕ ಈಜು ಸಂಸ್ಥೆಯ ಅಂಗಸಂಸ್ಥೆಗಳಿಗೆ ಮಾತ್ರ ಈಜುಕೊಳಗಳನ್ನು, ತರಬೇತಿಗೆ ಮುಕ್ತವಾಗಿಸಲು ಅವಕಾಶ ನೀಡಲಾಗಿದೆ’ ಎಂದು ಸಂಸ್ಥೆಯ ಅಧಿಕಾರಿಯೊಬ್ಬರು ಹೇಳಿದ್ದಾರೆ. ಮನರಂಜನಾ ಉದ್ದೇಶದ ಈಜಿಗೆ ಏಪ್ರಿಲ್ 30ರವರೆಗೆ ನಿರ್ಬಂಧ ಮುಂದುವರಿಯಲಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹64
ಮೈಸೂರು	
100 ಮೊಟ್ಟೆಗೆ	₹474

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1410 (1410)
ಸೂರ್ಯಕಾಂತಿ (ರಿಫೈನ್ಡ್)	₹1730 (1720)
ಪಾಮೋಲಿನ್	₹1330 (1315)

ಕೊಬ್ಬರಿ ಧಾರಣೆ	
ಪುತ್ತೂರು	₹5000-13500
ತಿಪಟೂರು	₹15106-16800
ತುರುವೇಕೆರೆ	₹16100-16100

ಬೆಂಗಳೂರು ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)	
ದೊಡ್ಡ	₹1000-1200
ಮಧ್ಯಮ	₹800-1000
ಸಣ್ಣ	₹500-800

₹16 ಸಾವಿರದ ಗಡಿ ದಾಟಿದ ಕೊಬ್ಬರಿ

ಪ್ರಜಾವಾಣಿ ವಾರ್ತೆ

ತಿಪಟೂರು: ಯುಗಾದಿಯಿಂದ ಚೇತರಿಕೆಯ ಹಾದಿಯಲ್ಲಿರುವ ಕೊಬ್ಬರಿ ಧಾರಣೆ ಬುಧವಾರ ಕ್ವಿಂಟಲ್‌ಗೆ ಗರಿಷ್ಠ ₹16,800ರ ಗಡಿ ತಲುಪಿದೆ.

ತಿಪಟೂರು ಮಂಡಿಯಲ್ಲಿ ಬುಧವಾರ ಕ್ವಿಂಟಲ್ ಕೊಬ್ಬರಿ ₹16,800ಕ್ಕೆ ಮಾರಾಟವಾಗಿದ್ದು, ಮೂರು ವರ್ಷಗಳ ನಂತರ ಸ್ಥಳೀಯ ಮಾರುಕಟ್ಟೆಯಲ್ಲಿ ಕೊಬ್ಬರಿ ಮಾರಾಟವಾದ ಗರಿಷ್ಠ ಬೆಲೆ ಇದಾಗಿದೆ. ಇನ್ನು ಕೆಲವು ದಿನಗಳಲ್ಲಿ ಇದು ₹18 ಸಾವಿರದ ಗಡಿ ತಲುಪುವ ನಿರೀಕ್ಷೆ ಹುಟ್ಟುಹಾಕಿದೆ.

ಕಳೆದ ವರ್ಷ ಲಾಕ್‌ಡೌನ್‌ಗೂ ಮೊದಲು ಕ್ವಿಂಟಲ್ ಕೊಬ್ಬರಿ ಬೆಲೆ ₹ 10,500 ಇತ್ತು. ಲಾಕ್‌ಡೌನ್ ಬಳಿಕ ಖರೀದಿ ಪುನರಾರಂಭಗೊಂಡಾಗ ₹ 11,200ಕ್ಕೆ ಏರಿಕೆಯಾಗಿತ್ತು. ಆದರೆ, ಏಕಾಏಕಿ ₹ 8,800ಕ್ಕೆ ಕುಸಿಯುವ ಮೂಲಕ ಬೆಲೆ ಏರಿಕೆ ನಿರೀಕ್ಷೆಯನ್ನು ಹುಸಿಗೊಳಿಸಿತ್ತು. ನಾಫೆಡ್ ಕೊಬ್ಬರಿ ಖರೀದಿ ಆರಂಭಿಸಿದ ಬಳಿಕವೂ ಬೆಲೆ ₹ 11 ಸಾವಿರದ ಆಸುಪಾಸಿನಲ್ಲಿಯೇ ಇತ್ತು. ಲಾಕ್‌ಡೌನ್ ಸಡಿಲಿಕೆ ನಂತರ ಮಹಾರಾಷ್ಟ್ರ, ಗುಜರಾತ, ರಾಜಸ್ಥಾನ, ದೆಹಲಿ, ಉತ್ತರ ಪ್ರದೇಶ, ಮಧ್ಯಪ್ರದೇಶಗಳಿಂದ ಬೇಡಿಕೆ ಹೆಚ್ಚಾದ ಕಾರಣ, ಬೆಲೆ ಏರುತ್ತಲೇ ಸಾಗಿತು. ದೀಪಾವಳಿ ಸಂದರ್ಭದಲ್ಲಿ ₹ 13,000– ₹ 14,000 ತಲುಪುವ ಮೂಲಕ ಚೇತರಿಕೆ ಕಂಡಿತ್ತು.



ಮೂರು ವರ್ಷಗಳ ನಂತರ ಕೊಬ್ಬರಿ ಬೆಲೆ ಏರಿರುವುದು ಸಂತಸದ ಸಂಗತಿ. ಸಂಕಷ್ಟದಲ್ಲಿರುವ ರೈತರಿಗೆ ಆರ್ಥಿಕ ಸದೃಢತೆ ದೊರೆಯುವ ನಿರೀಕ್ಷೆ ಇದೆ.
ದಿವಾಕರ್.ಎಚ್.ಬಿ., ಅಧ್ಯಕ್ಷರು, ಎಪಿಎಂಸಿ ತಿಪಟೂರು

ಬೆಲೆ ಏರಿಕೆಯಲ್ಲಿ ಸ್ಥಿರತೆ ಕಾಪಾಡಲು ಸರ್ಕಾರ ಮುಂದಾಗಬೇಕು. ಕನಿಷ್ಠ ಬೆಂಬಲ ಬೆಲೆಯನ್ನು ₹ 15 ಸಾವಿರಕ್ಕೆ ನಿಗದಿಪಡಿಸಬೇಕು
ಯೋಗೀಶ್ವರಸ್ವಾಮಿ, ರೈತ ಸಂಘದ ಮುಖಂಡ

ಬೆಲೆ ಏರಿಕೆಗೆ ಕಾರಣ ಏನು?

ಉತ್ತರ ಭಾರತದ ರಾಜ್ಯಗಳಲ್ಲಿ ಕೊಬ್ಬರಿಗೆ ಬೇಡಿಕೆ ಹೆಚ್ಚಾಗಿರುವುದು ಮತ್ತು ಅಗತ್ಯಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕೊಬ್ಬರಿ ಮಾರುಕಟ್ಟೆಯಲ್ಲಿ ಆವಕವಾಗುತ್ತಿರುವುದು ಬೆಲೆ ಏರಿಕೆಗೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ. ಎಣ್ಣೆಕಾಳುಗಳು ದುಬಾರಿ ಆಗಿರುವುದರಿಂದ ಕೊಬ್ಬರಿ ಎಣ್ಣೆ ತಯಾರಿಕೆ ಮತ್ತು ಬಳಕೆ ಹೆಚ್ಚಾಗಿದೆ. ಡೆಸಿಕೆಟೆಡ್ ಕೊಕೊನಟ್ ಪೌಡರ್ (ಕಾಯಿಯ ಒಣ ತುರಿ) ಬಳಕೆ ಹೆಚ್ಚಿದೆ.

ಚಿತ್ರೋದ್ಯಮಿಗಳಿಗಾಗಿ ‘ಫಿಲ್ಮೇಪಿಯಾ’ ಉದ್ಯಮ

ಎಂ. ಶ್ರೀನಿವಾಸ ರಾವ್
ಗ್ಲೋಬಲ್ ಅಲಯನ್ಸ್ ಫಾರ್ ಮಾಸ್ ಆಂತ್ರಪ್ರೀನರ್‌ಷಿಪ್‌ನ ಸಿಇಒ

ಸ್ಫೂರ್ತಿಯ ಉದ್ಯಮಿ

ಸಿನಿಮಾ ನಿರ್ಮಾಣದಲ್ಲಿರುವ ಅನೇಕ ಸವಾಲುಗಳಲ್ಲಿ ಚಿತ್ರೀಕರಣಕ್ಕೆ ಯೋಗ್ಯವಾದ ಸ್ಥಳ ಗುರುತಿಸುವುದೂ ಒಂದು. ಹಲವು ನಿರ್ಮಾಪಕರ ಪ್ರಕಾರ ಇದು ಅತ್ಯಂತ ಕಷ್ಟದ ಕೆಲಸ. ನಿರ್ಮಾಪಕರ ಈ ಕಷ್ಟವನ್ನು ಪರಿಹರಿಸಲು ಬೆಂಗಳೂರು ಮೂಲದ ಉದ್ಯಮಿ ಐವಿ ಮನೋಹರ ಮತ್ತು ಅವರ ಪತಿ ಬೆಂಜಮಿನ್ ಜಾಕೋಬ್ 2018ರಲ್ಲಿ ‘ಫಿಲ್ಮೇಪಿಯಾ’ ಆರಂಭಿಸಿದರು.

‘ಫಿಲ್ಮೇಪಿಯಾ’ ಒಂದು ವಿಶಿಷ್ಟವಾದ ವೇದಿಕೆ. ಈ ವೇದಿಕೆ ಮೂಲಕ, ಜನರೇ ಸೂಚಿಸಿರುವ ಸ್ಥಳಗಳನ್ನು ಹುಡುಕಾಡಿ ತಮಗೆ ಬೇಕಾದ ಸ್ಥಳವನ್ನು ಚಿತ್ರೀಕರಣಕ್ಕೆ ಆಯ್ಕೆ ಮಾಡಿಕೊಳ್ಳುವ ಅವಕಾಶ ಚಿತ್ರೋದ್ಯಮಿಗಳಿಗೆ ಇದೆ. ಈ ಸ್ಥಳಗಳು ಜನಸಾಮಾನ್ಯರ ಒಡೆತನದಲ್ಲೇ ಇರುತ್ತವೆ. ಚಿತ್ರೋದ್ಯಮಿಗಳು ಸ್ಥಳಗಳನ್ನು ನೇರವಾಗಿ ಬುಕ್ ಮಾಡಬಹುದು. ಇದರಿಂದ ಆ ಸ್ಥಳದ ಮಾಲೀಕರಿಗೂ ಒಂದಿಷ್ಟು ಆದಾಯ ಸಿಗುತ್ತದೆ.

‘ಸಿನಿಮಾ ಮತ್ತು ಪ್ರವಾಸಗಳಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದ ನಾವು ಹವ್ಯಾಸಿ ವೆಬ್‌ಸೈಟ್ ಒಂದನ್ನು 2008ರಲ್ಲಿ ಆರಂಭಿಸಿ, ಅದರಲ್ಲಿ ಯಾವ ಸಿನಿಮಾದ ಚಿತ್ರೀಕರಣ ಯಾವ ಸ್ಥಳದಲ್ಲಿ ಆಯಿತು ಎಂಬ ವಿವರ ನೀಡುತ್ತಿದ್ದೆವು. ವೆಬ್‌ಸೈಟ್ ಬಹಳ ಜನಪ್ರಿಯವಾಯಿತು. ಕ್ರಮೇಣ ಚಿತ್ರೋದ್ಯಮಿಗಳು ಸ್ಥಳ ಹುಡುಕಿಕೊಡುವಂತೆ, ಸಲಹೆ ನೀಡುವಂತೆ ನಮ್ಮನ್ನು ಸಂಪರ್ಕಿಸಲಾರಂಭಿಸಿದರು’ ಎಂದು ಐವಿ ನೆನಪಿಸಿಕೊಳ್ಳುತ್ತಾರೆ.

2008ರಿಂದ 2018ರ ನಡುವೆ ಐವಿ ಮತ್ತು ಅವರ ಪತಿ ಇದರಲ್ಲಿರುವ ಅವಕಾಶಗಳ ಕುರಿತು ಅಧ್ಯಯನ ನಡೆಸಿದರು. ಚಿತ್ರೀಕರಣದ ಸ್ಥಳಗಳನ್ನು ಹೇಗೆ ಗುರುತಿಸಲಾಗುತ್ತದೆ ಮತ್ತು ಆ ಸ್ಥಳಗಳನ್ನು ಚಿತ್ರೋದ್ಯಮಿಗಳಿಗೆ ಹೇಗೆ ತಿಳಿಸಲಾಗುತ್ತದೆ, ಈ ಪ್ರಕ್ರಿಯೆಯಲ್ಲಿ ಇರುವ ನ್ಯೂನತೆಗಳು ಏನು ಎಂಬುದನ್ನು ಗಮನಿಸಿದರು. ಅದುವರೆಗೂ ಐ.ಟಿ. ಕಂಪನಿಯೊಂದರಲ್ಲಿ ಉದ್ಯೋಗಿಗಳಾಗಿದ್ದ ಇಬ್ಬರೂ, ಅರೆಕಾಲಿಕ ಕೆಲಸದ ರೂಪದಲ್ಲಿ ಸಿನಿಮಾ ಯೋಜನೆಗಳನ್ನೂ ಕೈಗೆತ್ತಿಕೊಳ್ಳಲಾರಂಭಿಸಿದರು. 2018ರಲ್ಲಿ ಐ.ಟಿ. ಕೆಲಸ ತೊರೆದು ‘ಫಿಲ್ಮೇಪಿಯಾ’ ಆರಂಭಿಸಿದರು. ಸಾವಧಾನದಿಂದ ಅವರು ಕಟ್ಟಿದ ಉದ್ಯಮದಿಂದಾಗಿ ಚಿತ್ರೋದ್ಯಮಿಗಳು ತಮ್ಮ ಸಿನಿಮಾ, ಜಾಹೀರಾತು ಚಿತ್ರೀಕರಣ, ಒಟಿಟಿಗಾಗಿನ ಕಾರ್ಯಕ್ರಮಗಳು, ಮ್ಯೂಸಿಕ್ ವಿಡಿಯೊ ಇತ್ಯಾದಿಗಳಿಗೆ ಇವರನ್ನು ಸಂಪರ್ಕಿಸುತ್ತಿದ್ದಾರೆ.

ಐವಿ ಮತ್ತು ಅವರ ಪತಿ ಈ ಉದ್ಯಮಕ್ಕೆ ಬಂದಿದ್ದು ಆಕಸ್ಮಿಕವೇ. ಆದರೆ ಇಲ್ಲಿರುವ ಅವಕಾಶಗಳನ್ನು ಬಹಳ ಬೇಗನೆ ಗುರುತಿಸಿ ಅವುಗಳನ್ನು ತಮ್ಮ ಬೆಳವಣಿಗೆಗೆ ಬಳಸಿಕೊಂಡರು. ಅಲ್ಲಿಯವರೆಗೆ ಚಿತ್ರೀಕರಣದ ಸ್ಥಳಗಳನ್ನು ಡಿಜಿಟಲ್ ಆಗಿ ತೋರಿಸುವ, ವಿವರಿಸುವ ವ್ಯವಸ್ಥೆ ಸರಿಯಾಗಿ ಇರಲಿಲ್ಲ. ‘ಫಿಲ್ಮೇಪಿಯಾ’ವು ಚಿತ್ರೋದ್ಯಮಿಗಳಿಗೆ ಕುಳಿತಲ್ಲಿಯೇ ಸ್ಥಳದ ವೈಶಿಷ್ಟ್ಯ ತೋರಿಸುವ ಸಾಧ್ಯತೆ ವಿಸ್ತರಿಸಿತು.

ತಂತ್ರಜ್ಞಾನವನ್ನು ಬಳಸಿಕೊಂಡು ಐವಿ ಅವರು ಅನೇಕ ವಿಶಿಷ್ಟ ಸ್ಥಳಗಳನ್ನು, ವಿವರಗಳನ್ನು ಬೆರಳ ತುದಿಯಲ್ಲಿಯೇ ಉದ್ಯಮಿಗಳಿಗೆ ತೋರಿಸಿದರು. ಈ ಪರಿಕಲ್ಪನೆಗೆ ಆರಂಭದಲ್ಲಿ ಬಹಳ ಮೆಚ್ಚುಗೆ ಸಿಗಲಿಲ್ಲ. ‘ಫಿಲ್ಮೇಪಿಯಾ’ ನೀಡಬಹುದಾದ ಸೇವೆಗಳ ಬಗ್ಗೆ ಹಲವರಲ್ಲಿ ಅನುಮಾನಗಳಿದ್ದವು. ಆದರೆ ಪರಿಸ್ಥಿತಿಯು ಕ್ರಮೇಣ ಬದಲಾಯಿತು. ‘ಫಿಲ್ಮೇಪಿಯಾ’ದ ಉದ್ಯಮ ಈಗ ಬೆಳೆದು ನಿಂತಿದೆ. ಆದರೆ ಕೋವಿಡ್–19 ಪರಿಸ್ಥಿತಿಯಿಂದ ಐವಿ ತಮ್ಮ ವಹಿವಾಟನ್ನು ಬದಲಿಸಿಕೊಳ್ಳಬೇಕಾಯಿತು.

‘ನಾವು ಸುಸ್ಥಿರ ಉತ್ಪಾದನಾ ಚಟುವಟಿಕೆಗಳನ್ನು ಅನುಸರಿಸಬೇಕು. ಉದ್ಯಮದ ಸಿಬ್ಬಂದಿ ಮತ್ತು ಉದ್ಯಮ ಎಂಥ ಪರಿಸ್ಥಿತಿಯಲ್ಲಿಯೂ ನಡೆಯುತ್ತಿರುವಂತೆ ಆಗಲು ನಾವು ಮೀಸಲು ಹಣ ಹೊಂದಿರಬೇಕು’ ಎನ್ನುವುದು ಅವರ ಅಭಿಪ್ರಾಯ. ‘ನಾವು ತಪ್ಪುಗಳನ್ನು ಮಾಡುತ್ತಲೇ ಹೊಸ ಪಾಠಗಳನ್ನು ಕಲಿತು ಇಂದು ಬೆಳೆದು ನಿಂತಿದ್ದೇವೆ. ನಾವು ಚಿತ್ರೋದ್ಯಮದ ಹಿನ್ನೆಲೆ ಹೊಂದಿದ್ದವರೇ ಅಲ್ಲ. ಹಾಗಾಗಿ ನಾವು ತಪ್ಪು ಮಾಡುವುದು ಸಹಜವಾಗಿತ್ತು. ಅನೇಕ ಅಡ್ಡಿ–ಆತಂಕಗಳು ಇದ್ದವು. ಆದರೆ ನಾವು ಕಲಿಯುತ್ತಲೇ ಹೋದೆವು. ನಮ್ಮ ಉದ್ಯಮವನ್ನು ಬೆಳೆಸಿದೆವು’ ಎಂದು ಐವಿ ಹೇಳುತ್ತಾರೆ.

ಐವಿ ಮನೋಹರ್

ಐಫೋನ್ 12: ಹೊಸ ಆವೃತ್ತಿ

ಬೆಂಗಳೂರು: ಆ್ಯಪಲ್ ಕಂಪನಿಯು ತನ್ನ ಜನಪ್ರಿಯ ಐಫೋನ್ ಸರಣಿಯಲ್ಲಿ 2020ರ ಅಕ್ಟೋಬರ್‌ನಲ್ಲಿ ಬಿಡುಗಡೆ ಮಾಡಿದ್ದ ‘ಐಫೋನ್ 12’ ಮಾದರಿಯಲ್ಲಿ ನೂತನ ಪರ್ಪಲ್ ಆವೃತ್ತಿಯನ್ನು ಪರಿಚಯಿಸಿದೆ.

ಐಫೋನ್ 12 ಮತ್ತು ಐಫೋನ್ 12 ಮಿನಿ ಹೊಸ ಫೋನ್‌ಗಳ ಪ್ರೀ–ಬುಕಿಂಗ್ ಶುಕ್ರವಾರದಿಂದ (ಏಪ್ರಿಲ್ 23) ಆರಂಭವಾಗಲಿದೆ. ಏಪ್ರಿಲ್ 30ರಿಂದ ಮಾರುಕಟ್ಟೆಯಲ್ಲಿ ದೊರೆಯಲಿದೆ.

ಐಫೋನ್ 12, 6.1 ಇಂಚಿನ ಡಿಸ್‌ಪ್ಲೇ ಮತ್ತು ಐಫೋನ್ 12 ಮಿನಿ 5.4 ಇಂಚಿನ ಡಿಸ್‌ಪ್ಲೇ ಹೊಂದಿದೆ. ಪ್ರಸ್ತುತ ಹೊಸ ನೇರಳೆ ಬಣ್ಣದ ಆವೃತ್ತಿ ಸೇರ್ಪಡೆಯೊಂದಿಗೆ ಐಫೋನ್ 12 ಮತ್ತು ಐಫೋನ್ 12 ಮಿನಿ ಒಟ್ಟಾರೆ ಆರು ಆಕರ್ಷಕ ಬಣ್ಣಗಳಲ್ಲಿ ಲಭ್ಯವಿದೆ.

ಆ್ಯಪಲ್ ಟಿವಿ 4ಕೆ: ಎ12 ಬಯಾನಿಕ್ ಚಿಪ್ ಸಹಿತ ಆ್ಯಪಲ್ ಟಿವಿ 4ಕೆ, ಹೊಸ ರಿಮೋಟ್ ಜತೆಗೆ ಮಾರುಕಟ್ಟೆ ಪ್ರವೇಶಿಸಿದೆ. 32 ಜಿಬಿ ಆರಂಭಿಕ ಆವೃತ್ತಿಗೆ ₹ 18,900 ದರ ಇದೆ.

ಮುಂಬೈ ಧಾರಣೆ

ಶೇಂಗಾ 21-4-2021	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9500-9600
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಸೋಯಾ ಕಚ್ಚಾ	1405 (1400)
ಪಾಮ್ ವಾರದ ಡೆಲಿವರಿ	1328 (1313)
ಸೂರ್ಯಕಾಂತಿ ಎಣ್ಣೆ ಕಚ್ಚಾ	1670 (1670)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	47,700 (47,300)
ಬೆಳ್ಳಿ ಕೆ.ಜಿ	69,450 (68,700)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಅಂತರ ಕಾಯ್ದುಕೊಳ್ಳಿ

ಎಲ್‌ಐಸಿ ಹೊಸ ಪ್ರೀಮಿಯಂ: ₹ 1.84 ಲಕ್ಷ ಕೋಟಿ ಸಂಗ್ರಹ

ಬೆಂಗಳೂರು: ಕೋವಿಡ್–19 ಸಾಂಕ್ರಾಮಿಕದ ಸವಾಲಿನ ಸಂದರ್ಭದ ಹೊರತಾಗಿಯೂ ಹೊಸ ಯೋಜನೆಗಳ ಪ್ರಗತಿಯು ಪರಿಣಾಮಕಾರಿ ಆಗಿದೆ ಎಂದು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ತಿಳಿಸಿದೆ.

2020–21ನೇ ಹಣಕಾಸು ವರ್ಷದಲ್ಲಿ ವೈಯಕ್ತಿಕ ಖಾತರಿ ವಹಿವಾಟಿನಲ್ಲಿ ₹ 56,406 ಕೋಟಿ ಮೊದಲ ವರ್ಷದ ಪ್ರೀಮಿಯಂ ವರಮಾನ ಗಳಿಸಿದೆ. ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇಕಡ 10.11ರಷ್ಟು ಬೆಳವಣಿಗೆ ಕಂಡಿದೆ.

ಎಲ್‌ಐಸಿಯ ಪಿಂಚಣಿ ಮತ್ತು ಗುಂಪು ಯೋಜನೆಗಳು ಸಹ ₹ 1.27 ಲಕ್ಷ ಕೋಟಿಗಳಷ್ಟು ಹೊಸ ಯೋಜನೆಗಳ ಪ್ರೀಮಿಯಂ ವರಮಾನ ಗಳಿಸಿವೆ. ಒಟ್ಟಾರೆ ಹೊಸ ಪ್ರೀಮಿಯಂ ಮೊತ್ತವು ₹ 1.84 ಲಕ್ಷ ಕೋಟಿಗಳಷ್ಟಾಗಿದೆ.

ಹಣಕಾಸು ವರ್ಷದಲ್ಲಿ ಹೊಸದಾಗಿ 3.45 ಲಕ್ಷ ಏಜೆಂಟರು ಸೇರಿದ್ದು, ಒಟ್ಟಾರೆ ಏಜೆಂಟರ ಸಂಖ್ಯೆಯು 13.53 ಲಕ್ಷಕ್ಕೆ ಏರಿಕೆಯಾಗಿದೆ ಎಂದು ಅದು ತಿಳಿಸಿದೆ.

ಕ್ಯಾಂಪ್ಕೊ: ದಾಖಲೆ ಬೆಲೆಗೆ ಕಾಳುಮೆಣಸು ಖರೀದಿ

ಪ್ರಜಾವಾಣಿ ವಾರ್ತೆ

ಕಳಸ: ಇಲ್ಲಿನ ಕ್ಯಾಂಪ್ಕೊ ಖರೀದಿ ಕೇಂದ್ರಕ್ಕೆ ಕಳೆದ ಒಂದು ತಿಂಗಳಿಂದ ದಾಖಲೆ ಪ್ರಮಾಣದಲ್ಲಿ ಕಾಳುಮೆಣಸು ಆವಕವಾಗುತ್ತಿದೆ. ಎರಡು ವಾರಗಳಿಂದ ಕಾಳುಮೆಣಸಿನ ಧಾರಣೆ ಕೆ.ಜಿ.ಗೆ ₹ 380ಕ್ಕೆ ಕುಸಿದಿದ್ದರೂ, ಕ್ಯಾಂಪ್ಕೊ ಮಾತ್ರ ಬೆಳೆಗಾರರಿಂದ ಕೆ.ಜಿ.ಗೆ ₹ 400ರ ದರದಲ್ಲಿ ಕಾಳುಮೆಣಸು ಖರೀದಿಸಿದೆ.

ಮಂಗಳವಾರ ಒಂದೇ ದಿನ ₹ 3 ಕೋಟಿ ಮೌಲ್ಯದ 750 ಕ್ವಿಂಟಲ್ ಕಾಳುಮೆಣಸನ್ನು ಕ್ಯಾಂಪ್ಕೊ ಕಳಸದ ಕೇಂದ್ರದ ಮೂಲಕ ಖರೀದಿಸಿದೆ.

‘ಕಳಸ ಸುತ್ತಮುತ್ತಲಿನ ಕಾಳುಮೆಣಸು ಉತ್ತಮ ಗುಣಮಟ್ಟ ಮತ್ತು ಗಾತ್ರ ಹೊಂದಿದೆ. ಹೀಗಾಗಿ ಬೆಲೆ ಮತ್ತು ಬೇಡಿಕೆ ಹೆಚ್ಚು’ ಎಂದು ಕ್ಯಾಂಪ್ಕೊ ಕಾಳುಮೆಣಸು ಖರೀದಿ ವಿಭಾಗದ ಮುಖ್ಯಸ್ಥ ಪ್ರೇಮ್‌ಜಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಕಳೆದ ವರ್ಷ ಕ್ಯಾಂಪ್ಕೊ 42 ಖರೀದಿ ಕೇಂದ್ರಗಳ ಮೂಲಕ ಒಟ್ಟು 25 ಸಾವಿರ ಕ್ವಿಂಟಲ್ ಕಾಳುಮೆಣಸು ಖರೀದಿ ಮಾಡಿತ್ತು. ಈ ವರ್ಷ ಅದನ್ನು ನಾಲ್ಕುಪಟ್ಟು ಹೆಚ್ಚಿಸಿ, 1 ಲಕ್ಷ ಕ್ವಿಂಟಲ್ ಗುರಿಯನ್ನು ನಿಗದಿಪಡಿಸಿದ್ದೇವೆ’ ಎಂದು ಹೇಳಿದರು.

ಬುಧವಾರದಿಂದ ಕಾಳುಮೆಣಸು ಧಾರಣೆಯನ್ನು ಕೆ.ಜಿ.ಗೆ ₹ 385ಕ್ಕೆ ಕ್ಯಾಂಪ್ಕೊ ನಿಗದಿಪಡಿಸಿದೆ. ಸದ್ಯ ಚಿಕ್ಕಮಗಳೂರು ಜಿಲ್ಲೆಯಲ್ಲೇ ಇದು ಗರಿಷ್ಠ ಬೆಲೆ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-41000
ಹಳತು	42500-50500
ಕುಮಟ	
ಚಿಪ್ಪು	26169-29369
ಕೋಕ	23169-28609
ಫ್ಯಾಕ್ಟರಿ	14669-15841
ಹಳೆಚಾಲಿ	39699-40619
ಹೊಸಚಾಲಿ	34569-36221
ಪುತ್ತೂರು	
ಕೋಕ	9500-24000
ಹೊಸತು	28500-41000
ಸಿದ್ದಾಪುರ	
ಬಿಳಿಗೋಟು	24699-30191
ಚಾಲಿ	33899-35599
ಕೋಕ	19880-30689
ಕೆಂಪುಗೋಟು	23111-28789
ರಾಶಿ	37109-41099
ತಟ್ಟಿಬೆಟ್ಟೆ	30019-36869
ಶಿರಸಿ	
ಬೆಟ್ಟೆ	18099-38900
ಬಿಳಿಗೋಟು	19099-29391
ಚಾಲಿ	29109-36561
ರಾಶಿ	38208-41699
ಶಿವಮೊಗ್ಗ ಎಪಿಎಂಸಿ	
ಬೆಟ್ಟೆ	40019-43910
ಗೊರಬಲು	19500-31389
ರಾಶಿ	36566-41289
ಸರಕು	45159-73300
ಶಿವಮೊಗ್ಗ ಮ್ಯಾಮ್ಕೋಸ್	
ಹಸ	57399-71600
ಬೆಟ್ಟೆ	41559-43910
ಗೊರಬಲು	30166-40899
ರಾಶಿ ಇಡಿ	23650-30609
ಚನ್ನಗಿರಿ ತುಮ್ಕೋಸ್	
ಬೆಟ್ಟೆ	30129-34529
ರಾಶಿ	36829-40499
ರಾಮನಗರ ರೇಷ್ಮೆ ಧಾರಣೆ	
ಮಿಶ್ರತಳಿ	257-385
ದ್ವಿತಳಿ	325-445

ಮೂಡಿಗೆರೆ ಕಾಫಿ	ಮುದ್ರೆಮನೆ
ಎಪಿ	10100
ಎಸಿ	4060
ಆರ್‌ಪಿ	5100
ಆರ್‌ಸಿ	2900

ಬಾಂಡ್ ವಿತರಣೆ: ಬಂಡವಾಳ ಸಂಗ್ರಹ ಶೇ 14ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಷೇರುಪೇಟೆಗಳಲ್ಲಿ ನೋಂದಾಯಿತ ಕಂಪನಿಗಳು ಬಾಂಡ್‌ಗಳ ಖಾಸಗಿ ವಿತರಣೆಯ ಮೂಲಕ 2020–21ರಲ್ಲಿ ₹ 7.72 ಲಕ್ಷ ಕೋಟಿ ಬಂಡವಾಳ ಸಂಗ್ರಹಿಸಿವೆ.

2019–20ನೇ ಹಣಕಾಸು ವರ್ಷದಲ್ಲಿ ಸಂಗ್ರಹಿಸಿದ್ದ ₹ 6.75 ಲಕ್ಷ ಕೋಟಿಗೆ ಹೋಲಿಸಿದರೆ ಬಂಡವಾಳ ಸಂಗ್ರಹದಲ್ಲಿ ಶೇಕಡ 14ರಷ್ಟು ಏರಿಕೆ ಆಗಿದೆ ಎನ್ನುವ ಮಾಹಿತಿಯು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯಲ್ಲಿದೆ.

ರಾಜಸ್ಥಾನ ರಾಯಲ್ಸ್ ಎದುರಿನ ಪಂದ್ಯ; ಆತ್ಮವಿಶ್ವಾಸದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು

ವಾಂಖೆಡೆಯಲ್ಲೂ ಜಯದ ಕನಸು

ಮುಂಬೈ (ಪಿಟಿಐ): ಚೆನ್ನೈನಲ್ಲಿ 'ಹ್ಯಾಟ್ರಿಕ್' ಜಯದ ಸಂಭ್ರಮ ಆಚರಿಸಿರುವ ವಿರಾಟ್ ಕೊಹ್ಲಿ ನಾಯಕತ್ವದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗುರುವಾರ ವಾಂಖೆಡೆ ಅಂಗಳದಲ್ಲಿ ತನ್ನ ಸಾಮರ್ಥ್ಯವನ್ನು ಪಣಕ್ಕೊಡ್ಡಲಿದೆ.

ಕೊರೊನಾ ಕಾಲಘಟ್ಟದ ಸವಾಲುಗಳ ನಡುವೆ ನಡೆಯುತ್ತಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಮೊದಲ ಮೂರು ಪಂದ್ಯಗಳಲ್ಲಿ ಆರ್‌ಸಿಬಿ ಭರ್ಜರಿ ಜಯ ಗಳಿಸಿದೆ. ನಾಲ್ಕನೇ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ವಿರುದ್ಧ ಕಣಕ್ಕಿಳಿಯಲಿದೆ. ವಾಂಖೆಡೆ ಕ್ರೀಡಾಂಗಣದಲ್ಲಿ ಇದುವರೆಗೆ ಮೂರು ಪಂದ್ಯಗಳನ್ನು ಆಡಿರುವ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ತಂಡವು ಒಂದರಲ್ಲಿ ಜಯಿಸಿ, ಎರಡರಲ್ಲಿ ಸೋತಿದೆ. ಗೆಲುವಿನ ಹಾದಿಗೆ ಮರಳುವ ಛಲದಲ್ಲಿದೆ.

ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್, ಸನ್‌ರೈಸರ್ಸ್ ಮತ್ತು ಕೋಲ್ಕತ್ತ ನೈಟ್ ರೈಡರ್ಸ್ ತಂಡಗಳನ್ನು ಮಣಿಸಿರುವ ವಿರಾಟ್ ಬಳಗವು ಭರ್ತಿ ಆತ್ಮವಿಶ್ವಾಸದಲ್ಲಿದೆ. ಇದೇ ವರ್ಷ ಆರ್‌ಸಿಬಿ ಸೇರಿರುವ ಗ್ಲೆನ್ ಮ್ಯಾಕ್ಸ್‌ವೆಲ್ ತಮಗೆ ನೀಡಿರುವ ದುಬಾರಿ ಮೌಲ್ಯಕ್ಕೆ ನ್ಯಾಯ ಸಲ್ಲಿಸಿದ್ದಾರೆ. ಮೂರು ಪಂದ್ಯಗಳಿಂದ 176 ರನ್ ಗಳಿಸಿದ್ದಾರೆ. ಅದರಲ್ಲಿ ಎರಡು ಅರ್ಧಶತಕಗಳಿವೆ.

ಎಬಿ ಡಿವಿಲಿಯರ್ಸ್ 'ಆಪದ್ಬಾಂಧವ' ಪಾತ್ರವನ್ನು ಅಚ್ಚುಕಟ್ಟಾಗಿ ನಿಭಾಯಿಸುತ್ತಿದ್ದಾರೆ. ಡೆತ್ ಓವರ್‌ಗಳಲ್ಲಿ ಬೌಲರ್‌ಗಳ ವೈಡ್ ಆ್ಯಂಗಲ್ ಎಸೆತಗಳನ್ನೂ ಸಿಕ್ಸರ್‌ಗೆತ್ತುವ ಮೂಲಕ ತಾವು 'ಮಿಸ್ಟರ್ 360 ಡಿಗ್ರಿ' ಎಂದು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ. ಅವರ ಖಾತೆಯಲ್ಲಿ ಒಟ್ಟು 125 ರನ್‌ಗಳಿವೆ. ಇವರಿಬ್ಬರಿಂದಾಗಿ ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಆನೆಬಲ ಲಭಿಸಿದೆ.

ಆರಂಭಿಕ ಜೋಡಿ ನಾಯಕ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ ತಮ್ಮ ನೈಜ ಆಟಕ್ಕೆ ಮರಳಿದರೆ, ಬೌಲರ್‌ಗಳಿಗೆ ಮತ್ತಷ್ಟು ಕಠಿಣ ಸವಾಲು ಒಡ್ಡಬಹುದು. ಕೈಲ್ ಜೆಮಿಸನ್, ವಾಷಿಂಗ್ಟನ್ ಸುಂದರ್ ತಮ್ಮ ಆಲ್‌ರೌಂಡ್ ಆಟದಿಂದ ತಂಡಕ್ಕೆ ಬಲ ತುಂಬಬಲ್ಲರು.

ಹರ್ಷಲ್ ಪಟೇಲ್, ಯಜುವೇಂದ್ರ ಚಾಹಲ್ ಉತ್ತಮ ಲಯದಲ್ಲಿರುವುದು ತಂಡದ ಬೌಲಿಂಗ್ ವಿಭಾಗವನ್ನು ಹೆಚ್ಚು ಬಲಿಷ್ಠಗೊಳಿಸಿದೆ. ಹಿಂದೆಂದಿಗಿಂತಲೂ ಹೆಚ್ಚು ಬಲಾಢ್ಯವಾಗಿ ಕಾಣುತ್ತಿರುವ ಆರ್‌ಸಿಬಿಯನ್ನು ಕಟ್ಟಿಹಾಕಲು ಸಂಜು ಸ್ಯಾಮ್ಸನ್ ಬಳಗವು ವಿಶೇಷ ತಂತ್ರಗಾರಿಕೆ ರೂಪಿಸುವ ಒತ್ತಡದಲ್ಲಿದೆ.

ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ವಿರಾಟ್ ಕೊಹ್ಲಿ

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಸಿದ್ದ ತಂಡವು, ಪಂಜಾಬ್ ಕಿಂಗ್ಸ್ ಮತ್ತು ಚೆನ್ನೈ ಸೂಪರ್ ಕಿಂಗ್ಸ್ ಎದುರಿನ ಪಂದ್ಯಗಳಲ್ಲಿ ಸೋತಿತ್ತು. ಜೋಸ್ ಬಟ್ಲರ್ ಉತ್ತಮವಾಗಿ ಆಡುತ್ತಿದ್ದಾರೆ. ಸಂಜು ಮೊದಲ ಪಂದ್ಯದಲ್ಲಿ ಶತಕ ಹೊಡೆದಿದ್ದರು. ಅದರೆ ನಂತರದ ಎರಡು ಪಂದ್ಯಗಳಲ್ಲಿ ಅವರ ಬ್ಯಾಟಿಂಗ್ ಮಂಕಾಗಿತ್ತು.

ತಮ್ಮಲ್ಲಿರುವ ಮಧ್ಯಮವೇಗಿಗಳಾದ ಜಯದೇವ್ ಉನದ್ಕತ್, ಕ್ರಿಸ್ ಮೋರಿಸ್ ಅವರ ಅನುಭವವನ್ನು ಸಮರ್ಪಕವಾಗಿ ಬಳಸಿಕೊಳ್ಳುವಲ್ಲಿ ಸಂಜು ಸಂಪೂರ್ಣವಾಗಿ ಯಶಸ್ವಿಯಾಗಿಲ್ಲ. ಯುವಬೌಲರ್ ಚೇತನ್ ಸಕಾರಿಯಾ ಮಿಂಚುತ್ತಿದ್ದಾರೆ. ಆದರೆ ಆರ್‌ಸಿಬಿಯ ಅನುಭವಿ ಬ್ಯಾಟಿಂಗ್ ಪಡೆಯನ್ನು ರಾಯಲ್ಸ್ ಬೌಲರ್‌ಗಳು ಕಟ್ಟಿಹಾಕುವಲ್ಲಿ ಯಶಸ್ವಿಯಾದರೆ ತಂಡವು ಜಯದ ಹಾದಿಗೆ ಮರಳುವ ಸಾಧ್ಯತೆ ಹೆಚ್ಚುವ ನಿರೀಕ್ಷೆ ಇದೆ.

ಪಂದ್ಯ ಆರಂಭ: ರಾತ್ರಿ 7.30ರಿಂದ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬಲಾಬಲ



ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 3ಕ್ಕೆ 220 (20 ಓವರ್‌ಗಳಲ್ಲಿ)

ಋತುರಾಜ್ ಸಿ ಕಮಿನ್ಸ್ ಬಿ ವರುಣ್ 64 (42ಎ, 4X6, 6X4)
ಡುಪ್ಲೆಸಿ ಔಟಾಗದೆ 95 (60ಎ, 4X9, 6X4)
ಮೋಯಿನ್ ಸ್ಟಂಪ್ಡ್ ಕಾರ್ತಿಕ್ ಬಿ ನಾರಾಯಣ್ 25 (12ಎ, 4X2, 6X2)
ಧೋನಿ ಸಿ ಮಾರ್ಗನ್ ಬಿ ರಸೆಲ್ 17 (8ಎ, 4X2, 6X1)
ಜಡೇಜ ಔಟಾಗದೆ 06 (1ಎ, 6X1)
ಇತರೆ (ನೋಬಾಲ್ 3, ವೈಡ್ 10) 13
ವಿಕೆಟ್ ಪತನ: 1–115 (ಋತುರಾಜ್ ಗಾಯಕವಾಡ್, 12.2), 2–165 (ಮೋಯಿನ್ ಅಲಿ, 16.3), 3–201 (ಮಹೇಂದ್ರ ಸಿಂಗ್ ಧೋನಿ, 18.6).
ಬೌಲಿಂಗ್: ವರುಣ್ ಚಕ್ರವರ್ತಿ 4–0–27–1, ಪ್ಯಾಟ್ ಕಮಿನ್ಸ್ 4–0–58–0, ಸುನಿಲ್ ನಾರಾಯಣ್ 4–0–34–1, ಪ್ರಸಿದ್ಧ ಕೃಷ್ಣ 4–0–49–0, ಆ್ಯಂಡ್ರೆ ರಸೆಲ್ 2–0–27–1, ಕಮಲೇಶ್ ನಾಗರಕೋಟಿ 2–0–25–0.

ಕೋಲ್ಕತ್ತ ನೈಟ್ ರೈಡರ್ಸ್ 202 (19.1 ಓವರ್‌ಗಳಲ್ಲಿ)

ಶುಭಮನ್ ಸಿ ಗಿಡಿ ಬಿ ಚಾಹರ್ 00 (1ಎ), ನಿತೀಶ್ ಸಿ ಧೋನಿ ಬಿ ಚಾಹರ್ 09 (12ಎ, 4X2), ರಾಹುಲ್ ಸಿ ಧೋನಿ ಬಿ ಗಿಡಿ 08 (9ಎ, 4X1), ಮಾರ್ಗನ್ ಸಿ ಧೋನಿ ಬಿ ಚಾಹರ್ 07 (7ಎ, 4X1) ನಾರಾಯಣ್ ಸಿ ಜಡೇಜ ಬಿ ಚಾಹರ್ 04 (3ಎ, 4X1), ಕಾರ್ತಿಕ್ ಎಲ್‌ಬಿಡಬ್ಲ್ಯು ಬಿ ಗಿಡಿ 40 (24ಎ, 4X4, 6X2) ರಸೆಲ್ ಬಿ ಕರನ್ 54 (22ಎ, 4X3, 6X6), ಕಮಿನ್ಸ್ ಔಟಾಗದೆ 66 (34ಎ, 4X4, 6X6), ಕಮಲೇಶ್ ಸಿ ಡುಪ್ಲೆಸಿ ಬಿ ಗಿಡಿ 00 (2ಎ), ವರುಣ್ ರನೌಟ್ (ಚಾಹರ್/ಕರನ್) 00 (1ಎ) ಪ್ರಸಿದ್ಧ ಕೃಷ್ಣ ರನೌಟ್ (ಚಾಹರ್/ಠಾಕೂರ್) 00 (1ಎ)
ಇತರೆ (ಬೈ 4, ಲೆಗ್‌ಬೈ 2, ನೋಬಾಲ್ 1, ವೈಡ್ 7) 14
ವಿಕೆಟ್ ಪತನ: 1–1 (ಶುಭಮನ್ ಗಿಲ್, 0.4), 2–17 (ನಿತೀಶ್ ರಾಣಾ, 2.5), 3–27 (ಏಯಾನ್ ಮಾರ್ಗನ್, 4.3), 4–31 (ಸುನಿಲ್ ನಾರಾಯಣ್, 4.6), 5–31 (ರಾಹುಲ್ ತ್ರಿಪಾಠಿ, 5.2), 6–112 (ಆ್ಯಂಡ್ರೆ ರಸೆಲ್, 11.2), 7–146 (ದಿನೇಶ್ ಕಾರ್ತಿಕ್, 14.6), 8–176 (ಕಮಲೇಶ್ ನಾಗರಕೋಟಿ, 16.2), 9–200 (ವರುಣ್ ಚಕ್ರವರ್ತಿ, 18.3), 10–202 (ಪ್ರಸಿದ್ಧ ಕೃಷ್ಣ, 19.1)
ಬೌಲಿಂಗ್: ದೀಪಕ್ ಚಾಹರ್ 4–0–29–4, ಸ್ಯಾಮ್ ಕರನ್ 4–0–58–1, ಲುಂಗಿ ಗಿಡಿ 4–0–28–3, ರವೀಂದ್ರ ಜಡೇಜ 4–0–33–0, ಶಾರ್ದೂಲ್ ಠಾಕೂರ್ 3.1–0–48–0

ಫಲಿತಾಂಶ: ಚೆನ್ನೈ ಸೂಪರ್ ಕಿಂಗ್ಸ್‌ಗೆ 18 ರನ್‌ಗಳ ಗೆಲುವು

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	231
ಮ್ಯಾಕ್ಸ್‌ವೆಲ್	ಬೆಂಗಳೂರು	176
ಜಾನಿ ಬೆಸ್ಟೊ	ಹೈದರಾಬಾದ್	173

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್ ಪಟೇಲ್	ಬೆಂಗಳೂರು	9
ದೀಪಕ್ ಚಾಹರ್	ಚೆನ್ನೈ	8
ಆವೇಶ್ ಖಾನ್	ಡೆಲ್ಲಿ	8

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ	4	3	1	-	-	6
ಬೆಂಗಳೂರು	3	3	0	-	-	6
ಡೆಲ್ಲಿ	4	3	1	-	-	6
ಮುಂಬೈ	4	2	2	-	-	4
ಹೈದರಾಬಾದ್	4	1	3	-	-	2
ಕೋಲ್ಕತ್ತ	4	1	3	-	-	2
ರಾಜಸ್ಥಾನ	3	1	2	-	-	2
ಪಂಜಾಬ್	4	1	3	-	-	2

* ಬುಧವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಕಮಿನ್ಸ್ ಹೋರಾಟ ವ್ಯರ್ಥ: ಚೆನ್ನೈಗೆ ಗೆಲುವು

ಮುಂಬೈ (ಪಿಟಿಐ): ಎಂಟನೇ ಕ್ರಮಾಂಕದ ಪ್ಯಾಟ್ ಕಮಿನ್ಸ್ ಅವರ ಸ್ಫೋಟಕ ಬ್ಯಾಟಿಂಗ್ ಆತಂಕ ಸೃಷ್ಟಿಸಿದರೂ ಪಟ್ಟು ಬಿಡದ ಚೆನ್ನೈ ಸೂಪರ್ ಕಿಂಗ್ಸ್ ತಂಡ ಪಂದ್ಯ ಗೆದ್ದು ಸಂಭ್ರಮಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಬುಧವಾರ ರಾತ್ರಿ ಚೆನ್ನೈ ನೀಡಿದ 221 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೋಲ್ಕತ್ತ ನೈಟ್ ರೈಡರ್ಸ್ ಹೋರಾಡಿ 18 ರನ್‌ಗಳಿಂದ ಸೋಲೊಪ್ಪಿಕೊಂಡಿತು.

ಋತುರಾಜ್ ಗಾಯಕವಾಡ್ ಮತ್ತು ಫಫ್ ಡುಪ್ಲೆಸಿ ಅವರ ಚೆಂದದ ಜೊತೆಯಾಟದಿಂದಾಗಿ ಚೆನ್ನೈ ಸೂಪರ್ ಕಿಂಗ್ಸ್ ಬೃಹತ್ ಮೊತ್ತ ಪೇರಿಸಿತು.

ಋತುರಾಜ್ (64; 42ಎ) ಮತ್ತು ಡುಪ್ಲೆಸಿ (ಔಟಾಗದೆ 95; 60ಎ) ಮೊದಲ ವಿಕೆಟ್‌ಗೆ 115 ರನ್ ಸೇರಿಸಿದರು.

ಪವರ್‌ಪ್ಲೇನಲ್ಲಿಯೇ ಈ ಜೋಡಿ 54 ರನ್‌ಗಳನ್ನು ಸೇರಿಸಿತು.

ಋತುರಾಜ್ ಕೇವಲ 33 ಎಸೆತಗಳಲ್ಲಿ 50ರ ಗಡಿ ಮುಟ್ಟಿದರು. ಡುಪ್ಲೆಸಿ ಅರ್ಧಶತಕ ಪೂರೈಸಲು 35 ಎಸೆತಗಳನ್ನು ಆಡಿದರು. 12ನೇ ಓವರ್‌ನಲ್ಲಿಯೇ ತಂಡದ ಮೊತ್ತವು ನೂರರ ಗಡಿ ದಾಟಿತು. ನಂತರದ ಓವರ್‌ನಲ್ಲಿ ವರುಣ್ ಚಕ್ರವರ್ತಿ ಎಸೆತವನ್ನು ಋತುರಾಜ್ ಅವರು ಬೌಂಡರಿಗೆರೆ ದಾಟಿಸಲು ಪ್ರಯತ್ನಿಸಿ ಪ್ಯಾಟ್ ಕಮಿನ್ಸ್‌ಗೆ ಕ್ಯಾಚ್ ಆದರು.

ಇನ್ನೊಂದು ಬದಿಯಲ್ಲಿದ್ದ ಡುಪ್ಲೆಸಿ ಬಿರುಸಿನ ಆಟ ಮುಂದುವರಿಸಿದರು. ಅವರಿಗೆ ತಕ್ಕ ಜೊತೆ ನೀಡಿದ ಮೋಯಿನ್ ಅಲಿ (25; 12ಎ) ಕೂಡ ರನ್‌ಗಳಿಕೆಗೆ ವೇಗ ನೀಡಿದರು.

ಸುನಿಲ್ ನಾರಾಯಣ್ ಎಸೆತದಲ್ಲಿ ಅಲಿ ಔಟಾದರು. ನಾಯಕ ಮಹೇಂದ್ರಸಿಂಗ್ ಧೋನಿ (17; 8ಎ) ಎರಡು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರು. ಇತ್ತ ಡುಪ್ಲೆಸಿ ಅಬ್ಬರಿಸಿದರು. 19ನೇ ಓವರ್‌ನಲ್ಲಿ ಧೋನಿ ಔಟಾದರು. ಕೊನೆಯ ಓವರ್‌ನಲ್ಲಿ ಎರಡು ಸಿಕ್ಸರ್ ಸಿಡಿಸಿದ ಡುಪ್ಲೆಸಿ ಶತಕದತ್ತ ದಾಪುಗಾಲಿಟ್ಟರು. ಆದರೆ ಐದನೇ ಎಸೆತದಲ್ಲಿ ಅವರು ಒಂದು ರನ್ ಮಾತ್ರ ಪಡೆಯುವಂತಾಯಿತು.

ರೋಹಿತ್‌ಗೆ ₹ 12 ಲಕ್ಷ ದಂಡ

ಮುಂಬೈ (ಪಿಟಿಐ): ನಿಗದಿತ ಅವಧಿಯಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದ ಕಾರಣ ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ಮಂಗಳವಾರ ಚೆನ್ನೈನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ನಡೆದ ಪಂದ್ಯದಲ್ಲಿ ಮುಂಬೈ ಆರು ವಿಕೆಟ್‌ಗಳಿಂದ ಸೋತಿತ್ತು. ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ರೋಹಿತ್ ಪಡೆ, ಲೆಗ್ ಸ್ಪಿನ್ನರ್ ಅಮಿತ್ ಮಿಶ್ರಾ (24ಕ್ಕೆ 4) ಅವರ ದಾಳಿಗೆ ನಲುಗಿತ್ತು. ನಿಗದಿತ ಓವರ್‌ಗಳಲ್ಲಿ ಒಂಬತ್ತು ವಿಕೆಟ್ ಕಳೆದುಕೊಂಡು 137 ರನ್ ಗಳಿಸಿತ್ತು. ಡೆಲ್ಲಿ ಕ್ಯಾಪಿಲಟ್ಸ್ ಐದು ಎಸೆತಗಳು ಬಾಕಿ ಇರುವಂತೆಯೇ ಜಯದ ದಡ ತಲುಪಿತ್ತು.

'ಮುಂಬೈ ತಂಡವು ನಿಗದಿತ ಅವಧಿಯಲ್ಲಿ ಓವರ್‌ಗಳನ್ನು ಪೂರ್ಣಗೊಳಿಸದ ಕಾರಣ ನಾಯಕ ರೋಹಿತ್ ಶರ್ಮಾ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ. ನಿಧಾನಗತಿಯ ಓವರ್‌ಗೆ ಸಂಬಂಧಿಸಿದಂತೆ ತಂಡವು ಈ ಆವೃತ್ತಿಯಲ್ಲಿ ಮೊದಲ ಬಾರಿಗೆ ಐಪಿಎಲ್ ನಿಯಮಾವಳಿ ಉಲ್ಲಂಘಿಸಿದೆ' ಎಂದು ಇಂಡಿಯನ್ ಪ್ರೀಮಿಯರ್ ಲೀಗ್‌ನ ಹೇಳಿಕೆಯಲ್ಲಿ ತಿಳಿಸಲಾಗಿದೆ.

ರೋಹಿತ್ ಶರ್ಮಾ

ಧೋನಿ ತಂದೆ, ತಾಯಿಗೆ ಕೋವಿಡ್

ಬೆಂಗಳೂರು: ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ, ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಮುನ್ನಡೆಸುತ್ತಿರುವ ಮಹೇಂದ್ರ ಸಿಂಗ್ ಧೋನಿ ಅವರ ತಂದೆ ಹಾಗೂ ತಾಯಿಗೆ ಕೋವಿಡ್ ಸೋಂಕು ಇರುವುದು ದೃಢಪಟ್ಟಿದೆ.

ರಾಂಚಿಯ ಪಲ್ಸ್ ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ ಈ ವಿಷಯವನ್ನು ತಿಳಿಸಿದೆ. 'ಧೋನಿ ಅವರ ತಂದೆ ಮತ್ತು ತಾಯಿಗೆ ಸೋಂಕು ದೃಢಪಟ್ಟಿದ್ದು ಆಸ್ಪತ್ರೆಗೆ ದಾಖಲಿ ಸಲಾಗಿದೆ. ಅವರ ಆಮ್ಲಜನಕದ ಮಟ್ಟ ಸ್ಥಿರವಾಗಿದೆ' ಎಂದು ಆಸ್ಪತ್ರೆ ನೀಡಿರುವ ಹೇಳಿಕೆಯನ್ನು ವಿವಿಧ ಕ್ರೀಡಾ ವೆಬ್‌ಸೈಟ್‌ಗಳು ಉಲ್ಲೇಖಿಸಿ ಟ್ವೀಟ್ ಮಾಡಿವೆ.

ಮಹೇಂದ್ರ ಸಿಂಗ್ ಧೋನಿ

ಒಲಿಂಪಿಕ್ಸ್‌ಗೆ ಪ್ರೇಕ್ಷಕರು: ಜೂನ್‌ನಲ್ಲಿ ನಿರ್ಧಾರ

ಟೋಕಿಯೊ (ಎಪಿ): ಜುಲೈನಲ್ಲಿ ನಡೆಯುವ ಒಲಿಂಪಿಕ್ಸ್‌ಗೆ ಸ್ಥಳೀಯ ಪ್ರೇಕ್ಷಕರಿಗೆ ಅವಕಾಶ ನೀಡುವ ಕುರಿತು ಜೂನ್‌ನಲ್ಲಿ ನಿರ್ಧಾರ ತೆಗೆದುಕೊಳ್ಳುವ ಸಾಧ್ಯತೆಯಿದೆ. ಬೇರೆ ದೇಶಗಳಿಂದ ಬರುವ ಪ್ರೇಕ್ಷಕರಿಗೆ ಈಗಾಗಲೇ ನಿರ್ಬಂಧ ಹೇರಲಾಗಿದೆ. 'ಪ್ರೇಕ್ಷಕರಿಗೆ ಅವಕಾಶದ ಕುರಿತು ಜೂನ್‌ವರೆಗೆ ಹೇಳಲಾಗುವುದಿಲ್ಲ' ಎಂದು ಆಯೋಜನಾ ಸಮಿತಿ ಅಧ್ಯಕ್ಷರು ಹೇಳಿದ್ದಾರೆ.